(SRI H. SIDDAVEERAPPA)

There are so many names, numbering more than 600 and these names have to be typed. During the course of this day it will be done. In the meanwhile Government have passed orders,

ಶ್ರೀ ಜಿ. ಎಲ್. ಕಬಾಡಿ.—ಸ್ಕ್ರೀನಿಂಗ್ ಕಮಿಟಿ ನೇಮಿಸುತ್ತೇವೆಂದು ಹೇಳಿದಿರಿ. ಮೆಡಿಕಲ್ ಕ್ಯಾಸ್ಟ್ ಡಾಕ್ಟರ್ಸ್ ೬೦೦ ಜನ ಲೋಕಲ್ ಕ್ಯಾಂಡಿಡೇಟ್ಸ್ ಇದ್ದಾರೆ ಅವರನ್ನು ಪೂರ್ತಿಯಾಗಿ ಕಂಟಿನ್ಯೂ ಮಾಡುವ ಸಲುವಾಗಿ ಮತ್ತು ಪರ್ಸಂಟೇಜ್ ಕೀಪ್ ಅಪ್ ಮಾಡುವ ಸಲುವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ನಿಯಮಾವಳಿಯಲ್ಲಿ ಏನಾದರೂ ವಿಧಿಯನ್ನು ಸೇರಿಸಿ ಅವರಿಗೆ ಅದನ್ನು ತಿಳಿಸುವುದಕ್ಕೆ ಸಾಧ್ಯವೇ ?

SRI H. SIDDAVEERAPPA —We will examine, We have not taken any decision.

re In is use of gornt Orphomasing in the State.

ಶ್ರೀ ಎಸ್.—ಬಂಗಾರಪ್ಪ.—ಇನ್ನೊಂದು ನಿಲುವಳಿ ಸೂಚನೆ ತಮ್ಮ ಅವಗಾಹನೆಗೆ ಕಳುಹಿಸಿಕೊಟ್ಟಿದ್ದೇನೆ. ೩೦ನೇ ತಾರೀಖು ಪತ್ರಿಕೆಯಲ್ಲಿ ಪ್ರಕಟವಾಗಿರುವಂತೆ ರಾಜ್ಯದಲ್ಲಿರತಕ್ಕ ೨೬೨ ಅನಾಥಾಲಯಗಳಲ್ಲಿ ಲಕ್ಷಾಂತರ ರೂಪಾಯಿ ಹಣ ಲೂಟಿಯಾಗುತ್ತಾ ಇದೆ.

ಅಧ್ಯಕ್ಷರು.—ಅದನ್ನು ಕಾಲಿಂಗ್ ಅಟೆನ್ಷನ್ ನೋಟೀಸ್ ಆಗಿ ಪರಿವರ್ತನೆ ಮಾಡಿಸಿದ್ದೇನೆ. ಮಾನ್ಯ ಸದಸ್ಯರು ನಾಯ್ಡು ಅವರು ಅದರ ಬಗ್ಗೆ ನೋಟೀಸ್ ಕಳುಹಿಸಿದ್ದಾರೆ. ವಿದ್ಯಾ ಮಂತ್ರಿಗಳಿಂ ಸಾಧ್ಯ ಇದ್ದರೆ ನಾಳೆ ದಿವಸ ಹೇಳಿಕೆ ಕೊಡಬಹುದು.

SRI S, M. KRISHNA.—We will have to collect some information. We will make the statement at the earliest possible opportunity.

ಶ್ರೀ ಕಾಗೋಡು ತಿಮ್ಮಪ್ಪ.—ಮಂಗಳೂರು ಕೆಮಿಕಲ್ ಫರ್ಟಿಲೈಸರ್ಸ್ ಕಂಪನಿ ವ್ಯವಹಾರದ ಬಗ್ಗೆ ರೂಲ್ ೩೨೨ರ ಪ್ರಕಾರ ನೋಟೀಸ್ ಕೊಟ್ಟಿದೆ. ಅದರ ಬಗ್ಗೆ ಸರ್ಕಾರದಿಂದ ಹೇಳಿಕೆ ಬಂದಿಲ್ಲ. ಹೇಳಿಕೆ ಕೊಡುವ ಬಗ್ಗೆ ತಾವು ಭರವಸೆ ಕೊಟ್ಟಿದ್ದೀರಿ. ಇದುವರೆಗೆ ಸರ್ಕಾರದಿಂದ ಹೇಳಿಕೆ ಬಂದಿಲ್ಲ. ಅಲ್ಲಿ ಸರ್ವ ಸದಸ್ಯರ ಸಭೆ ನಡೆದಿಲ್ಲ. ಆದುದರಿಂದ ಬಂಡವಾಳ ತೊಡಗಿಸಿರತಕ್ಕ ಸದಸ್ಯರು ವಿವಂಚನೆಗೆ ಒಳಗಾಗಿದ್ದಾರೆ.

ಅಧ್ಯಕ್ಷರು.—ಅದನ್ನು ನೋಡಿಸಿ ಅದನ್ನು ಅಜೆಂಡಾದಲ್ಲಿ ಬೇಗನೆ ಸೇರಿಸುವ ಹಾಗೆ ಮಾಡುತ್ತೇನೆ.

Budget Estimation for 1974-75 Demand for grant.

Demand No 43, 53 and 45.

SRI D. DEVARAJ URS —Madam Speaker, on the recommendation of the Governor I beg to move that a sum not exceeding Rs. 1,36, 00, 000 inclusive of sum granted on account be granted to the Government to defray the charges which will come in course of payment during the period ending 31st March 1975, in respect of Demand No 43, Area Development.

MADAM SPEAKE.—Motion moved.

"That is sum not exceeding Rs. 1, 36, 00, 000 inclusive of sum granted on account be granted to the Government to defray the charges which will come in course of payment during the period ending 31st March 1975, in respect of Demand No. 43, Area Development:

The other Demands Nos. 53 and 54 are also before the House and opened for discussion.

†ಶ್ರೀ ಹೆಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಧ್ಯಕ್ಷಿಣಿಯವರೇ, ಈಗ ಮುಖ್ಯಮಂತ್ರಿಗಳು ಸಭೆಯ ಮುಂದೆ ಇಟ್ಟಿರತಕ್ಕಂಥ ಬೃಹತ್ ನೀರಾವರಿ ಯೋಜನೆಗೆ ಸಂಬಂಧಪಟ್ಟ ಬೇಡಿಕೆಗಳ ಮೇಲೆ ಪ್ರಸ್ತಾಪ ಮಾಡತಕ್ಕ ಕಾಲದಲ್ಲಿ ಪ್ರಥಮವಾಗಿ ನಮ್ಮ ರಾಜ್ಯದಲ್ಲಿ ನೀರಾವರಿ ಪ್ರಗತಿ ಎಷ್ಟು ಸಾಧಿಸಿದ್ದೇವೆ ಕಳೆದ ನಾಲ್ಕು ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ಸಾಧನೆ ಏನು, ಈಗ ಐದನೆ ಪಂಚವಾರ್ಷಿಕ ಯೋಜನೆಯಲ್ಲಿ ನಾವು ಏನು ಗುರಿ ಮುಟ್ಟಬೇಕು ಇವರ ಬಗ್ಗೆ ಮೂಲತಃ ಪ್ರಸ್ತಾಪ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಏತಕ್ಕೆಂದರೆ ಕರ್ನಾಟಕ ರಾಜ್ಯ ನೀರಾವರಿಯಲ್ಲಿ ಅಷ್ಟೊಂದು ಹೆಚ್ಚು ಪ್ರಮಾಣದ ಪ್ರಗತಿಯನ್ನು ಸಾಧಿಸಿಲ್ಲ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಆ ಕಾರಣದಿಂದ ಇವೊತ್ತು ನಮ್ಮ ರಾಜ್ಯವನ್ನು ಬೇರೆ ರಾಜ್ಯಗಳಿಗೆ ಹೋಲಿಸಿ ನೋಡಿದರೆ ನಮ್ಮ ರಾಜ್ಯದ ಪ್ರಗತಿ ಅಷ್ಟೊಂದು ಸಂತೋಷದಾಯಕವಾದ ಪರಿಸ್ಥಿತಿಯಲ್ಲಿ ಇಲ್ಲ. ಇವೊತ್ತು ನಮ್ಮ ಮುಂದೆ ಇಟ್ಟಿರತಕ್ಕ ಬೇಡಿಕೆಯಲ್ಲಿ ಒದಗಿಸಿರತಕ್ಕ ಹಣ ಸಾಕಷ್ಟು ಸಮಾಧಾನಕರವಾಗಿಲ್ಲ ಎಂದು ಇಷ್ಟು ಮಾತ್ರ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

೨-೩೦ P. M.

ಏತಕ್ಕೆಂದರೆ ಕಳೆದ ಸಾರಿ ಹೇಳಿದ್ದೇನೆ. ಐದನೇ ಪಂಚವಾರ್ಷಿಕ ಯೋಜನೆ ಮುಂದಿನ ವರ್ಷ ಪ್ರಾರಂಭವಾಗುತ್ತದೆ. ಹೆಚ್ಚು ಹಣವನ್ನು ಒದಗಿಸುವುದಕ್ಕೆ ಆಲೋಚನೆ ಮಾಡಿ ಸರಿಯಾದ ವ್ಯವಸ್ಥೆ ಮಾಡುತ್ತೀರಾ. ಇವೊತ್ತು ನೀರಾವರಿ ಪ್ರಗತಿ ಸಾಧನೆ ಆಗದೆ ಕರ್ನಾಟಕದಲ್ಲಿ ಯಾವುದೇ ರೀತಿಯಲ್ಲಿ ನಾವು ಪ್ರಗತಿಯನ್ನು ಸಾಧಿಸಲಿಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥ ಮಾತನ್ನು ಪದೇ ಪದೇ ನಾವು ಹೇಳಿದ್ದೇವೆ, ನೀವು ಹೇಳಿದ್ದೀರಿ. ಕಳೆದ ಸಾರಿ ಒದಗಿಸಿದಂಥ ಹಣಕ್ಕೆ ಹೋಲಿಸಿದಾಗ ಇದಕ್ಕೆ ಒಂದೂ ಮುಕ್ಕಾಲು ಅಥವಾ ಎರಡು ಕೋಟಿ ರೂಪಾಯಿ ಮಾತ್ರ ಹೆಚ್ಚು ಇಟ್ಟಿದ್ದೀರಿ. ಇರಿಗೇಷನ್‌ಗೋಸ್ಕರ ಒದಗಿಸಿರತಕ್ಕಂಥ ಹಣ ಇಷ್ಟೆ. ಇವತ್ತು ಬೇರೆ ಕಾಸ್ಟ್ ಎಸ್ಕಲೇಷನ್ ತೆಗೆದುಕೊಳ್ಳುವುದಾದರೆ ಏನ ಹಣವನ್ನು ಇಟ್ಟಿದ್ದೀರಿ ಇವತ್ತು ರೂಪಾಯಿ ಅಪಮೌಲ್ಯವಾಗಿರತಕ್ಕಂಥದ್ದು ಎಷ್ಟೆಂದರೆ ರೂಪಾಯಿನ ಬೆಲೆ ೪೯ ಪೈಸೆಗೆ ಇಳಿದಿದೆಯೆಂದು ಹೇಳುತ್ತಾರೆ. ಈ ಸಂದರ್ಭದಲ್ಲಿ ನಾನು ಇಷ್ಟು ಮಾತ್ರ ಹೇಳುತ್ತೇನೆ. ನೀವು ಇವತ್ತು ಒದಗಿಸಿರತಕ್ಕ ಹಣ ಕೇವಲ ಸ್ಪಿಲ್ ಓವರ್ ಪ್ರಾಜೆಕ್ಟ್‌ಗಳು ಏನು ಇವೆ ಅವುಗಳ ಸಾಮಾನ್ಯ ವೆಚ್ಚವನ್ನು ತುಂಬಲಿಕ್ಕೆ ಸಾಧ್ಯವಿಲ್ಲವೆಂದು ಇಷ್ಟು ಮಾತ್ರ ಹೇಳುತ್ತೇನೆ. ತಾವು ಕರ್ನಾಟಕ ಮುಖ್ಯಮಂತ್ರಿಗಳು ಆದ ಪ್ರಥಮದಲ್ಲಿ ಇದರ ಬಗ್ಗೆ ಹೆಚ್ಚು ಆಸೆ ವಹಿಸಿದ್ದೇವೆಂದು ಅನೇಕ ಭಾಷಣಗಳನ್ನು ಮಾಡಿದ್ದೀರಿ. ಅದನ್ನು ಪುನಃ ನಾನು ಈ ಸಂದರ್ಭದಲ್ಲಿ ಪುನರುಚ್ಚಾರ ಮಾಡುವುದಕ್ಕೆ ಹೋಗುವುದಿಲ್ಲ. ೧೦ ವರ್ಷಗಳಲ್ಲಿ ಎಲ್ಲಾ ನೀರಾವರಿ ಯೋಜನೆಗಳನ್ನು ಮುಗಿಸತಕ್ಕ ದೃಢ ಸಂಕಲ್ಪ ಮಾಡಿದ್ದೇವೆಂದು ತಾವು ಹೇಳಿದ್ದೀರಿ. ಇವತ್ತು ನಾನು ಕೇಳುತ್ತೇನೆ ತಾವು ಒದಗಿಸಿರತಕ್ಕ ೩೨ ಕೋಟಿ ರೂಪಾಯಿಗಳ ಹಣವೇ ಇದೆ, ಇವತ್ತು ನಮ್ಮ ಮುಂದೆ ಇರತಕ್ಕ ಸ್ಪಿಲ್ ಓವರ್ ಪ್ರಾಜೆಕ್ಟ್‌ಗಳು ಏನಿವೆ ಮತ್ತು ಹೊಸದಾಗಿ ಕೆಲವು ಪ್ರಾಜೆಕ್ಟ್‌ಗಳನ್ನು ಕಳೆದ ಸಾರಿ ಏನು ತೆಗೆದುಕೊಂಡಿದ್ದೀರಿ ಇವುಗಳನ್ನು ಮತ್ತು ಈ ಪ್ಲಾನಿನ ಸಂದರ್ಭ ಎಲ್ಲಾ ಮಾಧ್ಯಮ ತರಗತಿಯ ನೀರಾವರಿ ಯೋಜನೆಗಳನ್ನು ಮತ್ತು ಬೃಹತ್ ಪ್ರಮಾಣದ ನೀರಾವರಿ ಯೋಜನೆಗಳೆಲ್ಲವನ್ನೂ ಮುಗಿಸಬೇಕೆಂದು ನೀವು ಇವತ್ತು ಒದಗಿಸಿರತಕ್ಕಂಥ ಹಣದ ಆಧಾರದ ಮೇಲೆ ನಾವು ಮುಗಿಸುತ್ತೇವೆಂದು ಹೊರಟರೆ ಬಹುಶಃ ನನಗನ್ನಿಸುತ್ತದೆ ಇವುಗಳನ್ನು ಮುಗಿಸುವುದಕ್ಕೆ ಇನ್ನು ಸುಮಾರು ೪೦—೫೦ ವರ್ಷಗಳು ಬೇಕಾಗುತ್ತವೆ. ಇವುಗಳೆಲ್ಲಕ್ಕೂ ಒಂದು ಸಹಸ್ರ ಕೋಟಿ ರೂಪಾಯಿಗಳು ಬೇಕಾಗುತ್ತವೆ. ಎಲ್ಲಾ ಯೋಜನೆಗಳನ್ನು ಕಾರ್ಯರೂಪಕ್ಕೆ ತರಬೇಕು ಎನ್ನುವ ಮಾತನ್ನು ಒಂದು ಕಡೆ ಹೇಳಿದ್ದಾರೆ. ಇದರ ಜೊತೆಗೆ ತಮಗೆ ಗೊತ್ತಿದೆ ಪ್ರತಿವರ್ಷ ಇವತ್ತು ಕಾಸ್ಟ್ ಕೂಡ ಹೆಚ್ಚಾಗುತ್ತಾ ಹೋಗುತ್ತಿದೆ. ಇವತ್ತು ಒಂದು ಸಹಸ್ರ ಕೋಟಿ ರೂಪಾಯಿಗಳ ಅಂದಾಜು ಹೇಳಿದರೆ ಬಹುಶಃ ಇನ್ನು ೧೦ ವರ್ಷಗಳಲ್ಲಿ ೧೫೦೦ ಕೋಟಿ ರೂಪಾಯಿಗಳಾದರೂ ಆಗಬಹುದು. ಈ ಪರಿಸ್ಥಿತಿಯಲ್ಲಿ ಇವತ್ತು ನಮ್ಮ ರಾಜ್ಯದ ಪ್ರಗತಿಗೆ ಭದ್ರ ಬುನಾದಿ ಅಡಿಪಾಯವನ್ನು ಹಾಕಬೇಕು ಎನ್ನತಕ್ಕಂಥದ್ದು ಇದ್ದರೆ ಇವತ್ತು ನೀರಾವರಿ ಯೋಜನೆಗಳ ಕಾರ್ಯವನ್ನು ತೀವ್ರಗೊಳಿಸತಕ್ಕಂಥ ಜವಾಬ್ದಾರಿ ಮುಖ್ಯಮಂತ್ರಿಗಳದು ಒಬ್ಬರದೇ ಅಲ್ಲ. ನಾವು ನೀವು ಎಲ್ಲಾ ಕೂಡ ಕೆಲಸ ಮಾಡಬೇಕಾಗುತ್ತದೆಂದು ಮೊದಲನೆಯದಾಗಿ ಸ್ಪಷ್ಟೀಕರಣ ಮಾಡುತ್ತೇನೆ. ಇವತ್ತು ನಮ್ಮ ಯೋಜನೆಗಳಲ್ಲಿ ಕಳೆದ ೨ ವರ್ಷಗಳಲ್ಲಿ ನಡೆಯುತಕ್ಕ ಕೆಲವು ಅಕ್ರಮಗಳು ಏನು ಇವೆ, ತಪ್ಪು ಇದೆ ಅವನ್ನು ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ. ಏತಕ್ಕೆಂದರೆ ಈಗ ಅದರ ಅವಶ್ಯಕತೆಯೂ ಇಲ್ಲ. ಸಂದರ್ಭ ಬಂದಾಗ ಹೇಳುತ್ತೇನೆ. ಏತಕ್ಕೆಂದರೆ ನಮ್ಮ

(ಶ್ರೀ ಹೆಚ್. ಡಿ. ದೇವೇಗೌಡ)

ಕೆಲಸ ಅಧಿಕಾರಿಗಳು ಮಾಡಿದ್ದಾರೆ. ಸರ್ಕಾರ ಒತ್ತಡ ಹಾಕುವ ಸಂದರ್ಭ ಇರುತ್ತದೆ. ಅಂತಹ ಸಮಯದಲ್ಲಿ ತಪ್ಪು ಮಾಡುತ್ತಾರೆ. ಅಧಿಕಾರಿಗಳಿಗೆ ಶಿಕ್ಷೆ ಮಾಡುವ ಸಂದರ್ಭದಲ್ಲಿ ಸರ್ಕಾರ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ ಎಂದು ಸಂದರ್ಭದಲ್ಲಿ ಬಂದಾಗ ಹೇಳುತ್ತೇನೆ. ಇದರ ಬಗ್ಗೆ ಈಗ ಏನೂ ವಿವರಣೆ ಕೊಡುವುದಕ್ಕೆ ಹೋಗುವುದಿಲ್ಲ. ತಮಗೆ ಇಷ್ಟು ಮಾತ್ರ ಕೇಳಲಿಕ್ಕೆ ಇಷ್ಟಪಡುತ್ತೇನೆ. ಒಂದು ಕೇಳಿಕೆಯನ್ನು ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಇಂಥ ಬೃಹತ್ ಸಮಸ್ಯೆಗಳನ್ನು ಚರ್ಚೆ ಮಾಡತಕ್ಕಂಥ ಕಾಲದಲ್ಲಿ ಬಹುಶಃ ಶಾಸನ ಸಭೆಯಲ್ಲಿ ನಮ್ಮ ಕೆಲಸ ನಿರ್ವಹಣೆ ಮಾಡಿದರೆ ಸಾಕು ಎನ್ನುವ ಅಭಿಪ್ರಾಯ ಇಟ್ಟುಕೊಂಡವನು ಎಂದು ಪದೇ ಪದೇ ಹೇಳುತ್ತಿದ್ದೇನೆ. ಹಿಂದೆ ಕಾವೇರಿ ಯೋಜನೆಗಳಿಗೆ ಸಂಬಂಧಪಟ್ಟ ರಿಪೋರ್ಟ್ ಕಮಿಟಿಯಲ್ಲಿ ಒತ್ತಡ ಹಾಕಿ ಮಾಡುತ್ತೇವೆಂದು ಹೇಳಿದ ಕಾಲದಲ್ಲಿ ವಿರೋಧ ಪಕ್ಷಗಳು ಇಂಥ ಬೃಹತ್ ಸಮಸ್ಯೆಯನ್ನು ಬಗೆಹರಿಸುವ ಕಾಲದಲ್ಲಿ ಈ ಸಮಸ್ಯೆಗೆ ಕೋಆಪರೇಷನ್ ಕೊಡುವುದಕ್ಕೆ ಹಿಂದು ಮುಂದು ನೋಡುವುದಿಲ್ಲ ಎಂದು ಹೇಳಿದ್ದೆ. ನಿಮ್ಮ ಮೇಲೆ ಅಪಾದನೆ ಮಾಡುವುದರಿಂದ ಸಮಸ್ಯೆಗಳು ಸರಿಹೋಗುತ್ತದೆ ಎಂಬ ದೃಷ್ಟಿಯನ್ನಿಟ್ಟುಕೊಂಡಿಲ್ಲ. ರಾಷ್ಟ್ರ ಮಟ್ಟದಲ್ಲಿರತಕ್ಕ ಬೃಹತ್ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಅದಕ್ಕೆ ಬೇಕಾದ ಹಣವನ್ನು ಒದಗಿಸುವುದಕ್ಕೆ ಪ್ರತಿಯೊಬ್ಬರೂ ಯೋಚನೆ ಮಾಡಬೇಕು. ಎಲ್ಲರ ಸಹಕಾರ ಪಡೆಯುವುದಕ್ಕೆ ನೀವು ಸಮರ್ಥರು ಇರಬಹುದು. ನೀವು ಹಣವನ್ನು ಒದಗಿಸುವುದಕ್ಕೆ ನಿಮಗೆ ಶಕ್ತಿ ಇರಬಹುದು. ರಿಪೋರ್ಟ್ ಕಮಿಟಿ ಹಿಂದಿನ ಸರ್ಕಾರದವರು ಮಾಡಿದರು. ಅದೇ ರೀತಿ ಮತ್ತೆ ಪುನಃ ಸಲಹೆ ಕೊಡಿ ಎಂದಾಗ ತಿಳಿದಿದನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ೩೨ ಕೋಟಿ ರೂಪಾಯಿಗಳನ್ನು ಏನು ಒದಗಿಸಿದ್ದೀರಿ ಅದು ಕೂಡ ಸಿಕ್ಕುವುದಕ್ಕೆ ಅವಕಾಶವಿಲ್ಲ ಅಂಥ ಸಂದರ್ಭದಲ್ಲಿ ರಿಸೋರ್ಸ್ ಕೂಡ ಹೆಚ್ಚಾಗಬೇಕಾಗುತ್ತದೆ. ಈ ಜವಾಬ್ದಾರಿಯನ್ನು ಮನೆಯ ಎಲ್ಲಾ ಸದಸ್ಯರೂ ಯೋಚನೆ ಮಾಡಬೇಕಾಗುತ್ತದೆ. ನೀವು ಒದಗಿಸಿಕೊಟ್ಟಂಥ ಸೋರ್ಸ್ ಪರಿಸ್ಥಿತಿಯಲ್ಲಿ ಖರ್ಚು ಮಾಡದಿದ್ದಾಗ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುವಂಥ ಜವಾಬ್ದಾರಿ ವಿರೋಧ ಪಕ್ಷಗಳ ಮೇಲೆ ಇದೆ. ಕಳೆದ ಮೊದಲನೆಯ ಪಂಚವಾರ್ಷಿಕ ಯೋಜನೆ ಪ್ರಾರಂಭವಾದಾಗಿನಿಂದ ಸರ್ಕಾರದ ವತಿಯಿಂದ ಖರ್ಚು ಮಾಡಿದ ಹಣದ ಬಗ್ಗೆ ಯೋಚನೆ ಮಾಡಿದರೆ ನೀರಾವರಿ ಯೋಜನೆಗೆ ಯಾವ ತ್ವರಿತ ವೇಗದಲ್ಲಿ ಹಣ ಸಿಗಬೇಕಾಗಿತ್ತೋ ಆ ತ್ವರಿತ ವೇಗದಲ್ಲಿ ಸಿಗಲಿಕ್ಕೆ ಸಾಧ್ಯವಿಲ್ಲದೇ ಇರತಕ್ಕ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಇವತ್ತು ನಾವು ಆಲ್ ಇಂಡಿಯಾ ಪ್ರಗತಿ ಏನು ಸಾಧಿಸಿದೆ ಎಂದು ಹೇಳಬೇಕಾದ ಅವಶ್ಯಕತೆ ಇಲ್ಲ. ಏತಕ್ಕೆಂದರೆ ಕಳೆದ ಸಂದರ್ಭದಲ್ಲಿ ನಾನು ಮಾತನಾಡತಕ್ಕ ಕಾಲದಲ್ಲಿ ಹೇಳಿದಾಗ ಇದನ್ನು ಬಹುಶಃ ಪಾರ್ಲಿಮೆಂಟಿನಲ್ಲಿ ಮಾತನಾಡಿದ್ದರೆ ಚೆನ್ನಾಗಿತ್ತು ಎಂದು ಅನೇಕ ಮಿತ್ರರು ಹೇಳಿದ್ದಾರೆ. ಒಂದು ಮಾತ್ರ ಹೇಳುತ್ತೇನೆ. ಇವತ್ತು ನಮ್ಮ ರಾಷ್ಟ್ರದಲ್ಲಿ ಸುಮಾರು ೧೦೭ ಮಿಲಿಯನ್ ಹೆಕ್ಟೇರ್‌ಗಳಿಗೆ ನೀರನ್ನು ಒದಗಿಸುವುದಕ್ಕೆ ನಮ್ಮ ಪೊಟೆನ್ಷಿಯಲ್ ಇದೆ ಎಂದು ತಜ್ಞರು ಹೇಳಿದ್ದಾರೆ. ಐದನೇ ಪಂಚವಾರ್ಷಿಕ ಯೋಜನೆ ಅಂತ್ಯದೊಳಗೆ ಸಾಧಿಸತಕ್ಕದ್ದು ಕೇವಲ ೪೪. ೨ ಮಿಲಿಯನ್ ಹೆಕ್ಟೇರುಗಳು ಇಷ್ಟಕ್ಕೆ ಮಾತ್ರ ಇರಿಗೇಷನ್ ಪೊಟೆನ್ಷಿಯಲ್ ನಮಗೆ ಸಾಧನೆಯಾಗಿದೆ. ನಾನು ಹೇಳುತ್ತೇನೆ ಇದು ರಾಷ್ಟ್ರಮಟ್ಟದ ವ್ಯಾಪ್ತಿಗೆ ತೆಗೆದುಕೊಂಡು ಲೆಕ್ಕಹಾಕಿದರೆ ಪರಿಸ್ಥಿತಿ ಹೇಗೆ ಇದೆ ಎಂದರೆ ಇನ್ನೂ ಕೂಡ ನಾವು ಇವತ್ತು ನಮ್ಮ ಸಂಪನ್ಮೂಲಗಳನ್ನು ಬೆಳೆಸಿಕೊಳ್ಳತಕ್ಕಂಥದ್ದಕ್ಕೆ ಹಾಗೂ ಇವತ್ತು ಮುಖ್ಯವಾಗಿರತಕ್ಕಂಥ ಜಲಸಂಪತ್ತನ್ನು ಬೆಳೆಸಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ರಾಷ್ಟ್ರಮಟ್ಟದಲ್ಲಿಯೂ ಸಹ ಈ ವೇಗ ಸಾಕಷ್ಟು ಪ್ರಮಾಣದಲ್ಲಿ ಹೋಗುತ್ತಾ ಇಲ್ಲ. ಇವತ್ತು ಇಡೀ ರಾಷ್ಟ್ರದಲ್ಲಿ ಕಾಡುತ್ತಾ ಇರತಕ್ಕಂಥ ಬೃಹತ್ ಸಮಸ್ಯೆ ಎಂದರೆ ಅನ್ನ ಬೇಕು ಎಂದು ಎಲ್ಲಾ ಕಡೆ ಆಂದೋಳನ ನಡೆಯುತ್ತಿದೆ. ಈಗಿನ ಮಂತ್ರಿಗಳ ಜಾಗದಿಂದ ಅವರನ್ನು ಕಿತ್ತು ಬೇರೆ ಮಂತ್ರಿಗಳನ್ನು ಹಾಕಿದರೆ ಅನ್ನವನ್ನು ತಂದು ಕೊಡುವುದಕ್ಕೆ ಆಗುವುದಿಲ್ಲ. We can understand the difficulty. ಯಾವ ಯೋಜನೆಗೆ ಅಗ್ರಸ್ಥಾನ ಕೊಡಬೇಕು ? ಯಾವುದಕ್ಕೆ ಪ್ರಾಶಸ್ತ್ಯ ಕೊಡಬೇಕು ? ರಾಷ್ಟ್ರದಲ್ಲಿ ಉತ್ಪಾದನೆ ಹೆಚ್ಚು ಮಾಡಲಿಕ್ಕೆ ಅನುಗುಣವಾಗಿರತಕ್ಕಂಥ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಹಿಂದೆ ಮಾಡಿರತಕ್ಕ ತಪ್ಪುಗಳನ್ನು ತಿದ್ದಿಕೊಂಡು ನಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡದಿದ್ದರೆ ಬಹುಶಃ ನಾವು ಪ್ರಗತಿಯನ್ನು ಕಾಣುವುದಕ್ಕೆ ಸಾಧ್ಯವಾಗುವುದಿಲ್ಲ. ಏತಕ್ಕೆಂದರೆ ೧೦೭ ಮಿಲಿಯನ್ ಹೆಕ್ಟೇರ್‌ಗಳಿಗೆ ನೀರನ್ನು ಒದಗಿಸುವುದಕ್ಕೆ ನಮ್ಮ ರಾಷ್ಟ್ರದಲ್ಲಿ ಜಲಸಂಪತ್ತು ಇರುವ ಸಂದರ್ಭದಲ್ಲಿ ಕಳೆದ ೨೦ ವರ್ಷಗಳಿಂದ ಸಾಧನೆ ಆಗಿರುವುದು ಕೇವಲ ೪೦. ೬ ಅಂದರೆ ನಾವು ಇನ್ನು ಎಷ್ಟು ದೂರ ಹೋಗಬೇಕೆಂಬುದನ್ನು ಯೋಜನೆ ಮಾಡಬೇಕಾಗುತ್ತದೆ. ಆ ದೃಷ್ಟಿಕೋನದಿಂದ ಹೇಳುತ್ತೇನೆ. ರಾಷ್ಟ್ರಮಟ್ಟದಲ್ಲಿ ಯೋಜನೆಗಳನ್ನು ಮಾಡುವ ರಾಷ್ಟ್ರದ ಪ್ರಮುಖರು ಅದರ ಬಗ್ಗೆ ಹೆಚ್ಚು ಗಮನವನ್ನು ಕೊಡುವುದು ಸೂಕ್ತ ಎಂದು ಹೇಳಿದ್ದಾರೆ. ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿಯೂ ಹೇಳಿದ್ದಾರೆ. ಅದನ್ನು ನಾನು

ಓದಿದ್ದೇನೆ. You have emphasized only on irrigation projects. I agree. But what is the outcome. ಏಕೆ ಎಂದರೆ ನಮ್ಮ ಯೋಜನೆಯನ್ನು ಇವತ್ತು ಕಾರ್ಯರೂಪಕ್ಕೆ ತರಬೇಕು ಎನ್ನತಕ್ಕಂಥ ಜನ ಏನು ಇದ್ದಾರೆ ಈ ಯೋಜನೆಯನ್ನು ನಿರೂಪಣೆ ಮಾಡತಕ್ಕಂಥ ಜನ ಏನು ಇದ್ದಾರೆ ಅವರಿಗೆ ಅರಿವು ಆಗಬೇಕು ಎಂದು ಗಂಭೀರವಾಗಿ ಹೇಳುತ್ತೇನೆ. ಅವರಿಗೆ ಪರಿಜ್ಞಾನ ಇಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತು ರಾಷ್ಟ್ರ ಸಂಪತ್ತು ಕಡಿಮೆಯಾಗಿದೆ ಯಾವ ಯಾವ ಬಾಬುಗಳಿಗೆ ಹಣ ಮಾಡಬೇಕು ಎಂದು ರಾಷ್ಟ್ರನಾಯಕರು ಯೋಚನೆ ಮಾಡಬೇಕಾಗುತ್ತದೆ. ಆ ದಿಶೆಯಲ್ಲಿ ಆ ತತ್ವದಲ್ಲಿ ವಿಫಲರಾಗಿದ್ದಾರೆ. ಇವತ್ತು ನ್ಯಾಶನಲ್ ಆವರೇಜ್‌ಗೆ ಹೋಲಿಸಿಕೊಂಡಾಗ ಕರ್ನಾಟಕದ ಪರಿಸ್ಥಿತಿ ಏನು ಇದೆ ಎನ್ನುವುದನ್ನು ಹೇಳುವುದಾದರೆ ಆಲ್ ಇಂಡಿಯಾ ಅವರೇಜ್ ೨೫ ಪರಸೆಂಟ್ ಇದ್ದರೆ ನಾವು ೧೦ ರಿಂದ ೧೧ ಕ್ಕೆ ಅಂಟಿಗಾಲು ಇಡುತ್ತಿದ್ದೇವೆ. ನಮ್ಮ ಪರಿಸ್ಥಿತಿ ಹೀಗಿದೆ. ೫ನೇ ಪಂಚವಾರ್ಷಿಕ ಯೋಜನೆಯ ಡ್ರಾಫ್ಟ್‌ನಲ್ಲಿ ಒಂದು ಕಡೆ ಹೇಳಿದ್ದಾರೆ. ನಮ್ಮನ್ನು ಏತಕ್ಕೆ ಕಡೆಗಣ್ಣಿನಿಂದ ಕಾಣುತ್ತಾರೆ ಎನ್ನುವುದಕ್ಕೆ ಒಂದು ವಾಕ್ಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

> "The Irrigation Commission has computed that, at present about 13 percent of the cropped area of the drought-affected region is irrigated. This is likely to rise to about 19 percent when the schemes under execution are completed. Even so, as much as 81 per cent of the cropped areas will remain without irrigation, In the drought areas of Gujarat, Madhya Pradesh Maharashtra and Mysore, the position will remain much worse."

ಇದು ಗೌರ್ನಮೆಂಟ್ ಆಫ್ ಇಂಡಿಯಾ ಡಾಕ್ಯುಮೆಂಟ್‌ನಲ್ಲಿ ಇರತಕ್ಕಂಥಾದ್ದು. ಆವೊತ್ತಿನ ದಿವಸ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ಒಂದು ಮಾತು ಹೇಳಿದ್ದಾರೆ. ನಮ್ಮ ಸರ್ಕಾರದ ನಿಲುವು ಈ ರೀತಿ ಇದೆ ಎಂದು ಹೇಳಿದ್ದಾರೆ. ನಮ್ಮ ಸರ್ಕಾರದ ವತಿಯಿಂದ ಈ ಬಗ್ಗೆ ಇರ್ರಿಗೇಷನ್ ಕಮೀಷನರ್‌ಗೆ ಒಂದು ಮೆಮೋರಾಂಡಂ ಸಬ್‌ಮಿಟ್ ಮಾಡಿದ್ದಾರೆ ಅದು ಏನೆಂದರೆ ನಮ್ಮ ರಾಜ್ಯದಲ್ಲಿ ೧೧ ಕೋಟಿ ರೂಪಾಯಿಗಿಂತ ಹೆಚ್ಚಿಗೆ ಇರುವ ಎಲ್ಲಾ ನೀರಾವರಿ ಯೋಜನೆಗಳಿಗೂ ಕೇಂದ್ರ ಸರ್ಕಾರದವರೇ ಹಣವನ್ನು ಕೊಟ್ಟು ಅದನ್ನು ಮಾಡಿಕೊಡಬೇಕು ಎಂದು ಅವರ ಮುಂದೆ ಇಟ್ಟಿದ್ದಾರೆ. ಅದೇ ರೀತಿಯಾಗಿ ಆವೊತ್ತು ಇರ್ರಿಗೇಷನ್ ಕಮೀಷನ್‌ನೂ ಕೂಡ ಈ ಬಗ್ಗೆ ತಮ್ಮ ಅಭಿಪ್ರಾಯವನ್ನು ಸಹ ವ್ಯಕ್ತಪಡಿಸಿದ್ದಾರೆ. ಇದನ್ನು ಪೂರ್ವಭಾವಿಯಾಗಿ ನಾನು ಏತಕ್ಕೆ ಪ್ರಸ್ತಾಪಿಸುತ್ತಿದ್ದೇನೆಂದರೆ ಆವೊತ್ತು ನಮ್ಮ ಕರ್ನಾಟಕ ರಾಜ್ಯ ಈ ನೀರಾವರಿ ಯೋಜನೆಯಲ್ಲಿ ಹಿಂದೆ ಬಿದ್ದಿದೆ ಎಂದು ಅರಿತಿದ್ದರೂ ಕೂಡ ನಮಗೆ ಯಾವ ಒಂದು ಅಡ್ಡೆ ಭಾವನೆ ಕೇಂದ್ರ ಸರ್ಕಾರದವರು ತೋರಿಸುತ್ತಿದ್ದಾರೆ ಎಂದರೆ ನಮ್ಮ ರಾಜ್ಯಕ್ಕೆ ನೀರಾವರಿ ಯೋಜನೆಗೆ ಸಾಕಷ್ಟು ಹಣ ಕೊಡುತ್ತಾ ಇಲ್ಲ ಎನ್ನುವುದೇ ನನ್ನ ಅಪವಾದ. ಈ ಬಗ್ಗೆ ಇರ್ರಿಗೇಷನ್ ಕಮೀಷನ್ ೧೯೭೨ ವಾಲ್ಯೂಂ ಒಂದರಲ್ಲಿ ಈ ರೀತಿ ಹೇಳಿದ್ದಾರೆ. ಅದನ್ನು ನಾನು ಓದುತ್ತೇನೆ.
ಅದು ಈ ರೀತಿ ಇದೆ —

Report of the Irrigation Commission 1972 Vol. I Page 259
Financing of Large Irrigation Schemes.—

> " .... We would, therefore, suggest that at the time of according approval to a large irrigation scheme, irrigating say, over two hundred thousand hectares, it should be examined whether the State Government is in a position to execute the scheme at the optimum pace keeping in view its financial resources and its existing commitments to other schemes, If not, the State should negotiate with the Union Government for special financial arrangements for the scheme .... "

"Financing of Irrigation Schemes in Drought Affected areas"

(SRI H. D. DEVEGOWDA)

"...... The people of these areas are generally economically backward. Social justice, therefore requires that they should receive special attention"

ಇದರ ಬಗ್ಗೆ ಇರ್ರಿಗೇಷನ್ ಕಮೀಷನರ್ ಕೂಡ ಸ್ಪಷ್ಟೀಕರಣ ಮಾಡಿದ್ದಾರೆ. ಈ ಒಂದು ಡ್ರಾಟ್ ಏರಿಯಾದಲ್ಲಿ ಬರತಕ್ಕಂಥ ಜನತೆಗೆ ಅದರಲ್ಲೂ ಕೂಡ ಬ್ಯಾಕ್‌ವರ್ಡ್‌ನಲ್ಲಿ ಇರತಕ್ಕಂಥ ಜನತೆಗೆ ಅವರ ಪರಿಸ್ಥಿತಿಯನ್ನು ಸುಧಾರಿಸಲು ಅವರ ಪ್ರಾತಿಗೋಸ್ಕರವಾಗಿ ಸ್ಪೆಷಲ್ ಅಸಿಸ್ಟೆನ್ಸ್ ಆದರೂ ಕೊಟ್ಟು ಆ ಕೆಲಸವನ್ನು ಮಾಡಿಕೊಡಬೇಕು ಎಂದು ಇರ್ರಿಗೇಷನ್ ಕಮೀಷನರ್ ಕೂಡ ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ಇಷ್ಟು ಮಾತ್ರ ಹೇಳುತ್ತೇನೆ, ಈವೊತ್ತು ಕೇಂದ್ರ ಸರ್ಕಾರದವರು ೫ ನೇ ಪಂಚವಾರ್ಷಿಕ ಯೋಜನೆಗಳಿಗೆ ೮೬೦ ಕೋಟಿ ರೂಪಾಯಿಗಳು ಆಗುತ್ತದೆ ಎಂದು ಏನು ಹೇಳಿದ್ದಾರೆ, ಅದರಲ್ಲಿ ಕಾವೇರಿ ಪ್ರಾಜೆಕ್ಟ್ ಇನ್‌ಕ್ಲೂಡ್ ಆಗುವುದಿಲ್ಲ ಎಂದು ನಮ್ಮ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಆ ರೀತಿ ಇನ್‌ಕ್ಲೂಡ್ ಆಗದೇ ಹೋದರೆ ಸಂತೋಷ ಅದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಕೇಂದ್ರ ಸರ್ಕಾರದ ಈ ಪ್ಲಾನ್‌ನಿಂದ ನಾವು ಸಮಾಧಾನ ಪಟ್ಟುಕೊಳ್ಳಬೇಕಾಗಿಲ್ಲ. ಏತಕ್ಕೆಂದರೆ Unless it is technically cleared by the Central Water and Power Commission ನಮಗೆ ಈವೊತ್ತಿನ ದಿವಸ ಅಷ್ಟು ಹಣ ಸಿಕ್ಕಲಿಕ್ಕೆ ಸಾಧ್ಯವಿಲ್ಲ. ಈ ನೀರಾವರಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರತಕ್ಕಂಥ ಕಾಲದಲ್ಲಿ ಕೇಂದ್ರ ಸರ್ಕಾರದವರು ನಮ್ಮ ರಾಜ್ಯಕ್ಕೆ ಸಾಕಷ್ಟು ಅಸಿಸ್ಟೆನ್ಸ್ ಕೊಟ್ಟಿಲ್ಲ ಎನ್ನುವುದೇ ನನ್ನ ನೇರವಾದ ಅಪಾದನೆ. ಇದನ್ನು ರಾಜಕೀಯಕ್ಕೆ ಬಳಸಿಕೊಳ್ಳುತ್ತಾರೆ ಎಂದು ಯಾರೂ ಇಷ್ಟು ತೀರ್ಮಾನಿಸಿಕೊಳ್ಳಬಾರದು. ಏತಕ್ಕೆಂದರೆ ಕಳೆದ ೨೦ ವರ್ಷಗಳಿಂದಲೂ ನಮ್ಮ ರಾಜ್ಯದಲ್ಲಿ ಏನು ಈ ಬಗ್ಗೆ ಪ್ರಗತಿ ಸಾಧನೆಯಾಗಿದೆ ಎನ್ನುವುದನ್ನು ನಾನು ಈ ಮನೆಯಲ್ಲಿ ಹೇಳುತ್ತಲೇ ಬಂದಿದ್ದೇನೆ. ಕಳೆದ ಸಾರಿ ಬಜೆಟ್ ಅಧಿವೇಶನದಲ್ಲಿ ಮೇಜರ್ ಇರ್ರಿಗೇಷನ್ ಬಗ್ಗೆ ಮಾತನಾಡತಕ್ಕಂಥ ಕಾಲದಲ್ಲಿ ಎಲ್ಲಾ ವಿವರಣೆಗಳನ್ನು ಅಂಕಿಅಂಶಗಳ ಸಮೇತ ಈ ಸಭೆಯ ಮುಂದೆ ಇಟ್ಟು ಹೇಳಿದ್ದೇನೆ. ಈವೊತ್ತು ಇಷ್ಟು ಮಾತ್ರ ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ತಾವು ಈ ಬಗ್ಗೆ ಕೇಂದ್ರ ಸರ್ಕಾರದಿಂದ ಏನು ನಿರೀಕ್ಷಣೆ ಮಾಡುತ್ತೀದ್ದೀರಾ ಎಂದು ಒಂದು ಕಡೆ ಹೇಳಿದ್ದೀರಿ, I am expecting about Rs. 90 crores special assistance for the three projects. ಎಂದು ತಾವು ಡೆಲ್ಲಿಗೆ ಹೋಗಿ ಬಂದಮೇಲೆ ಶ್ರೀ ಡಿ. ಪಿ. ಧರ್ ಅವರನ್ನು ಕಂಡು ಹೇಳಿದ್ದೀನೆ ೯೦ ಕೋಟಿ ರೂಪಾಯಿ ವಿಶೇಷ ಸಹಾಯ ಸಿಕ್ಕುವ ಪರಿಸ್ಥಿತಿ ಇದೆ ಎಂದು ಹೇಳಿದ್ದೀರಿ. ಅದರಲ್ಲೂ ಕೂಡ ಕೃಷ್ಣಾ ಪ್ರಾಜೆಕ್ಟ್‌ಗೆ ಎಷ್ಟು ಹಣ ಬೇಕಾದರೂ ಒದಗಿಸುತ್ತಾರೆ ಎಂದು ಹೇಳಿದ್ದೀರಿ. ಅವರು ಹೇಳಿತಕ್ಕಂಥ ವಿಷಯ ವೃತ್ತ ಪತ್ರಿಕೆಗಳಲ್ಲಿ ವರದಿಯಾಗಿದೆ. ಇದು ಅಸತ್ಯವಾಗಿದ್ದರೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಡ್ರಾಟ್ ಸಂದರ್ಭದಲ್ಲಿ ನಾನು ಒಂದು ಪ್ರೆಸ್ ಸ್ಟೇಟ್‌ಮೆಂಟ್ ಮಾಡಿದ್ದೇನೆ ಅಲ್ಲದೆ ಪ್ರಧಾನ ಮಂತ್ರಿಗಳಿಗೂ ಕೂಡ ಒಂದು ಪತ್ರ ಬರೆದಿದ್ದೇನೆ. ಡ್ರಾಟ ಏರಿಯಾದಲ್ಲಿರತಕ್ಕಂಥ ಜನತೆಯ ಸಂಕಷ್ಟ ನಿವಾರಣೆಗೆ ಈ ಒಂದು ಕೃಷ್ಣಾ ಪ್ರಾಜೆಕ್ಟನ್ನು ನ್ಯಾಷನಲ್ ಪ್ರಾಜೆಕ್ಟನ್ನಾಗಿ ಮಾಡಬೇಕು ಎಂದು ಪತ್ರ ಬರೆದಿದ್ದೇನೆ. ಈ ಸಭೆಯಲ್ಲಿ ಈ ಬಗ್ಗೆ ಒಂದು ನಿರ್ಣಯವನ್ನೂ ಕೂಡ ಮಾಡಿದ್ದಾರೆ. ಈವೊತ್ತು ನಮ್ಮ ರಾಜ್ಯದಲ್ಲಿರುವ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಈ ಬೃಹತ್ ಪ್ರಮಾಣದ ನೀರಾವರಿ ಯೋಜನೆಗಳನ್ನು ಮುಗಿಸಲಿಕ್ಕೆ ಸಾಧ್ಯವಿಲ್ಲ. ಏತಕ್ಕೆಂದರೆ ಇದುವರಗೆ ಇದರ ಬಗ್ಗೆ ಯಾವರೀತಿಯಾದ ಒಂದು ಪ್ರತಿಕ್ರಿಯೆಯೂ ಕೂಡ ಕೇಂದ್ರ ಸರ್ಕಾರದಿಂದ ಕಂಡು ಬಂದಿತ್ತು ಇಲ್ಲ. ಆದುದರಿಂದ ನಾನು ಕೇಳುತ್ತೇನೆ. ಈ ಬಗ್ಗೆ ಅವರು ಮಾಡಿರುವ ಸಹಾಯ ವಾದವರೂ ಏನು ಎಂದು ಅವರು ಗುಲ್ಬರ್ಗಾಕ್ಕೆ ಬಂದಾಗ ಪತ್ರಿಕಾ ಪ್ರತಿನಿಧಿಗಳು ಪ್ರಶ್ನೆ ಮಾಡಿದರು. ನೀವು ಇದನ್ನು ನ್ಯಾಷನಲ್ ಪ್ರಾಜೆಕ್ಟ್ ಎಂದು ಬೇಕಾದರೂ ಕರೆಯಿರಿ ಏನು ಬೇಕಾದರೂ ಕರೆಯಿರಿ. ಯಾವ ಹೆಸರಿನಿಂದಲಾದರೂ ಕರೆಯಿರಿ ಈ ಕೆಲಸವನ್ನು ತೀವ್ರಗತಿಯಲ್ಲಿ ಮಾಡಿಸುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡಿ ಮುಗಿಸಬೇಕು. ಪ್ರಧಾನ ಮಂತ್ರಿಗಳೂ ಕೂಡ ಹೇಳಿದ್ದಾರೆ. ಆದರೆ ನಾನು ಕೇಳುತ್ತೇನೆ ಈವೊತ್ತು ಇದಕ್ಕೆ ೨ ಕೋಟಿ ರೂಪಾಯಿಗಳನ್ನು ಏನು ಇಟ್ಟಿದ್ದೀರಿ, ಅದರಲ್ಲಿ ಕಾವೇರಿ ಬೇಸಿನ್ ಒಂದನ್ನೇ ತೆಗೆದುಕೊಂಡರೆ ಆ ಕೆಲಸಕ್ಕೆ ೬೦೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈ ಬಗ್ಗೆ ಶ್ರೀ ಖಾನ್ ಹೆಚ್. ಎಂ. ಚೆನ್ನಬಸಪ್ಪನವರು ಲೆಕ್ಕಾಚಾರ ಹಾಕಿ ಬಹುದು. ಈವೊತ್ತಿನ ದಿವಸ ಕೃಷ್ಣಾ ನದಿ ನೀರಿನ ಹಂಚಿಕೆ ಬಗ್ಗೆ ಅವರ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾ ಇಲ್ಲ. ಈ ಸಭೆಯಲ್ಲಿ ಅದು ಚರ್ಚೆಗೆ ಬಂದಂಥ ಕಾಲದಲ್ಲಿ ಆ ಬಗ್ಗೆ ಹೇಳುತ್ತೇನೆ ಈವೊತ್ತು ಆ ಚರ್ಚೆ ಬೇಡ. ನಾನು ಇಷ್ಟು ಮಾತ್ರ ಹೇಳುತ್ತೇನೆ ಈವೊತ್ತು ನಮಗೆ ನೀರನ್ನು ಏನು ಕೊಟ್ಟಿದ್ದಾರೆ. ಅದನ್ನು ಉಪಯೋಗ ಮಾಡಿಕೊಳ್ಳಬೇಕು ಎಂದರೂ ಕೂಡ ೬೦೦ ಕೋಟಿ ರೂಪಾಯಿಗಳಾದರೂ ಬೇಕಾಗುತ್ತದೆ.

ವಂತೆ ಇದು ೨೫ ವರ್ಷಗಳ ನಂತರ ಪರಿಶೀಲನೆಗೆ ಬರಬಹುದು ಎಂದು ಹೇಳಿದ್ದಾರೆ. ಈ ೨೫ ವರ್ಷಗಳ ಕಾಲದಲ್ಲಾದರೂ ಕೂಡ ಅದನ್ನು ಹೇಗೆ ಉಪಯೋಗ ಮಾಡಿಕೊಳ್ಳಬೇಕು ಎನ್ನುವುದನ್ನು ಆಲೋಚನೆ ಮಾಡಬೇಡವೇ ? ನಮ್ಮ ರಾಜ್ಯದ ಸಂಪನ್ಮೂಲಗಳನ್ನು ಹೆಚ್ಚು ಮಾಡಿಕೊಳ್ಳಬೇಕು ಎನ್ನುವುದನ್ನು ಆಲೋಚನೆ ಮಾಡಬೇಡವೇ ? ಇವೊತ್ತಿನ ದಿವಸ ಹಿಂದುಳಿದ ಪ್ರದೇಶಗಳನ್ನು ಅಭಿವೃದ್ಧಿ ಮಾಡಬೇಕು ಎನ್ನುವುದರ ಬಗ್ಗೆ ಮಾತನಾಡುತ್ತಿರುವಾಗ ಈ ನೀರಾವರಿ ಯೋಜನೆಯಿಂದ ನಮ್ಮ ರೈತರು ವ್ಯವಸಾಯ ಮಾಡಬೇಕಾದ ಕಾಲದಲ್ಲಿ ೫ ರೂಪಾಯಿ ಹೆಚ್ಚು ತೆರಿಗೆ ಹಾಕಿದರೆ ಅದು ಮುಖ್ಯವಲ್ಲ. ನೀವು ಅವರಿಗೆ ನೀರಾವರಿ ಮಾಡಿಕೊಟ್ಟರೆ, ಅವರು ೫ ರೂಪಾಯಿ ಕೊಡುವುದಕ್ಕೆ ಹಿಂದೆ ಬೀಳುವುದಿಲ್ಲ. ಈ ರೀತಿ ನಾನು ಹೇಳಿದರೆ ಇದರಲ್ಲಿ ರಾಜಕೀಯ ಪ್ರಸ್ತಾಪ ಮಾಡಬೇಕಾದ ಅವಶ್ಯಕತೆ ಇಲ್ಲ. ಇವೊತ್ತು ಇಂತಹ ಒಂದು ಪ್ರಮುಖವಾದ ಸಮಸ್ಯೆ ನಮ್ಮ ರೈತರಿಗೆ. ಅವರ ಭೂಮಿಗೆ ಬೇಕಾದಂಥ ನೀರನ್ನು ಒದಗಿಸಿಕೊಡತಕ್ಕಂಥಾದ್ದು ನಮ್ಮ ಮೂಲ ಪ್ರಶ್ನೆ ಇರತಕ್ಕಂಥಾದ್ದು.

ಇವೊತ್ತು ರಾಜ್ಯ ಸರ್ಕಾರಕ್ಕೆ ಶಕ್ತಿ ಇಲ್ಲದಿರುವಾಗ ವಿಶೇಷ ರೀತಿಯ ಸಹಾಯ ಮಾಡುವ ಬಗ್ಗೆ ಕೇಂದ್ರ ಸರ್ಕಾರ ಕೂಡ ಯೋಜನೆ ಮಾಡಬೇಕಾಗುತ್ತದೆ. ಕೆಲವರು ರಾಜಕೀಯವಾಗಿ ಹಿಂದಿನ ಸರ್ಕಾರಗಳು ಈ ಬಗೆ ಏನೂ ಮಾಡಲಿಲ್ಲ ಎಂದು ಹೇಳಬಹುದು, ಅದೇ ಮಾತನ್ನು ಆ ಕಡೆಯವರು ಈ ಕಡೆ ಕುಳಿತಿದ್ದಾಗ ಹೇಳಿದ್ದಾರೆ. ಮುಖ್ಯವಾಗಿ ಇಂದು ಎಲ್ಲರೂ ಹೇಳಬಹುದು ಏನೆಂದರೆ, ಈ ರಾಜ್ಯದಲ್ಲಿರುವ ಎಲ್ಲ ಭೂಮಿಗೂ ನೀರಿನ ಸೌಕರ್ಯ ಸಿಗಬೇಕು ಎಂದು. ಮಾಜಿ ಮಂತ್ರಿಗಳೊಬ್ಬರು ಇಂದು ಬೆಳಿಗ್ಗೆ ಹೇಳುತ್ತಿದ್ದರು, ಏನೆಂದರೆ, ಈ ರಾಜ್ಯದಲ್ಲಿ ಉಳತಕ್ಕ ಎಲ್ಲ ಭೂಮಿಗೂ ನೀರನ್ನು ಒದಗಿಸುವುದೇ ನಮ್ಮ ಉದ್ದೇಶವಾಗಿದೆ ಎಂದು. ಆದರೆ ಉಳುವ ಭೂಮಿ ಎಷ್ಟಿದೆ ಎಂಬುದು ಅವರಿಗೆ ಗೊತ್ತಿಲ್ಲ. ಮುಖ್ಯವಾಗಿ ನೀರಾವರಿಗೆ ಪ್ರಾಶಸ್ತ್ಯ ಕೊಡಬೇಕು ಎಂಬ ಆಶೆ ಇಂದು ಎಲ್ಲರಿಗೂ ಇದೆ. ಆದರೆ ಅದರ ಬಗ್ಗೆ ಭೂಮಿಕೆ ಇನ್ನೂ ತಯಾರಾಗಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.— ಈಗ ಕೃಷ್ಣಾ ನದಿ ನೀರಿನ ಹಂಚಿಕೆಯ ಬಗ್ಗೆ ನಮ್ಮ ಪಾಲಿಗೆ ಎಷ್ಟು ನೀರು ಬಂದಿದೆ ಆ ಬಗ್ಗೆ ನಮಗೆ ಕೊರತೆಯಾಗಿದೆ ಎಂಬುದಕ್ಕೆ ಕಾಗು ನಮ್ಮ ಕರ್ನಾಟಕ ಜನರಲ್ಲಿದೆ ಮತ್ತು ಇದರ ಬಗ್ಗೆ ಜನರು ಇನ್ನೂ ಒಂದು ಮಾತನ್ನು ಏನು ಹೇಳುತ್ತಾರೆಂದರೆ, ಹಿಂದಿನ ಮುಖ್ಯ ಮಂತ್ರಿಗಳು ಕಾಲದಲ್ಲಿ ಒಂದು ಬೃಹತ್ತಾದ ಕಾರ್ಯಕ್ರಮ ಕೈಕೊಂಡಿದ್ದರೆ ... ...

ಶ್ರೀ ಎಚ್. ಡಿ. ದೇವೇಗೌಡ.— ನಾನು ಆ ಬಗ್ಗೆ ಈಗ ಮಾತನಾಡುವುದಕ್ಕೆ ಹೋಗುವುದಿಲ್ಲ. ಮುಂದೆ ಒಂದು ದಿವಸ ಆ ಬಗ್ಗೆ ಇಲ್ಲಿ ಚರ್ಚೆಯಾಗುವುದಿದೆ. ಆ ಸಂದರ್ಭದಲ್ಲಿ ಅದನ್ನು ಹೇಳುತ್ತೇನೆ. ಆದರೆ ಆ ಬಗ್ಗೆ ಇಷ್ಟು ಮಾತ್ರ ಹೇಳುತ್ತೇನೆ ಏನೆಂದರೆ ಈಗ ನಮ್ಮ ಪಾಲಿಗೆ ಬಂದಿರುವ ನೀರನ್ನು ಉಪಯೋಗಿಸಿಕೊಳ್ಳಬೇಕಾದರೂ ಸಹ ೬೦೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈ ಬಗ್ಗೆ ಕೇಂದ್ರ ಸರ್ಕಾರದವರು ನಮ್ಮ ಕೈ ಬಲಪಡಿಸುತ್ತಿಲ್ಲ. ಶ್ರೀಮಾನ್ ನಿಜಲಿಂಗಪ್ಪನವರು ೬ ವರ್ಷಗಳ ಕಾಲ ಮಂತ್ರಿಗಳಾಗಿದ್ದರು. ಬೆಟರ್‌ಮೆಂಟ್ ಲೆವಿ ಬಗ್ಗೆ ಈ ಹಿಂದೆ ಒಂದು ಕಮಿಟಿಯನ್ನು ಶ್ರೀಮಾನ್ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ನೇಮಕ ಮಾಡಲಾಗಿತ್ತು. ಅವರು ಆ ಬಗ್ಗೆ ಒಂದು ರಿಪೋರ್ಟ್ ಸಹ ಕೊಟ್ಟಿದ್ದಾರೆ. ಆ ರಿಪೋರ್ಟನ್ನು ಜಾರಿಗೆ ತರುವ ವಿಚಾರದಲ್ಲಿ ಈಗಿನ ಮುಖ್ಯಮಂತ್ರಿಗಳು ಒಂದು ಘೋಷಣೆ ಮಾಡಿದ್ದಾರೆ ತೆರಿಗೆ ಹೆಚ್ಚು ಮಾಡುವ ಬಗ್ಗೆ ಆ ರಿಪೋರ್ಟನ್ನು ಉಪಯೋಗ ಮಾಡಿಕೊಳ್ಳುವುದರ ಜೊತೆಗೆ ಕೇಂದ್ರ ಸರ್ಕಾರದವರ ನೆರವನ್ನು ರಾಜ್ಯ ಸರ್ಕಾರದವರು ತೆಗೆದುಕೊಳ್ಳಬೇಕಾಗುತ್ತದೆ ಮತ್ತು ರಾಜ್ಯ ಸರ್ಕಾರದವರು ಸಹ ಈ ಬಾಬಿಗೆ ಹಣವನ್ನು ಕಾದಿರಿಸಬೇಕಾಗುತ್ತದೆ ಈ ರೀತಿ ಮಾಡದೇ ಎಲ್ಲ ಖರ್ಚನ್ನು ರೈತರ ಮೇಲೆ ಹಾಕುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದವರು ಏನಾದರೂ ಬಗ್ಗೆ ನಮಗೆ ಸಹಾಯ ಮಾಡದಿದ್ದರೆ ನಾವೆಲ್ಲ ಕೇಂದ್ರದ ವಿರುದ್ಧ ಬಂಡೇಳಬೇಕಾಗುತ್ತದೆ ಈ ವಿಚಾರದಲ್ಲಿ ಕಾಂಗ್ರೆಸ್ (ಆರ್) ಕಾಂಗ್ರೆಸ್ (ಒ) ಪಿ ಎಸ್. ಪಿ. ಎಂಬ ಪಕ್ಷಭೇದ ಬೇಡ ನಾವೆಲ್ಲರೂ ಸೇರಿಕೊಂಡು ಸಾಕಷ್ಟು ನೆರವನ್ನು ಅವರು ಕೊಡದಿದ್ದರೆ ದಿಗ್ಬಂಧನ ಹಾಕುತ್ತೇವೆಂದು ಹೇಳಬೇಕಾಗುತ್ತದೆ. ಹಿಂದಿನ ಮುಖ್ಯಮಂತ್ರಿಗಳು ಈಗಿನ ಪ್ರಧಾನ ಮಂತ್ರಿಗಳನ್ನು ಇಲ್ಲಿಗೆ ಕರೆಸಿಕೊಂಡು ಅವರನ್ನು ಚಿನ್ನದಲ್ಲಿ ತೂಕ ಮಾಡಿದರು, ಆದರೂ ಅವರನ್ನು ಒಲಿಸಿ ಕೊಳ್ಳುವುದಕ್ಕಾಗಲಿಲ್ಲ ನಂತರ ನಿಮ್ಮ ಅಧಿಕಾರದಲ್ಲಿ ಅವರನ್ನು ಬೆಂಗಳೂರಿಗೆ ಕರೆಸಿ ಲಾಲ್‌ಬಾಗಿನಲ್ಲಿ ಅವರ ಹೆಸರಿನಲ್ಲಿ ಹೂವಿನ ಗಿಡಗಳನ್ನು ನೆಡೆಸಿದಿರಿ. ಆದರೂ ಸಹ ಅವರಿಗೆ ನಮ್ಮ ರಾಜ್ಯದ ಬೃಹತ್ ನೀರಾವರಿ ಯೋಜನೆಗಳಿಗೆ ಸಹಾಯ ಮಾಡಬೇಕು ಎಂಬ ಬಗ್ಗೆ ಮನವರಿಕೆಯಾಗಲಿಲ್ಲ. ಈಗ ಹೊಸ ಸರ್ಕಾರ ಅಧಿಕಾರಕ್ಕೆ ಬಂದಿದೆ ಹೊಸ ವಾತಾವರಣ ನಿರ್ಮಾಣವಾಗಿದೆ ನಮ್ಮ ಎಲ್ಲ ಗುರಿಗಳನ್ನು ಮುಟ್ಟುವುದಕ್ಕೆ ಕೇಂದ್ರ ಸರ್ಕಾರದವರು ಸಹಾಯ ಮಾಡುತ್ತಾರೆ ಎನ್ನುತಕ್ಕ ಮಾತನ್ನು ತಾವು ಕಳೆದ ಎರಡು ವರ್ಷಗಳಿಂದ ಹೇಳುತ್ತಲೇ ಇದ್ದೀರಿ, ಈ ಒಂದು ಆಶಾಜೀವಿಗೆಯನ್ನು ಜನತೆಗೆ ಕೊಟ್ಟುಕೊಂಡು ಬಂದರೂ ಸಹ ತಮಗೆ ಕೇಂದ್ರದಿಂದ ಹಣ ಸಹಾಯ ಪಡೆಯುವುದಕ್ಕೆ ಸಾಧ್ಯ

(ಶ್ರೀ ಹೆಚ್. ಡಿ. ದೇವೇಗೌಡ)

ವಾಗಿಲ್ಲ. ಕಳೆದ ಪಾರ್ಲಿಮೆಂಟ್ ಚುನಾವಣೆಯಲ್ಲಿ ನಮ್ಮ ರಾಜ್ಯದಲ್ಲಿ ಒಂದು ಇತಿಹಾಸವೇ ನಿರ್ಮಾಣವಾಯಿತು. ಏನೆಂದರೆ ೨೭ ಸೀಟ್‌ಗಳ ಪೈಕಿ ಎಲ್ಲವೂ ಆಡಳಿತ ಪಕ್ಷಕ್ಕೆ ಹೋಯಿತು. ಇದನ್ನು ಯಾರೂ ಸಹ ನಿರೀಕ್ಷೆ ಮಾಡಿರಲಿಲ್ಲ. ಆಡಳಿತ ಪಕ್ಷದವರೂ ಸಹ ಅವರಿಗೆ ೧೮ ಸೀಟುಗಳು ಬರಬಹುದು ಎಂದು ಲೆಕ್ಕ ಹಾಕಿದ್ದರು. ಆದರೂ ಜನರು ಶ್ರೀಮತಿ ಇಂದಿರಾಗಾಂಧಿಯವರನ್ನು ನಂಬಿಕೊಂಡು, ಅವರ ಮಾತಿನಲ್ಲಿ ಅಚಲ ವಿಶ್ವಾಸ ಇಟ್ಟುಕೊಂಡು ತಮ್ಮ ಪಕ್ಷದವರಿಗೇ ಓಟು ಕೊಟ್ಟರು. ಮತ್ತು ತಮ್ಮ ಪಕ್ಷದವರು ಸಮರ್ಥ ರಾಜಕಾರಣಿಗಳು ಎಂದು ನಂಬಿ ಬೇರೆ ಪಕ್ಷದ ಅಭ್ಯರ್ಥಿಗಳನ್ನು ಸಂಪೂರ್ಣವಾಗಿ ತಿರಸ್ಕಾರ ಮಾಡಿದರು. ಆದರೆ ಇವೊತ್ತು ಏನಾಗಿದೆ ? ಈ ಬಗ್ಗೆ ಕೇಂದ್ರ ಸರ್ಕಾರದವರ ಕಣ್ಣನ್ನು ತೆರೆಸುವ ವಿಚಾರದಲ್ಲಿ ಪಾರ್ಲಿಮೆಂಟ್ ಸದಸ್ಯರು ಏನು ಕೆಲಸ ಮಾಡಿದ್ದಾರೆ ? ಪರಿಸ್ಥಿತಿ ಇದೇ ರೀತಿ ಮುಂದುವರಿದರೆ ಪ್ರಧಾನ ಮಂತ್ರಿಗಳನ್ನು ಈ ಊರಿಗೆ ಬರಬೇಡಿ ಎಂದು ಹೇಳುವ ಕಾಲ ಬರುತ್ತದೆ. ಅವರೇನು ಹಣವನ್ನು ಪುಕ್ಕಟೆಯಾಗಿ ಕೊಡಬೇಕಾಗಿಲ್ಲ, ಆಂಧ್ರದಲ್ಲಿ ನಾಗಾರ್ಜುನಸಾಗರ ಅಣೆಕಟ್ಟನ್ನು ಕಟ್ಟಲು ಯಾವರೀತಿ ಸಹಾಯ ಮಾಡಿದರೋ ಅದೇ ರೀತಿ ನಮ್ಮ ರಾಜ್ಯಕ್ಕೂ ಸಹ ಏತಕ್ಕೆ ಕೊಡಬಾರದು ?

ಶ್ರೀ ಕಾಗೋಡು ತಿಮ್ಮಪ್ಪ.—ನಾನು ರಾಯಚೂರಿಗೆ ಹೋದಾಗ ಅಲ್ಲಿಯ ಶಾಸಕರು ಒಂದು ಮಾತನ್ನು ಹೇಳಿದರು. ಏನೆಂದರೆ ಹಿಂದೆ ಶ್ರೀ ವೀರೇಂದ್ರಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ರಾಯಚೂರಿನ ಜನರು ತಮ್ಮ ಭಾಗದಲ್ಲಿ ನೀರಾವರಿ ಕಾಲುವೆಯನ್ನು ಸಕಾಲದಲ್ಲಿ ಮಾಡಿಸಿಕೊಟ್ಟರೆ ಅದರ ಉಪಯೋಗ ಪಡೆದುಕೊಳ್ಳುವ ರೈತರು ಮುಂಗಡವಾಗಿ ಹಣ ಕೊಡುತ್ತೇವೆ ಎಂದು ಹೇಳಿದರೂ ಸಹ ಅದನ್ನು ಏತಕ್ಕೆ ಬಳಸಿಕೊಳ್ಳಲಿಲ್ಲ ಎಂಬುದನ್ನು ತಾವು ಹೇಳುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.—ರಾಯಚೂರಿನ ಒಂದು ಭಾಗದ ಜನರು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಟ್ಟರೆ ಈ ಒಂದು ಸಮಸ್ಯೆ ಬಗೆಹರಿಯುವುದಿಲ್ಲ. ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕಲೆಕ್ಟ್ ಮಾಡುವ ಬಗ್ಗೆ ಒಂದು ಬಿಲ್ಲನ್ನು ಈ ಸಭೆಯ ಮುಂದೆ ತಂದಾಗ ಇದೇ ಮಾನ್ಯ ಚೆನ್ನಬಸಪ್ಪನವರು ಈ ಕಡೆ ಕುಳಿತುಕೊಂಡು ಇದು ಬೇಡ ಎಂದು ಜೋರಾಗಿ ಭಾಷಣ ಮಾಡಿದ್ದರು. ಅದು ನನಗೆ ಜ್ಞಾಪಕವಿದೆ. ಆದಕಾರಣ ಈ ವಿಚಾರದಲ್ಲಿ ಈ ಮಾನ್ಯ ಸಭೆಯ ಅಭಿಪ್ರಾಯ ಏನಿದೆ ಎಂಬುದನ್ನು ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ತಿಳಿಸಬೇಕು. ಇದು ರಾಜಕೀಯ ಪ್ರಶ್ನೆಯಲ್ಲ. ಹಣವನ್ನು ಈ ಬಾಬಿಗೆ ಯಾವ ರೀತಿ ಕ್ರೋಢೀಕರಿಸಬೇಕು ಎನ್ನುವ ಬಗ್ಗೆ ನಮ್ಮ ಸಲಹೆಗಳನ್ನು ಬೇಕಾದರೆ ಕೇಳಿ, ಕೊಡುತ್ತೇವೆ. ಮೊನ್ನೆ ನನ್ನನ್ನು ಪಾರ್ಲಿಮೆಂಟರಿ ಕಾನ್ಫರೆನ್ಸ್‌ಗೆ ವಿದೇಶಕ್ಕೆ ಕಳುಹಿಸಿಕೊಟ್ಟಾಗ ಯು. ಎಸ್. ನಲ್ಲಿರುವ ಹೂವರ್ ಡ್ಯಾಂನ್ನು ನೋಡಲು ಹೋಗಿದ್ದೆ. ಎಷ್ಟರಮಟ್ಟಿಗೆ ತಾಂತ್ರಿಕವಾಗಿ ಆ ದೇಶದವರು ತಮ್ಮ ದೇಶದ ಪ್ರಗತಿಯ ಬಗ್ಗೆ ಸಾಧನೆ ಮಾಡಿದ್ದಾರೆ ಎಂಬುದನ್ನು ತಿಳಿಯುವ ಆಸೆಯಿಂದ ಅದನ್ನು ನೋಡಲು ಹೋಗಿದ್ದೆ. ಕೊಲೊರಾಡೋ ನದಿಗೆ ಅಡ್ಡಲಾಗಿ ಈ ಹೂವರ್ ಡ್ಯಾಂನ್ನು ೧೭೫ ಮಿಲಿಯನ್ ಡಾಲರುಗಳನ್ನು ಖರ್ಚು ಮಾಡಿ ಕಟ್ಟಿಸಿದ್ದಾರೆ. ೧೯೭೦ರೊಳಗೆ ಅದರ ಖರ್ಚು ಮತ್ತು ಇಂಟರೆಸ್ಟನ್ನು ವಸೂಲಿ ಮಾಡಲಾಯಿತೆಂದು ಹೇಳಿದರು. ಈ ಒಂದು ಯೋಜನೆಯಿಂದ ಅವರು ಒಂದು ಕಡೆ ವಿದ್ಯುಚ್ಛಕ್ತಿ ತಯಾರು ಮಾಡುತ್ತಿದ್ದಾರೆ, ಮತ್ತೊಂದು ಕಡೆ ವ್ಯವಸಾಯಕ್ಕೆ ನೀರನ್ನು ಒದಗಿಸುತ್ತಿದ್ದಾರೆ. ಜೊತೆಗೆ ಪ್ರಮುಖ ಪಟ್ಟಣಗಳಿಗೆ ಕುಡಿಯುವ ನೀರನ್ನು ಒದಗಿಸುತ್ತಿದ್ದಾರೆ. ನಮ್ಮ ದೇಶದಲ್ಲಿ ಕಳೆದ ೪ ಪಂಚವಾರ್ಷಿಕ ಯೋಜನೆಗಳಲ್ಲಿ ನೀರಾವರಿ ಯೋಜನೆಗಳಿಗಾಗಿ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಆದರೆ ಈ ಯೋಜನೆಗಳಿಂದ ನಮಗೆ ಸಾಕಷ್ಟು ನಷ್ಟವಾಗುತ್ತಿದೆ ಎಂಬುದೇ ಎಲ್ಲರ ಪ್ರತಿಕ್ರಿಯೆಯಾಗಿದೆ. ನೀರಿನ ಮೇಲೆ ತೆರಿಗೆಯನ್ನು ಜಾಸ್ತಿ ಮಾಡುವಾಗ ರೈತರಿಗೆ ಎಷ್ಟು ಹೊರುವ ಶಕ್ತಿ ಇದೆ ಎಂಬುದನ್ನು ಮೊದಲು ನಾವು ನೋಡಬೇಕಾಗಿದೆ. ಕಾಯಂ ಆಗಿ ತಪ್ಪದೆ ನೀರಿನ ಸೌಕರ್ಯ ದೊರಕುತ್ತದೆ ಎಂದು ಗೊತ್ತಾದರೆ ರೈತರು ೫-೧೦ ರೂಪಾಯಿಗಳ ಹೆಚ್ಚಿನ ತೆರಿಗೆಯನ್ನು ಕೊಡುತ್ತಾರೆ. ಆದಕಾರಣ ನಾವು ರೈತರಿಗೆ ನೀರಿನ ಸೌಕರ್ಯ ಒದಗಿಸಿಕೊಡುವ ಬಗ್ಗೆ ಮೊದಲು ಪ್ರಾಶಸ್ತ್ಯ ಕೊಡಬೇಡಬೇಕಾಗಿದೆ. ಆದರೆ ಎಲ್ಲಾ ಖರ್ಚನ್ನು ಸಹ ರೈತರ ಮೇಲೆಯೇ ಹಾಕುವುದಕ್ಕಾಗುವುದಿಲ್ಲ. ಬೇರೆ ಬೇರೆ ಕಡೆಗಳಿಂದ ನಾವು ಹಣವನ್ನು ಕಲೆಕ್ಟ್ ಮಾಡಬೇಕಾಗುತ್ತದೆ. ಕೇವಲ ಬೆಟರ್‌ಮೆಂಟ್ ಲೆವಿಯಿಂದಲೇ ಹಣವನ್ನು ಕೂಡಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ, ಇದನ್ನು ಎಲ್ಲರೂ ಒಪ್ಪುತ್ತಾರೆ.

3-00 P. M.

ಕೇಂದ್ರ ಸರ್ಕಾರದವರಿಗೆ ಇರತಕ್ಕ ರಿಸೋರ್ಸಸ್ ಏನಿವೆ ಅದರಲ್ಲಿ ನಮಗೆಷ್ಟು ಕೊಡಲಿ. ಅದನ್ನು ಕೊಡುವುದಕ್ಕಾಗುವುದಿಲ್ಲ ಎಂದರೆ ನಾಳೆ ಕರ್ನಾಟಕದ ಜನ ಕೇಂದ್ರ ಸರ್ಕಾರದ ನಾಯಕರನ್ನು ಕರ್ನಾಟಕದ ನೆಲದ ಮೇಲೆ ಕಾಲು ಇಡಬೇಡಿ ಎಂದು ಹೇಳಬೇಕಾಗುತ್ತದೆ. ವಿರೋಧ ಪಕ್ಷದವರು ಈ ರೀತಿ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ನಮ್ಮನ್ನು ಬೈದು ಬೇಕಾದರೆ ಅವರಿಗೆ ಹೇಳಿ. ಇದರಿಂದ ನಮ್ಮ ಪಕ್ಷಕ್ಕೇ ಕೇಡಾಗುತ್ತದೆ ಎಂದು ಕೇಂದ್ರದ ನಾಯಕರಿಗೆ ಹೇಳಿ. ನಮಗೆ ಮುಖ್ಯವಾಗಿ ರಾಜ್ಯದ ಪ್ರಗತಿಯಾಗಬೇಕು. ಕರ್ನಾಟಕದ ಜನತೆಯ ಅಭಿಪ್ರಾಯ ನಮಗೆ ವಿರೋಧವಾಗಿ ಆಗುತ್ತಿದೆ. ನೀವು ನಮ್ಮ ಕೈ ಹಿಡಿಯಬೇಕು ಎಂದು ಅವರಿಗೆ ತಿಳಿಸಬೇಕು. ಒಂದು ಸಾವಿರ ಕೋಟಿ ರೂಪಾಯಿಗಳ ನಮ್ಮ ಯೋಜನೆ ಏನಿದೆ ಇವುಗಳನ್ನು ಕಾರ್ಯಗತ ಮಾಡುವುದಕ್ಕೆ ಈ ವೇಗದಲ್ಲಿ ಹೋದರೆ ಸಾಧ್ಯವಾಗುವುದಿಲ್ಲ. ಅಪ್ಪರ್‌ಕೃಷ್ಣಾ ಪ್ರಾಜೆಕ್ಟನ್ನು ನ್ಯಾಷನಲ್‌ಪ್ರಾಜೆಕ್ಟ್ ಎಂದು ಕೇಂದ್ರಸರ್ಕಾರದವರು ಟ್ರೀಟ್ ಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೂ ಕೂಡ ಅದಕ್ಕೆ ಸ್ಪೆಷಲ್ ಅಸಿಸ್ಟೆನ್ಸ್ ಕೊಡದಿದ್ದರೆ ಸಾಧ್ಯವೇ ಇಲ್ಲ. ಈ ಯೋಜನೆಯ ಕೆಲಸ ನಿಲ್ಲಬೇಕಾಗುತ್ತದೆ. ಈ ಪ್ರಾಜೆಕ್ಟ್ ಬಗ್ಗೆ ಎರಡು ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದರೂ ಕೂಡ ಅದು ಎಸ್ಟಾಬ್ಲಿಷ್‌ಮೆಂಟ್ ಖರ್ಚಿಗೂ ಸಹ ಸಾಕಾಗುವುದಿಲ್ಲ. ಆದ್ದರಿಂದ ಈ ಪ್ರಾಜೆಕ್ಟನ್ನು ನ್ಯಾಷನಲ್ ಪ್ರಾಜೆಕ್ಟ್ ಎಂದು ಟ್ರೀಟ್ ಮಾಡಬೇಕು. ಇಲ್ಲವಿದ್ದರೆ ಸ್ಪೆಷಲ್ ಅಸಿಸ್ಟೆನ್ಸ್ ಕೊಡಬೇಕು. ಪೂರ್ತಿ ಅಸಿಸ್ಟೆನ್ಸ್‌ಕೊಟ್ಟರೆ ಸಂತೋಷ. ಇಲ್ಲದೆ ಹೋದರೆ ೫೦ ಪರ್ಸೆಂಟ್ ಆದರೂ ಕೂಡ ಕೇಂದ್ರ ಸರ್ಕಾರದವರು ಅಸಿಸ್ಟೆನ್ಸ್ ಕೊಡಬೇಕು. ನಾಗಾರ್ಜುನಸಾಗರಕ್ಕೆ ಯಾವ ರೀತಿ ಕೇಂದ್ರ ಸರ್ಕಾರದವರು ಹಣ ಸಹಾಯವನ್ನು ಕೊಟ್ಟಿದ್ದಾರೆಯೋ ಅದೇ ರೀತಿ ನಮ್ಮ ರಾಜ್ಯದ ಈ ಅಪ್ಪರ್‌ಕೃಷ್ಣಾ ಪ್ರಾಜೆಕ್ಟಿಗೆ ಹಣ ಸಹಾಯವನ್ನು ಕೊಡಲಿ. ಬೇರೆ ರಾಜ್ಯಗಳಿಗೆ ಸಹಾಯ ಮಾಡುವಾಗ ನಮಗೇಕೆ ಕೊಡುವುದಿಲ್ಲ. ನಾವೇನು ತಪ್ಪು ಮಾಡಿದ್ದೇವೆ. ೨೧೬ ಜನ ಸದಸ್ಯರೂ ಸರ್ಕಾರದ ಹಿಂದೆ ಇದ್ದೇವೆ. ಈ ಬಗ್ಗೆ ಯಾವ ಹೋರಾಟ ಅಥವಾ ಚಳುವಳಿಯನ್ನು ಬೇಕಾದರೂ ಮಾಡೋಣ. ನ್ಯಾಯುವಾದ ಮಾರ್ಗದಲ್ಲಿ, ಶಾಂತಿಯುತವಾದ ಮಾರ್ಗದಲ್ಲಿ ಸಾಮೂಹಿಕವಾಗಿ ಪ್ರತಿಭಟನೆ ಮಾಡುವುದಕ್ಕೆ ನಾವು ಸಿದ್ಧರಾಗಿದ್ದೇವೆ. ಈ ಪ್ರಾಜೆಕ್ಟ್‌ಗಳ ಕೆಲಸವನ್ನು ಇಂಟರ್‌ನಲ್ ರಿಸೋರ್ಸಸ್‌ನಿಂದ ನಾವೇ ಅಧಿಕಾರಸ್ಥಾನಕ್ಕೆ ಬಂದರೂ ಕಾರ್ಯಗತ ಮಾಡುವುದಕ್ಕೆ ಆಗುವುದಿಲ್ಲ. ಕೇಂದ್ರದ ನಾಯಕರು ಇದರ ಬಗ್ಗೆ ಸಹಾನುಭೂತಿಯನ್ನು ತೋರಿಸದಿದ್ದರೆ ಕರ್ನಾಟಕದ ಜನ ರೊಚ್ಚಿಗೇಳುವ ಪರಿಸ್ಥಿತಿ ಬರುತ್ತದೆ.

ನೀರಾವರಿ ಯೋಜನೆಗಳ ಬಗ್ಗೆ ನಾನು ಮೊದಲೇ ತಿಳಿಸಿದ್ದೇನೆ. ನಮ್ಮ ಪ್ರಾಜೆಕ್ಟ್‌ಗಳಲ್ಲಿ ಅಕ್ರಮಗಳು ನಡೆಯುತ್ತಿವೆ. ಆದ್ದರಿಂದ ನಾನು ಮಾನ್ಯ ಪಬ್ಲಿಕ್ ವರ್ಕ್ಸ್ ಶಾಖೆಯ ಮಂತ್ರಿಗಳಾದ ಶ್ರೀ ವರ್ಣಾಜನ ಬಸಪ್ಪನವರು ಆ ಸ್ಥಾನದಲ್ಲಿ ಮೂರು ವರ್ಷಗಳಾದರೂ ಇರಲಿ, ಒಂದು ವರ್ಷವಾದರೂ ಇರಲಿ, ಒಂದು ದಿವಸವಾದರೂ ಇರಲಿ ನಾನು ಅದನ್ನು ಬೇಡ ಎಂದು ಹೇಳುವುದಿಲ್ಲ. ಅಧಿಕಾರಿಗಳು ಎಷ್ಟರ ಮಟ್ಟಿಗೆ ಒತ್ತಡವನ್ನು ತರುತ್ತಾರೆ ಎನ್ನುವುದು ನನಗೆ ಗೊತ್ತಿದೆ. ಮಾನ್ಯ ಮುಖ್ಯ ಮಂತ್ರಿಗಳು ಯಾವುದೋ ಒಂದು ಪೋಲೀಸ್ ಕಟ್ಟಡದ ಉದ್ಘಾಟನಾ ಸಂದರ್ಭದಲ್ಲಿ ತಮ್ಮ ಮನಸ್ಸಿನಲ್ಲಿದ್ದಂತಹ ವೇದನೆಯನ್ನು ಒರ್ಕ್ಟ ಮಾಡಿ ಹೇಳಿದ್ದಾರೆ, ಅಧಿಕಾರಿಗಳು ಇನ್ನು ಮುಂದಾದರೂ ತಮ್ಮ ಜವಾಬ್ದಾರಿಯನ್ನು ಅರ್ಥ ಮಾಡಿಕೊಂಡು ಕೆಲಸ ಮಾಡದಿದ್ದರೆ ಬಹುಶಃ ನಾವು ಯಾರೂ ಉಳಿಯುವುದಿಲ್ಲ. ರಾಜಕಾರಣಿಗಳಿಗೆ ಎಷ್ಟು ಜವಾಬ್ದಾರಿ ಇದೆಯೋ ಅಷ್ಟೇ ಜವಾಬ್ದಾರಿ ಅಧಿಕಾರಿಗಳಿಗೆ ಇದೆ. ಅಧಿಕಾರಿಗಳು ೨ ಪರ್ಸೆಂಟ್ ಇರಬಹುದು ಅಥವಾ ೨½ ಪರ್ಸೆಂಟ್ ಇರಬಹುದು. ಸ್ವಾತಂತ್ರ್ಯ ಬಂದಾಗಿನಿಂದಲೂ ಲೆಕ್ಕವನ್ನು ತೆಗೆದುಕೊಂಡರೆ ರಾಜಕಾರಣಿಗಳು ಎಂ ಎಲ್ ಎ ಗಳು, ಮಾಜಿ ಮಂತ್ರಿಗಳು ಎಲ್ಲರನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ ಒಂದು ಸಾವಿರ ಜನ ಸಿಕ್ಕಬಹುದು, ಆದರೆ ಈ ರಾಜಕಾರಣಿಗಳು ದುಡ್ಡನ್ನು ಲೂಟಿ ಹೊಡೆದುಕೊಂಡು ಹೋಗುತ್ತಾರೆ ಎನ್ನುವ ಭಾವನೆ ಬಂದಿದೆ. ಇದನ್ನು ನೋಡಿದರೆ ಈ ರಾಜಕೀಯ ಜೀವನದಲ್ಲಿ ಮುಂದುವರಿಯಬೇಕೇ ಅಥವಾ ಬೇಡವೇ ಎನ್ನುವ ವೇದನೆ ಬರುತ್ತಿದೆ. ನಾನು ಇಷ್ಟು ಮಾತ್ರ ಮಾನ್ಯ ಮಂತ್ರಿಗಳಿಗೆ ಹೇಳುತ್ತೇನೆ. ನೀವು ಯಾವುದೇ ಒತ್ತಡಕ್ಕೆ ಮಣಿಯುವ ಸನ್ನಿವೇಶಕ್ಕೆ ಹೋಗಬೇಡಿ. ಈ ಸಂಬಂಧದಲ್ಲಿ ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ಶ್ರೀಮಾನ್ ಚನ್ನಬಸಪ್ಪನವರು ನಮ್ಮ ಕಡೆಯಲ್ಲಿ ಇದ್ದಾಗ ಇಲ್ಲಿ ಕುಳಿತುಕೊಂಡು ದೊಡ್ಡ ಭಾಷಣ ಮಾಡಿದರು. ಯಾರೇ ಅಧಿಕಾರಕ್ಕೆ ಬಂದರೂ ಹುಷಾರ್ ಎಂದು ಹೇಳಿದ್ದಾರೆ. ಆದರೆ ಅವರ ಮೂಗಿನ ಕೆಳಗಡೆ ದುರ್ನಾತ ಹೊಡೆಯುತ್ತಿದೆ. ವಿಧಾನಸೌಧದ ಪಕ್ಕಕ್ಕೆ ಬಿಲ್ಡಿಂಗ್ ಡಿವಿಜನ್‌ಗೆ ಹೋದರೆ ಅಲ್ಲಿ ದುರ್ನಾತ ಹೊಡೆಯುತ್ತಿದೆ. ಆದ್ದರಿಂದ ಅಧಿಕಾರಿಗಳು ಜವಾಬ್ದಾರಿಯನ್ನು ಅರಿತು ಕೆಲಸ ಮಾಡದಿದ್ದರೆ ಅವರಿಗೆ ಚಾಟಿಯಿಂದ ಹೊಡೆಯಬೇಕಾಗುತ್ತದೆ. ಗುಜರಾತ್ ಮತ್ತು ಬಿಹಾರಗಳಲ್ಲಿ ಏನು ಪರಿಸ್ಥಿತಿ ಬಂದಿದೆ ಅದೇ ಪರಿಸ್ಥಿತಿ ಇಲ್ಲಿಯೂ ಬರಬಹುದು. ಆದ್ದರಿಂದ ಸಮಸ್ಯೆಯನ್ನು ಅರಿತುಕೊಂಡು ಕೆಲಸ ಮಾಡಬೇಕು. ಅಧಿಕಾರಿಗಳಿಗೆ ಏರ್‌ಕಂಡೀಷನ್ ರೂಮು ಬೇಕು. ದೊಡ್ಡ ದೊಡ್ಡ ಕಾರುಗಳಲ್ಲಿ ಓಡಾಡಬೇಕು ಎನ್ನುವ

(ಶ್ರೀ ಹೆಚ್. ಡಿ. ದೇವೇಗೌಡ)

ಅಭಿಲಾಷೆ ಇದೆ. ಶ್ರೀಮಾನ್ ಚನ್ನಬಸಪ್ಪನವರಿಗೆ ಒಂದು ಮಾತು ಹೇಳುತ್ತೇನೆ. ಅವರು ಎಷ್ಟು ದಿವಸ ಅಧಿಕಾರದಲ್ಲಿರುತ್ತಾರೆಯೋ ಗೊತ್ತಿಲ್ಲ. ಅವರು ಅಧಿಕಾರದಲ್ಲಿ ಒಂದು ವರ್ಷ ಇರಲಿ, ಮೂರು ವರ್ಷಗಳು ಇರಲಿ, ಆದರೆ ಅವರು ಅಧಿಕಾರಕ್ಕೆ ಬಂದ ೧೫ ದಿವಸಗಳಲ್ಲಿ ಕೆಲವು ಅಧಿಕಾರಿಗಳನ್ನು ಇಂಜಿನಿಯರುಗಳನ್ನು ಸಸ್ಪೆಂಡ್ ಮಾಡಿದರು. ಆಮೇಲೆ ಅಧಿಕಾರಿಗಳನ್ನು ಟಚ್ ಮಾಡುವುದಕ್ಕೆ ಹೋಗಿಲ್ಲ. ಅವರ ಹಸ್ತದಲ್ಲೇ ವಿಜಲೆನ್ಸ್ ಕಮಿಷನ್ ಇದೆ. ಆದರೂ ಸಹ ತಪ್ಪು ಮಾಡಿದವರನ್ನು ವಿಚಾರಣೆಗೆ ಗುರಿಪಡಿಸುವುದಕ್ಕೆ ಆಗಿಲ್ಲ, ಏತಕ್ಕೆಂದರೆ ಅವರಿಗೆ ಹಿಂದೆ ಮುಂದೆ ಒತ್ತಡ ಕಾಟ ಹಾಗಿವೆ. ಈ ಪಬ್ಲಿಕ್ ವರ್ಕ್ಸ್ ಖಾತೆಗೆ ೩೦ ಕೋಟಿ ರೂಪಾಯಿಗಳನ್ನೇನು ಕೊಡುತ್ತಿದ್ದೇವೆ ಅದರಲ್ಲಿ ೩೦-೪೦ ಪರ್ಸೆಂಟು ಫಿಲ್ಟರೇಜ್ ಇದೆ, ಈ ರೀತಿ ಆದರೆ ಯಾವ ಪುರುಷಾರ್ಥಕ್ಕೆ ಕೆಲಸ ಮಾಡಬೇಕು? ಒಂದು ಸಬ್ ಡಿವಿಜನ್‌ನಲ್ಲಿ ೬ ಲಕ್ಷ ರೂಪಾಯಿಗಳ ಕಬ್ಬಿಣ ಇಲ್ಲ ಎಂದು ಹೇಳುತ್ತಿದ್ದಾರೆ. ಕೊನೆಕಾಲದಲ್ಲಿ ಶ್ರೀಮಾನ್ ಚನ್ನಬಸಪ್ಪನವರ ಇಲಾಖೆಯಲ್ಲಿ ಈ ಸ್ಥಿತಿ ಏತಕ್ಕೆ ಬಂತು? ಯಾವ ಪಕ್ಷದವರೇ ಅಧಿಕಾರದಲ್ಲಿರಲಿ ಸ್ವಲ್ಪ ಬಿಗಿಯಾಗಿ ಆಡಳಿತವನ್ನು ನಡೆಸಬೇಕು. ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಮಾನ್ಯ ಮಂತ್ರಿಗಳಿಗೆ ಗೊತ್ತಿಲ್ಲದೆ ಏನೂ ನಡೆಯುವುದಕ್ಕೆ ಆಗುವುದಿಲ್ಲ.

SRI H. M. CHANNABASAPPA.—About the matter that is being referred to it is already under investigation and the report will come.

ಶ್ರೀ ಎಚ್. ಡಿ. ದೇವೇಗೌಡ.—ಈಗ ನೀವು ಪ್ರಿಕಾಷನ್ಸ್ ತೆಗೆದುಕೊಂಡಿದ್ದೀರಿ. ನೀವು ಒಳ್ಳೆಯ ಸಾಹಸದ ಕೆಲಸವನ್ನು ಮಾಡುವುದಕ್ಕೆ ಹೊರಟಿದ್ದೀರಿ. ಇದರ ಬಗ್ಗೆ ಪತ್ರಿಕೆಯಲ್ಲಿ ಫೋಟೋ ಕೂಡ ಬಂದಿದೆ. ಈಗ ಎರಡು ವರ್ಷಗಳಿಂದ ಅಡ್ಮಿನಿಸ್ಟ್ರೇಷನ್ ಯಾವ ರೀತಿ ನಡೆಯುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿದೆ, ಇದರಲ್ಲಿ ಯಾರೂ ಕೂಡ ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಪ್ರತಿಯೊಬ್ಬರಿಗೂ ಇದರಲ್ಲಿ ಜವಾಬ್ದಾರಿ ಇದೆ. ಇದೇ ರೀತಿ ನಡೆದರೆ ಜವಾಬ್ದಾರಿಯನ್ನು ಹೊತ್ತಿರತಕ್ಕವರು ಯಾರೂ ಕೂಡ ಬೀದಿಯಲ್ಲಿ ತಿರುಗಾಡುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ಆ ಪಕ್ಷ ಈ ಪಕ್ಷ ಎನ್ನುವ ಪ್ರಶ್ನೆಯನ್ನು ಇಟ್ಟು ನೋಡಿದರೆ ಜನರಿಗೆ ಹೇಸಿಗೆಯ ಪರಿಸ್ಥಿತಿ ಬರುತ್ತದೆ. ನಾನು ಈ ಬಗ್ಗೆ ನನ್ನ ಸಹಕಾರ ಮತ್ತು ಸಹಾಯವನ್ನು ಕೊಡುವುದಕ್ಕೆ ತಯಾರಾಗಿದ್ದೇನೆ. ಅಡ್ಮಿನಿಸ್ಟ್ರೇಷನ್ ಅನ್ನು ಸರಿಪಡಿಸದಿದ್ದರೆ ಪ್ರಜಾಪ್ರಭುತ್ವಕ್ಕೆ ಬರತಕ್ಕ ಕುತ್ತನ್ನು ನಿವಾರಿಸದಿದ್ದರೆ ಪ್ರಜಾಪ್ರಭುತ್ವವನ್ನು ಉಳಿಸುವುದಕ್ಕಾಗುವುದಿಲ್ಲ. ಅಧಿಕಾರಿಗಳು ಮಾಡಿರತಕ್ಕ ಅಕ್ರಮಗಳ ಪಟ್ಟಿಯನ್ನು ಈ ಸಭೆಯ ಮುಂದೆ ಇಡುತ್ತೇನೆ. ಪಿ. ೨, ೩ ಮತ್ತು ಚಾರ್ಜ್‌ಗಳನ್ನು ಒಂದೊಂದಾಗಿ ಹೇಳಿಕೊಂಡು ಬರುತ್ತೇನೆ.

ಎರಡು ವರ್ಷಗಳಿಂದೀಚೆಗೆ ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರದಲ್ಲಿ ಏನಾದರೂ ಮಾಡುತ್ತಾರೆಂದು ಇದ್ದೆ. ಅವರು ಇದರ ಬಗ್ಗೆ ಏನೂ ಮಾಡಲಿಲ್ಲ He should not allow his officers to go according to their whims and fancies ಯಾರಾದರೂ ಪಾಲಿಟಿಷಿಯನ್ ಹೇಳಿದರೆ ಸಾಕು ಎನ್ನುವ ಮನೋಭಾವನೆ ಇದ್ದರೆ ಅವನ್ನು ಬಿಡಬೇಕು. ಅವರು ಅವರ ಬಾಧಾ ಹಿತದೃಷ್ಟಿಯಿಂದ ನಡೆಯಬೇಕು. ಇಲ್ಲದಿದ್ದರೆ ನಿಮಗೇ ಆಗಲೀ ನಮಗೇ ಆಗಲಿ ಯಾರಿಗೂ ಉಳಿಗಾಲವಿಲ್ಲ. ನೀವು ಅಧಿಕಾರದಲ್ಲಿ ಅವರ ಮೇಲೆ ಹಾಗೂ ರಾಜಕೀಯದಲ್ಲಿ ಎಷ್ಟೇ ವಿಶ್ವಾಸವಿರಲಿ, ರಾಜ್ಯಾಡಳಿತವನ್ನು ಮಾಡುವಾಗ ನಿಮ್ಮ ಮುಂದೆ ಬರತಕ್ಕ ವಿಜಲೆನ್ಸ್ ಕಮಿಷನ್ ರಿಪೋರ್ಟ್ ಪ್ರಕಾರ ಯಾವ ರೀತಿ ಯಾವಂಥ ರೆಕಾರ್ಡ್ಸ್ ಇದ್ದರೂ ಸಹ ಅವನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ, ತಪ್ಪಿತಸ್ಥರೆಂದು ರುಜುವಾತು ಆದಕೂಡಲೇ ಅವರನ್ನು ಡಿಸ್‌ಮಿಸ್ ಮಾಡಿ. ಸುಮಾರು ಎರಡು ವರ್ಷಗಳಿಂದ ನಾನು ನೋಡುತ್ತಿರುವುದರಲ್ಲಿ ಬಹಳ ಪ್ರಮುಖವಾಗಿ ಹೇಳುವುದಾದರೆ ರಾಜಕೀಯ ವಿಚಾರಗಳಲ್ಲಿ ಯಾರೇ ತಪ್ಪು ಮಾಡಿರಲಿ, ಅವರು ಇಂತಹ ಜಾತಿ, ಅಂತಹ ಜಾತಿ ಎಂಬುದಾಗಿ ಹೇಳುವುದು ಸರಿಯಲ್ಲ. ದುಡ್ಡು ಹೊಡೆಯುವುದು ಕೂಡ ಒಂದು ಜಾತಿಯೆಂಬುದಾಗಿ ಕೆಲವರು ಹೇಳಿದ್ದಾರೆ. ಆದ್ದರಿಂದ ಇವತ್ತು ನೀವು ರಾಜಕೀಯ ಒತ್ತಡಕ್ಕೆ ಮಣಿದು ನಿಮ್ಮ ಕೆಲಸ ಕಾರ್ಯಗಳನ್ನು ಮಾಡಿದ್ದೇ ಆದರೆ, ನಿಜವಾಗಿಯೂ ನಿಮಗೆ ಕೆಟ್ಟ ಹೆಸರು ಬರುವುದು ಖಂಡಿತ ಮತ್ತು ಅಧಿಕಾರವನ್ನು ಬಿಟ್ಟು ಬಿಡತಕ್ಕ ಪ್ರಸಂಗವೂ ಬರುತ್ತದೆಂದು ನಾನು ಇವತ್ತು ಈ ಸಭೆಯಲ್ಲಿ ಹೇಳಬೇಕಾಗಿದೆ. ಮಾನ್ಯ ಶ್ರೀ ಚನ್ನಬಸಪ್ಪನವರ ಖಾತೆಯ ವಿಚಾರ ಏನಾಗಿದೆಯೆಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಅದು ವ್ಯಾಪಕವಾಗಿ ನಡೆಯುತ್ತಿದೆ. ಇನ್ನು ಮುಂದಾದರೂ ಅಧಿಕಾರಿಗಳಿಗೆ ಕೊಟ್ಟಿರುವ ಹಣವನ್ನು ಸರಿಯಾಗಿ ಉಪಯೋಗ ಮಾಡುವುದಕ್ಕೆ ಒಳ್ಳೆಯ ಜ್ಞಾನ ಬರಲಿ. ಆ ರೀತಿ ಹತೋಟಿಗೆ ತರುವುದಕ್ಕೆ ಎಲ್ಲ ರೀತಿಯ ಉಗ್ರ ಕ್ರಮಗಳನ್ನು ಕೂಡಲೇ ಮಾನ್ಯ ಮುಖ್ಯ ಮಂತ್ರಿಗಳು ತೆಗೆದುಕೊಳ್ಳಬೇಕು. ಮೇಜರ್ ಇರಿಗೇಷನ್ ಬಗ್ಗೆ ಹೋದಸಾರಿ ಅನೇಕ ವಿಷಯ-

ಗಳನ್ನು ಅಂಕಿ ಅಂಶಗಳ ಉದಾಹರಣೆ ಕೊಟ್ಟು ಮಾತನಾಡಿದ್ದೇನೆ. ಆದ್ದರಿಂದ ಅದರ ಬಗ್ಗೆ ಇವತ್ತು ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ನೀವು ಇನ್ನಾದರೂ ನಮ್ಮ ರಾಜ್ಯದಲ್ಲಿ ಒಳ್ಳೆಯ ಆಡಳಿತವನ್ನು ಕೊಡುವುದಕ್ಕೆ ಪ್ರಯತ್ನಮಾಡಿ ಎಂಬುದಾಗಿ ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ಸತ್ಯನಾರಾಯಣಸಿಂಗ್ (ಹೊಸಪೇಟೆ).— ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಈ ಸದನದ ಮುಂದೆ ಮಂಡಿಸಿರುವ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ಮೊಟ್ಟಮೊದಲನೆಯದಾಗಿ ಬೃಹತ್ ನೀರಾವರಿ ಯೋಜನೆಗೆ ಸಂಬಂಧಪಟ್ಟ ಹಾಗೆ ತುಂಗಭದ್ರಾ ಅಣೆಕಟ್ಟಿಗೆ ಸಂಬಂಧಪಟ್ಟಂತೆ ಕೆಲವೊಂದು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಮೊಟ್ಟಮೊದಲನೆಯದಾಗಿ ತುಂಗಭದ್ರಾ ಅಣೆಕಟ್ಟಿಗೆ ಒಬ್ಬ ಫುಲ್ ಟೈಂ ಚೀಫ್ ಇಂಜಿನಿಯರನ್ನು ನೇಮಕ ಮಾಡಿ ಬಹಳ ಒಳ್ಳೆಯ ಕೆಲಸವನ್ನು ನಮ್ಮ ಸರ್ಕಾರದವರು ಮಾಡಿದ್ದಾರೆಂದು ನನ್ನ ಅಭಿಪ್ರಾಯ. ಕಾರಣವಾದರೂ ಇಷ್ಟೇ. ಈ ಬೋರ್ಡಿನಿಂದ ನಮ್ಮ ಕರ್ನಾಟಕ ರಾಜ್ಯಕ್ಕೆ ಏನೇನು ಅನ್ಯಾಯವಾಗಿದೆಯೋ ಅವನ್ನೆಲ್ಲಾ ತಡೆಗಟ್ಟುವುದಕ್ಕಾಗಿ ಒಬ್ಬ ಚೀಫ್ ಇಂಜಿನಿಯರನ್ನು ನೇಮಿಸಿದ್ದು ಬಹಳ ಒಳ್ಳೆಯದಾಗಿದೆಯೆಂದು ನನಗೆ ಮನವರಿಕೆಯಾಗಿದೆ. ಒಂದು ವಿಷಯ. ನಮ್ಮ ಕರ್ನಾಟಕ ರಾಜ್ಯದ ದುರ್ದೈವವೋ ಏನೋ ಎಂದು ನನಗೆ ಕಾಣುತ್ತದೆ. ಏಕೆಂದರೆ ತುಂಗಭದ್ರಾ ಅಣೆಕಟ್ಟಿನಿಂದ ಪೂರ್ಣ ನೀರನ್ನು ಉಪಯೋಗಿಸುವ ಯೋಜನೆಯನ್ನು ಇಟ್ಟುಕೊಂಡು ಸುಮಾರು ೨೫ ವರ್ಷಗಳಾದರೂ ಕೂಡ ಅದರಿಂದ ಯಾವ ಪ್ರಯೋಜನವನ್ನೂ ಇದುವರೆಗೆ ಪಡೆಯುವುದಕ್ಕೆ ಅನುಕೂಲವಾಗಿಲ್ಲ. ಈ ತುಂಗಭದ್ರಾ ಪ್ರಾಜೆಕ್ಟಿನಿಂದ ನಮಗೆ ೩೦ ಟಿ.ಎಂ.ಸಿ. ಫೀಟ್ ನೀರನ್ನು ಉಪಯೋಗಿಸುವ ಹಕ್ಕು ಇದ್ದರೂ ಕೂಡ ಇವತ್ತಿನ ದಿವಸ ನಾವು ಅದನ್ನು ಉಪಯೋಗಿಸುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಕಾರಣವಾದರೋ ಇಷ್ಟೆ. ಈಗ ಇರತಕ್ಕ ಕಾಲುವೆಯಿಂದ ೨೦೦೦ ಕ್ಯೂಸೆಕ್ಸ್ ನೀರು ಹೋಗುವುದಕ್ಕೆ ಅವಕಾಶವಿದೆ. ಆದ್ದರಿಂದ ಈ ಕಾಲುವೆ ಒಡೆದುಹೋಗಿ ಅಲ್ಲಿನ ರೈತರಿಗೆ ಕೋಟ್ಯಾಂತರ ರೂಪಾಯಿಗಳಷ್ಟು ನಷ್ಟವಾಗಿದೆ. ಕಳೆದ ಸಾರಿ ಇದೇ ಕಾಲುವೆ ಒಡೆದುಹೋಗಿ ತುಂಬ ಬಾರದ ರೀತಿಯಲ್ಲಿ ನಷ್ಟ ಉಂಟಾಗಿದೆ. ಆದ್ದರಿಂದ ಈ ಕಾಲುವೆಯನ್ನು ಬಲಪಡಿಸಿ ೨೫೦೦ ಕ್ಯೂಸೆಕ್ಸ್ ನೀರು ಇದು ತೆಗೆದುಕೊಂಡು ಹೋಗುವ ಸಾಮರ್ಥ್ಯ ಪಡೆದರೆ ಮಾತ್ರ ನಮ್ಮ ಪಾಲಿನ ಪೂರ್ಣ ನೀರನ್ನು ನಾವು ಉಪಯೋಗ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ಒಂದು ಯೋಜನೆಗೆ ಹಿಂದೆಯೇ ೬ ಕೋಟಿ ರೂಪಾಯಿಗಳಷ್ಟು ಅಂದಾಜು ತಯಾರಾಗಿತ್ತು. ಈ ಯೋಜನೆಯ ಕೆಲಸಕಾರ್ಯಗಳು ಬಂಗಾಲ ಕಾಮಗಾರಿಯಲ್ಲೇ ಪ್ರಾರಂಭವಾಗಬೇಕಾಗಿತ್ತು. ಆಗ ಪ್ರಾರಂಭವಾಗಲಿಲ್ಲ. ಈಗಲಾದರೂ ಈ ಕಾಮಗಾರಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟು ಈ ಯೋಜನೆಯ ಕೆಲಸಕಾರ್ಯಗಳನ್ನು ಕೂಡಲೇ ಪ್ರಾರಂಭಮಾಡಬೇಕೆಂದು ನಾನು ರಾಜ್ಯ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಹಾಗೆ ಇವರ ಒಗ್ಗೆ ಅಡ್ವಾನ್ಸ್ ಬೆಟರ್‌ಮೆಂಟ್ ಲೆವಿಯನ್ನು ವಸೂಲಿಮಾಡುವುದಾದರೆ ಅದರಿಂದೇನೂ ತೊಂದರೆಯಾಗುವುದಿಲ್ಲ. ನಮ್ಮ ರೈತರೂ ಸಹ ಇದರ ವಿಚಾರದಲ್ಲಿ ಅಡ್ವಾನ್ಸ್ ಬೆಟರ್‌ಮೆಂಟ್ ಲೆವಿಯನ್ನು ಕೊಡುವುದಕ್ಕೆ ಯಾವ ತೊಂದರೆಯೂ ಪಡುವುದಿಲ್ಲವೆಂದು ನಾನು ಭಾವಿಸಿದ್ದೇನೆ.

ಈ ವಿಚಾರವನ್ನು ನಾವು ಹೇಗೆ ಬಿಡಲಿ. ಈ ನೀರಿನ ಮೇಲೆ ಆಂಧ್ರ ಸರ್ಕಾರದವರು ಹೆಚ್ಚಿನ ಆಕ್ರಮಣ ಮಾಡಿ ಬಹು ಹೆಚ್ಚಿನ ಪಾಲು ಪಡೆಯುತ್ತಾ ಇರುವುದರಿಂದ ಮುಂದೆ ನಮಗೆ ಸಾಕಷ್ಟು ನೀರು ಸಿಗುವುದಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇದನ್ನು ಬಳಪಡಿಸುವವರೆಗೂ ನಮ್ಮ ಹಕ್ಕನ್ನು ನಾವು ಇಟ್ಟುಕೊಳ್ಳಬೇಕು. ನಮಗೆ ಕೊಟ್ಟಿರುವ ನೀರಿನ ಪಾಲನ್ನು ನಾವು ಪಡೆಯುವುದು ನಮ್ಮ ಹಕ್ಕು. ನಮಗೆ ತುಂಗಭದ್ರಾ ಪ್ರಾಜೆಕ್ಟಿನ ಲೋ ಲೆವಲ್ ಅಥವಾ ಹೈ ಲೆವಲ್ ಕೆನಾಲ್‌ನಲ್ಲಿ ಹೆಚ್ಚಿಗೆ ನೀರನ್ನು ನಾವು ಉಪಯೋಗ ಮಾಡುವುದಕ್ಕೆ ಹಕ್ಕು ಉಂಟು. ಆ ಹಕ್ಕನ್ನು ಉಪಯೋಗಿಸಿ ಈ ಒಂದು ಕಾಲುವೆಯಿಂದ ನಮಗೆ ಬರತಕ್ಕ ನೀರಿನ ಪಾಲನ್ನು ಪಡೆಯಲು ತುಂಗಭದ್ರಾ ಬೋರ್ಡಿನ ಮುಂದೆ ನೀವು ಹೋಗಿ ಸಾಧಿಸಬೇಕಾದುದು ಅಗತ್ಯವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ, ಇನ್ನು ತುಂಗಭದ್ರಾ ಅಣೆಕಟ್ಟಿನ ವ್ಯವಸ್ಥೆಯಲ್ಲಿ ಜನವರಿಯಿಂದ ನವಂಬರ್‌ವರೆಗೆ ಮಳೆಗಾಲದಲ್ಲಿ ಒಹೇ ವ್ಯರ್ಥವಾಗಿ ನೀರು ಹೋಗುತ್ತಾ ಇದೆ. ನಮ್ಮ ರಾಜ್ಯದಲ್ಲಿನ ಅನೇಕ ಕೆರೆಗಳನ್ನು ಆ ನೀರಿನಿಂದ ತುಂಬಿಸಿ ಉಪಯೋಗ ಮಾಡಿಕೊಂಡರೆ ಅದರಿಂದ ಹೆಚ್ಚಿನ ನೀರಾವರಿ ಸೌಲಭ್ಯಗಳನ್ನು ನಾವು ಕೊಡುವುದಕ್ಕಾಗುತ್ತದೆ. ಅನೇಕ ಕೆರೆಗಳು ತುಂಗಭದ್ರಾ ಲೋ ಲೆವಲ್ ಕೆಳಗೆ ಮತ್ತು ಹೈ ಲೆವಲ್ ಕೆಳಗೆ ಇದ್ದರೂ ತುಂಗಭದ್ರಾ ಬೋರ್ಡ್ ಮುಂದೆ ಎರಡು ವರ್ಷಗಳಿಂದಲೂ ಇದು ಇತ್ಯರ್ಥವಾಗದೇ ಹಾಗೆಯೇ ಉಳಿದಿದೆ. ಉದಾಹರಣೆಗೆ ಹೇಳುವುದಾದರೆ ಹಾಸ್ಪೇಟ್ ತಾಲ್ಲೂಕಿನಲ್ಲಿ ಗೌರಮ್ಮ ಟ್ಯಾಂಕ್ ಮತ್ತು ಕೆಲವು ಟ್ಯಾಂಕ್‌ಗಳಿಗೆ ನೀರನ್ನು ತುಂಬಿಸುವುದಕ್ಕೆ ಅರ್ಜಿ ಸಲ್ಲಿಸಿದ್ದೂ ಸರ್ಕಾರದ ಶಿಫಾರಸ್ಸಿನೊಂದಿಗೆ ಇವತ್ತು

(ಶ್ರೀ ಬಿ. ಸತ್ಯನಾರಾಯಣ್‌ಸಿಂಗ್)

ತುಂಗಭದ್ರಾ ಬೋರ್ಡ್ ಮುಂದೆ ಚರ್ಚೆಮಾಡಿದ್ದರೂ ಇನ್ನೂ ಅದರ ಬಗ್ಗೆ ಯಾವ ಒಂದು ಕ್ರಮವನ್ನೂ ಅವರು ತೆಗೆದುಕೊಳ್ಳದೆ ವ್ಯರ್ಥವಾಗಿ ನೀರು ಹೋಗುತ್ತದೆ. ತುಂಗಭದ್ರಾ ಬೋರ್ಡಿಗೆ ನೀರನ್ನು ತುಂಬುವ ಕೆಲಸವನ್ನು ಮಾಡುವುದಕ್ಕೆ ರಾಜ್ಯ ಸರ್ಕಾರದವರು ಒತ್ತಾಯ ಮಾಡಬೇಕೆಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಅಷ್ಟೇ ಅಲ್ಲ. ರಾಜ್ಯ ಸರ್ಕಾರದವರು ಮುಂದೆ ಬಂದು ಹೊಸ ಕೆರೆಗಳನ್ನು ಕಟ್ಟಿಸಿ ಮಳೆಗಾಲದ ನೀರು ತುಂಬಿಸುವ ಕಾರ್ಯವನ್ನು ಮಾಡಬೇಕೆಂದು ನಾನು ಹೇಳಬಯಸುತ್ತೇನೆ. ಈಗಿನ ನಮ್ಮ ತುಂಗಭದ್ರಾ ಅಣೆಕಟ್ಟಿನ ವ್ಯವಸ್ಥೆಯಲ್ಲಿ ನೀರಾವರಿ ಮಾಡಿದರೆ ಹೆಚ್ಚು ನೀರು ವ್ಯರ್ಥವಾಗಿ ಹೋಗುತ್ತದೆ. ಈ ನೀರು ನದಿಗೆ ಹೋಗುವಾಗ ಆಂಧ್ರಕ್ಕೂ ಹೋಗುತ್ತದೆ. ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಅನೇಕ ಕಡೆಗಳಲ್ಲಿ ನಾನು ನೋಡಿರುವ ಹಾಗೆ ಮಾನಿರಾಬಾದಿನಲ್ಲಿ ಟಿ. ಆರ್. ಸರ್ಕಲ್‌ನಲ್ಲಿರತಕ್ಕವರು ಒಪನ್ನಾಗಿ ನೀರಾವರಿಯನ್ನು ಉಪಯೋಗಮಾಡುವುದಕ್ಕೆ ಸಾಧ್ಯವಿದೆ. ಈಗಾಗಲೇ ಅನೇಕ ಅಂದಾಜುಗಳನ್ನು ಮಾಡಿ ಸರ್ಕಾರಕ್ಕೆ ಕಳುಹಿಸಿದ್ದಾರೆಂದು ನನ್ನ ಗಮನಕ್ಕೆ ಬಂದಿದೆ. ಇನ್ನು ಸಣ್ಣ ಸಣ್ಣ ಪಿಕಪ್‌ಗಳ ಬಗ್ಗೆ ಸಾವಿರಾರು ಎಕರೆಗಳನ್ನು ಮಾಡುವುದಕ್ಕೆ ಸಾಧ್ಯವಿದೆ. ಈ ಒಂದು ಪೊಟೆಷಿಯಲ್ ನಮ್ಮ ಸರ್ಕಾರದವರು ಮಾಡುವುದಕ್ಕೆ ಸಾಧ್ಯವೆಂದು ನಾನು ಹೇಳುತ್ತೇನೆ. ಚಂದ್ರೂರ್ ಅಕ್ವಡಕ್ಟ್ ಸಹ ಕಳೆದ ನಾಲ್ಕು ವರ್ಷಗಳಿಂದಲೂ ಯಾವ ರೀತಿಯೂ ಇತ್ಯರ್ಥವಾಗದೆಯೇ ಉಳಿದಿದೆ. ಇದನ್ನು ಆದಷ್ಟು ಬೇಗನೆ ತೀರ್ಮಾನ ಮಾಡಿ ತಾಂತ್ರಿಕ ಸಾಧ್ಯವಿದ್ದರೆ ಕಟ್ಟುವುದಕ್ಕೆ ಮುಂದೆ ಬರಬೇಕು. ಇದರ ಬಗ್ಗೆ ಒಂದು ನಿರ್ಣಯವನ್ನು ಈಗಲೇ ತೆಗೆದುಕೊಂಡರೆ ಒಳ್ಳೆಯದು. ಆಗ ಈ ಭಾಗದಲ್ಲಿರುವ ರೈತರಿಗೆ ಅನೇಕ ಸ್ಕೀಂಗಳನ್ನು ರಚಿಸಿಕೊಳ್ಳಲು ಅನುಕೂಲವಾಗುತ್ತದೆ. ಈ ಒಂದು ವಿಷಯದಲ್ಲಿ ಸರ್ಕಾರ ಹೆಚ್ಚಿಗೆ ಗಮನವನ್ನು ತೆಗೆದುಕೊಳ್ಳಬೇಕು.

ಇನ್ನೊಂದು ಬಹಳ ಮುಖ್ಯವಾದ ವಿಷಯ ಈ ತುಂಗಭದ್ರಾ ಬೋರ್ಡಿನಲ್ಲಿ ನಮ್ಮ ಕರ್ನಾಟಕ ರಾಜ್ಯದ ಪ್ರತಿನಿಧಿಗಳೂ ಕೆಲಸಮಾಡುವವರಾಗಿದ್ದಾರೆ. ಆ ವ್ಯಕ್ತಿಗಳು ಅಲ್ಲಿ ಸೇರಿಕೊಂಡ ಹಿಂದಿನಿಂದಲೂ ಇದುವರೆಗೆ ಬಹಳ ಅಸಮರ್ಪಕವಾದ ರೀತಿಯಲ್ಲಿ ಕೆಲಸಮಾಡುತ್ತಾ ಇದ್ದಾರೆ. ಪರಿಣಾಮಕಾರಿಯಾದ ರೀತಿಯಲ್ಲಿ ಕೆಲಸಮಾಡುತ್ತಾ ಇಲ್ಲವೆಂದು ನಾನು ಘೋರವಾದ ಅಪಾದನೆಯನ್ನು ಮಾಡುತ್ತೇನೆ. ಕೇವಲ ನಾನು ಪೊಳ್ಳು ಪವಾದವನ್ನು ಮಾಡುತ್ತಾ ಇಲ್ಲ. ೧೯೬೦ರಲ್ಲಿ ಟಿ ಬಿ ಬೋರ್ಡಿನ ಚೀಫ್ ಇಂಜಿನಿಯರ್ ಅವರು, ಅವರ ಕೆಳಗೆ ಇರತಕ್ಕ ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರು ಗೌರವ್ವ ಮತ್ತು ವಿಠ್ಠಲಾಪುರ ಕೆರೆಗಳಿಗೆ ಟಿ. ಬಿ ಬೋರ್ಡ್ ಚೇರಮನ್ ಅವರಿಂದ ಒಪ್ಪಿಗೆ ಪಡೆದು ನೀರು ಕೊಡಬೇಕೆಂದು ಹೇಳಿದರು. ಆದರೆ ಕೆಳಗಿನ ಅಧಿಕಾರಿಗಳು ಅವರ ಒಂದು ಆದೇಶವನ್ನು ಪಾಲಿಸದೆ ಅದಕ್ಕೆ ಮನ್ನಣೆ ಕೊಡದೆ ಅದು ಇದುವರೆಗೂ ಕಾರ್ಯಗತವಾಗಲಿಲ್ಲ. ಆ ಬೋರ್ಡಿನಲ್ಲಿರತಕ್ಕ ನಮ್ಮ ಪ್ರತಿನಿಧಿಗಳು ಈ ವಿಚಾರ ಚರ್ಚೆಯಾಗುವ ಕಾಲದಲ್ಲಿ ಯಾವ ಒಂದು ಪಿಚಾರವನ್ನು ಸಹ ಎತ್ತಲಿಲ್ಲ. ಎರಡನೆಯದಾಗಿ ಈ ರೀತಿ ಇರಿಗೇಷನ್ ಆಕ್ಟಿನಲ್ಲಿ ನೀರನ್ನು ನಿಲ್ಲಿಸಬೇಕಾಗಿದ್ದರೆ ಅಲ್ಲಿನ ಅಚ್ಚುಕಟ್ಟುಗಳಲ್ಲಿರುವವರಿಗೆ ನೋಟೀಸ್ ಕೊಡುವುದು ಅವಶ್ಯಕವೆಂಬುದಾಗಿ ಒಂದು ಕಲಂ ಇದೆ. ಇನ್ನು ಸಾಣಾಪುರ ಉಪಕಾಲುವೆಯನ್ನು ಸುಮಾರು ೨೫ ವರ್ಷಗಳಿಂದಲೂ ಮಾಡುತ್ತಲೇ ಇದ್ದಾರೆ. ಅಲ್ಲಿಂದ ನೀರು ಹಾಯಿಸಿದರೆ ಸಾವಿರಾರು ಎಕರೆ ಕಬ್ಬು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಅದನ್ನು ಮಾಡಲಿಲ್ಲ. ಅಲ್ಲಿ ಅದನ್ನು ಒಡೆದುಹಾಕುವ ಪ್ರಸಂಗ ಬಂತು. ತುಂಗಭದ್ರಾ ಬೋರ್ಡಿನ ಒಬ್ಬ ಅಧಿಕಾರಿ ಅದನ್ನು ನಿಲ್ಲಿಸಿದರು.

ಈ ಹೊತ್ತು ಕಂಪ್ಲಿಯಲ್ಲಿರುವ ಕಬ್ಬಿನ ಕಾರ್ಖಾನೆ ನಿಲ್ಲುವಂಥ ಪರಿಸ್ಥಿತಿ ಬಂದಿದೆ. ಇದರ ಬಗೆ ನಮ್ಮ ಪ್ರತಿನಿಧಿಗಳು ತುಂಗಭದ್ರಾ ಮಂಡಲಿಯಲ್ಲಿ ಸರಿಯಾಗಿ ಪ್ರತಿಪಾದನೆ ಮಾಡಿ ಅನ್ಯಾಯವನ್ನು ತಡೆಗಟ್ಟಲು ಏನೂ ಕ್ರಮ ತೆಗೆದುಕೊಂಡಿಲ್ಲವೆಂದು ಹೇಳಬೇಕಾಗಿದೆ.

ಮೂರನೆಯದಾಗಿ ಸಾಣಾಪುರ ಕಾಲುವೆಯಲ್ಲಿ ತುಂಗಭದ್ರಾ ಬೋರ್ಡ್ ಪರವಾನಗಿ ಇಲ್ಲದೆ, ಚೀಫ್ ಇಂಜಿನಿಯರ್ ಅವರ ಆಜ್ಞೆಗೆ ವಿರೋಧವಾಗಿ ಇದ್ದುದನ್ನು ತೆಗೆದು ಪೈಪುಗಳನ್ನು ಹಾಕಿ ಕಾಲುವೆಯೊಳಗೆ ಬರಬೇಕಾದ ನೀರಿನ ಪ್ರಮಾಣವನ್ನು ಕಡಿಮೆ ಮಾಡಿದ್ದಾರೆ. ಈ ಭಾಗದ ರೈತರಿಗೆ ಸರಿಯಾಗಿ ನೀರು ಸಿಕ್ಕದೆ ತೊಂದರೆಗೆ ಒಳಗಾಗಿದ್ದಾರೆ. ಅವರಿಗೆ ನ್ಯಾಯ ದೊರೆಯುತ್ತಿಲ್ಲ. ಪ್ರತಿನಿಧಿಗಳು ಮಂಡಲಿಯಲ್ಲಿ ಏನು ಮಾಡುತ್ತಿದ್ದಾರೆನ್ನುವುದು ಗೊತ್ತಾಗುತ್ತಿಲ್ಲ.

ನಾಲ್ಕನೆಯದಾಗಿ ಕಳೆದ ೨೬ ವರ್ಷಗಳಿಂದ ಅಣೆಕಟ್ಟು ಪ್ರದೇಶದಲ್ಲಿ ವಾಸಮಾಡುತ್ತಿರುವ ಜನಗಳಿಗೆ ಬೋರ್ಡ್ ಆಸ್ಪತ್ರೆಯಿಂದ ವೈದ್ಯಕೀಯ ಸೌಲಭ್ಯವನ್ನು ಒದಗಿಸುತ್ತಿದ್ದರು. ೧೯೬೩ರ ನವಂಬರ್ ತಿಂಗಳಿನಲ್ಲಿ ತುಂಗಭದ್ರಾ ಮಂಡಲಿಯ ಆದೇಶದ ಮೇರೆಗೆ ಈ ಸೌಕರ್ಯವನ್ನು ಹಠಾತ್ತಾಗಿ ನಿಲ್ಲಿಸಿದ್ದಾರೆ. ಒಂದು ವೇಳೆ ಈ ರೀತಿ ಮಾಡಿರುವುದು ನ್ಯಾಯಬದ್ಧವಾದರೂ ಯಾವ ಮುನ್ಸೂಚನೆಯೂ ಇಲ್ಲದೆ ಮತ್ತು ಬೇರೆ ಏರ್ಪಾಟನ್ನು ಮಾಡಲೂ ಅವಕಾಶವಿಲ್ಲದಂತೆ ಹಠಾತ್ತಾಗಿ ವೈದ್ಯಕೀಯ ಸೌಲಭ್ಯವನು

ನಿಲ್ಲಿಸುವ ತೀರ್ಮಾನವನ್ನು ತೆಗೆದುಕೊಂಡಿರುವುದರಿಂದ ಸಾವಿರಾರು ಜನರಿಗೆ ಬಹಳ ತೊಂದರೆಯಾಗಿದೆ. ಇಷ್ಟೇ ಅಲ್ಲ ಮೊನ್ನೆ ತಾನೇ ಈ ವಿಚಾರವನ್ನು ಸದನದ ಮೂಲಕ ಸರ್ಕಾರದ ಗಮನಕ್ಕೆ ತಂದಾಗ ೩ ನೇ ಮಾರ್ಚ್ ೧೯೭೪ರ ನಂತರವೂ ಕೂಡ ಸರ್ಕಾರ ಅಂತಿಮ ಯಾವ ನಿರ್ಣಯವನ್ನು ತೆಗೆದುಕೊಳ್ಳುವವರೆಗೂ ವೈದ್ಯಕೀಯ ಸೌಲಭ್ಯವನ್ನು ಮುಂದುವರಿಸಲು ತುಂಗಭದ್ರಾ ಮಂಡಲಿಯ ಕಾರ್ಯದರ್ಶಿಯವರಿಗೆ ತಿಳಿಸುವುದಾಗಿ ಆಶ್ವಾಸನೆಯನ್ನು ಕೊಟ್ಟಿದ್ದರು. ನನಗೆ ನಿನ್ನೆ ಬಂದ ಸಮಾಚಾರದ ಪ್ರಕಾರ ಕಾರ್ಯದರ್ಶಿಯವರು ೩೧ನೇ ಮಾರ್ಚ್ ೧೯೭೪ರ ನಂತರ ವೈದ್ಯಕೀಯ ಸೌಲಭ್ಯವನ್ನು ಮುಂದುವರಿಸುವುದಕ್ಕೆ ಸಾಧ್ಯವಿಲ್ಲವೆಂದು ತಿಳಿಸಿದ್ದಾರೆ. ಆದುದರಿಂದ ಸರ್ಕಾರದವರು ಕೂಡಲೇ ಬೋರ್ಡಿನವರೊಡನೆ ಸಂಪರ್ಕ ಬೆಳೆಸಿ ನಮ್ಮ ಜನರಿಗೆ ಆಗುತ್ತಿರುವ ಅನ್ಯಾಯವನ್ನು ತಡೆಗಟ್ಟಲು ಒಂದು ಆದೇಶವನ್ನು ಕಳುಹಿಸುವಂತೆಯೂ ವೈದ್ಯಕೀಯ ಸೌಲಭ್ಯ ರಾಜ್ಯ ಸರ್ಕಾರ ಬೇರೆ ಏರ್ಪಾಡು ಮಾಡುವವರೆಗೂ ಮುಂದುವರಿಸುವಂತೆಯೂ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

Mr Deputy Specker in the chair.

ತುಂಗಭದ್ರ ಆಣೆಕಟ್ಟು ಪ್ರದೇಶದಲ್ಲಿ ಎಷ್ಟು ಅವಶ್ಯಕತೆ ಇದೆಯೋ ಅದಕ್ಕಿಂತ ಹೆಚ್ಚು ಪ್ರದೇಶವನ್ನು ಆಕ್ರಮಿಸಿಕೊಂಡು ರಿಸ್ಟ್ರಿಕ್ಟೆಡ್ ಏರಿಯ ಮಾಡಿದ್ದಾರೆ. ಈ ಪ್ರದೇಶ ಪ್ರವಾಸಿಗರ ದೃಷ್ಟಿಯಿಂದ ಬಹಳ ಮುಖ್ಯವಾದುದಷ್ಟೇ ಅಲ್ಲದೆ ವ್ಯವಸಾಯ ಕಾರ್ಮಿಕರು ಈ ಪ್ರದೇಶದಲ್ಲಿ ವಾಸವಾಗಿರುವುದರಿಂದ ಹೆಚ್ಚು ಪ್ರದೇಶವನ್ನು ತುಂಗಭದ್ರ ಬೋರ್ಡಿನವರು ವಶಪಡಿಸಿಕೊಂಡು ರಿಸ್ಟ್ರಿಕ್ಟೆಡ್ ಏರಿಯಾ ಮಾಡಿರುವುದರಿಂದ ಜನರಿಗೆ ಬಹಳ ತೊಂದರೆಯಾಗಿದೆ. ಈ ಪ್ರದೇಶವನ್ನು ಎಷ್ಟು ಅವಶ್ಯಕತೆ ಇದೆಯೋ ಅಷ್ಟಕ್ಕೆ ಕಡಿಮೆ ಮಾಡಿ ಹೆಚ್ಚಿನ ಜಾಗವನ್ನು ಕೂಲಿಕಾರರಿಗೆ ಬಡ ರೈತ ಕಾರ್ಮಿಕರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ನಿವೇಶನಗಳಾಗಿ ಹಂಚುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ತುಂಗಭದ್ರ ಆಣೆಕಟ್ಟು ಪ್ರದೇಶದಲ್ಲಿ ಪ್ರತಿವರ್ಷವೂ ಕಾಲುವೆಗಳ ದುರಸ್ತಿ ಎನ್ನುವ ನಾಟಕ ನಡೆದಿದೆ ನಾನು ಉದ್ದೇಶಪೂರ್ವಕವಾಗಿಯೇ ನಾಟಕ ಎಂದು ಹೇಳುತ್ತಿದ್ದೇನೆ. ೧೦-೧೨ ಲಕ್ಷ ರೂಪಾಯಿಗಳು ಪ್ರತಿವರ್ಷ ಇದಕ್ಕೆ ಖರ್ಚಾಗುತ್ತದೆ ಈ ವರ್ಷದ ಬಗ್ಗೆ ಹೇಳುವುದಾದರೆ ಈ ಕಾಲುವೆಗಳ ರಿಪೇರಿಗಾಗಿ ಟೆಂಡರನ್ನು ಕರೆದ ನಂತರ ಅಲ್ಲಿರುವ ಒಬ್ಬ ಹಿರಿಯ ಅಧಿಕಾರಿಗಳು ಅಲ್ಲಿನ ಕಂಟ್ರಾಕ್ಟರನ್ನೆಲ್ಲ ಕರೆಸಿ, ಅವರೊಡನೆ ಸಂಧಾನ ಮಾಡಿ ಇಂಥ ಕಂಟ್ರಾಕ್ಟರ್ ಇಂಥ ಕೆಲಸಕ್ಕೆ ಟೆಂಡರ್ ಹಾಕತಕ್ಕದ್ದು ಎಂದು ನಿರ್ಣಯ ಮಾಡಿ ಶೇ ೧೦ ಪರ್ಸೆಂಟ್ ಪೆಡ್ಯೂಲ್ ರೇಟಿಗಿಂತ ಹೆಚ್ಚಾಗಿ ಹಾಕಬೇಕೆಂದು ಒಪ್ಪಂದವಾಗಿ ಟೆಂಡರ್ ಹಾಕಿದರು ನಾನು ಅದನ್ನು ಪ್ರತಿಭಟಿಸಿ ತುಂಗಭದ್ರ ಬೋರ್ಡಿನ ಚೇರ್‌ಮನ್ ಅವರಿಗೂ ಕೇಂದ್ರ ಸರ್ಕಾರದ ನೀರಾವರಿ ಮಂತ್ರಿಗಳಿಗೂ ತುಂಗಭದ್ರ ಮಂಡಲಿಯಲ್ಲಿರುವ ನಮ್ಮ ರಾಜ್ಯದ ಪ್ರತಿನಿಧಿಗಳಿಗೂ ಇದರಲ್ಲಿ ಬಹಳ ಅನ್ಯಾಯವಾಗುತ್ತಿದೆ ಇದನ್ನು ತಡೆಗಟ್ಟಬೇಕು ಎಂದು ಅವರ ಗಮನಕ್ಕೆ ತಂದೆ ಇದಾದನಂತರ ತುಂಗಭದ್ರ ಬೋರ್ಡ್ ಚೇರ್‌ಮನ್ ಅವರು ಬಂದಾಗ ಅವರೊಡನೆ ಮಾತನಾಡಿದೆ. ಅವರು ವಿಷಯವನ್ನು ಮನದಟ್ಟು ಮಾಡಿಕೊಂಡು ಆ ಟೆಂಡರುಗಳನ್ನೆಲ್ಲ ಕ್ಯಾನ್ಸಲ್ ಮಾಡಿ ಮರು ಟೆಂಡರುಗಳನ್ನು ಕರೆದರು. ಮರು ಟೆಂಡರ್ ಕರೆದಾಗ ಪೆಡ್ಯೂಲ್ ರೇಟಿಗಿಂತ ಸರಾಸರಿ ೩೦ ಪರ್ಸೆಂಟ್ ಕಡಿಮೆ ರೇಟಿನಲ್ಲಿ ಟೆಂಡರ್ ಬಂತು. ಇದರಿಂದ ತುಂಗಭದ್ರ ಮಂಡಳಿಗೆ ೧೦-೧೫ ಲಕ್ಷ ರೂಪಾಯಿಗಳಷ್ಟು ಉಳಿತಾಯವಾಗಿದೆ. ಆದರೆ ಯಾವ ಅಧಿಕಾರಿ ಈ ಒಳಸಂಚು ನಡೆಸಿ ಟೆಂಡರುಗಳನ್ನು ಹಾಕಿಸಿದ್ದರೋ ಅವರು ಈ ಟೆಂಡರುಗಳನ್ನು ಕ್ಯಾನ್ಸಲ್ ಮಾಡಿಸಲು ವಿಶ್ವಪ್ರಯತ್ನ ಮಾಡುತ್ತಿದ್ದಾರೆ. ನಮ್ಮ ರಾಜ್ಯ ಸರ್ಕಾರದವರು ಮತ್ತು ಮಂಡಲಿಯಲ್ಲಿರುವ ನಮ್ಮ ಪ್ರತಿನಿಧಿಗಳು ಎಚ್ಚರಿಕೆಯಿಂದ ಇದ್ದು ಈ ಅಪರಾಧ ನಡೆಯದಂತೆ ತಡೆಗಟ್ಟಬೇಕಾದ್ದು ಅತ್ಯವಶ್ಯ ಮತ್ತು ಏನು ಟೆಂಡರುಗಳನ್ನು ಹೊಸದಾಗಿ ಕರೆದಿದ್ದಾರೆ ಅವುಗಳನ್ನು ಕೂಡಲೇ ಕಾರ್ಯಗತ ಮಾಡುವಂತೆ ಕಾರ್ಯಕ್ರಮ ಹಾಕಿ ಕಾರ್ಯಕ್ರಮ ಹಾಕಿಕೊಳ್ಳಬೇಕಾದ್ದು ಸಹ ಅವಶ್ಯಕವೆಂದು ಹೇಳುತ್ತೇನೆ.

ತುಂಗಭದ್ರ ಅಚ್ಚುಕಟ್ಟಿನಲ್ಲಿ ಅಕ್ರಮ ಸಾಗುವಳಿ ದೊಡ್ಡ ಪ್ರಮಾಣದಲ್ಲಿ ನಡೆಯುತ್ತದೆ. ಅನೇಕ ಸಲ ನಾವು ತುಂಗಭದ್ರ ಮಂಡಲಿಯ ಅಧಿಕಾರಿಗಳೊಡನೆ ಚರ್ಚೆ ಮಾಡಿದಾಗ ಕಾನೂನಿನಲ್ಲಿರುವ ಕೆಲವು ಕಲಮುಗಳ ಪ್ರಕಾರ ಯೋಗ್ಯವಾದ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ, ಶಿಕ್ಷೆ ವಿಧಿಸುವ ಕಾಲಂ ಇದೆ ಅದನ್ನು ಬದಲಾವಣೆ ಮಾಡಿ ಇನ್ನಷ್ಟು ಬಲ ಮಾಡಿದರೆ ಮಾತ್ರ ಅನಧಿಕೃತ ಸಾಗುವಳಿಯನ್ನು ಹತೋಟಿಯಲ್ಲಿಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದೆ ಹೋದರೆ ಸಾಧ್ಯವಾಗುವುದಿಲ್ಲವೆನ್ನುವ ಮಾತನ್ನು ಬಹಿರಂಗವಾಗಿ ಅನೇಕ ಸಲ ಹೇಳಿದ್ದಾರೆ. ಅನಧಿಕೃತವಾಗಿ ಸಾಗುವಳಿ ಮಾಡುವುದರಿಂದ ನ್ಯಾಯವಾಗಿ ಯಾರಿಗೆ ನೀರು ಸಿಕ್ಕಬೇಕೆಂಬುದೋ ಅವರಿಗೆ ಸಿಕ್ಕುವಂಥ ಸಂದರ್ಭವಿಲ್ಲ. ಅನಧಿಕೃತವಾಗಿ ಸಾಗುವಳಿ ನಡೆಸುವ

(ಶ್ರೀ ಬಿ. ಸತ್ಯನಾರಾಯಣಸಿಂಗ್)

ವರು ಸ್ಥಳದ ಶ್ರೀಮಂತರು ಮತ್ತು ರಾಜಕೀಯ ಪುಢಾರಿಗಳಾಗಿರುತ್ತಾರೆ. ಹೀಗಾಗಿ ಕೈಲಾಗದ ಬಡವರು ಕಷ್ಟಕ್ಕೆ ಗುರಿಯಾಗಿದ್ದಾರೆ. ಆದ್ದರಿಂದ ಅಷ್ಟು ಬೇಗನೆ ಇರಿಗೇಷನ್ ಆಕ್ಟಿನ ಸಂಬಂಧಪಟ್ಟ ಕಲಮಿಗೆ ತಿದ್ದುಪಡಿ ಮಾಡುವ ಕ್ರಮವನ್ನು ರಾಜ್ಯ ಸರ್ಕಾರ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ಕೃಷ್ಣನೀರಿನ ವಿವಾದದಲ್ಲಿ ಮಂಡಲಿ ಈಗಾಗಲೇ ತೀರ್ಪು ಕೊಟ್ಟಿದೆ. ಅದರಲ್ಲಿ ಒಂದು ಶಿಫಾರಸನ್ನು ಕೂಡ ಅದು ಹಾಕಿದೆ ಎಂದು ತಿಳಿದು ಬಂದಿದೆ. ನೀರಿನ ಹಂಚಿಕೆ ವಿಚಾರದಲ್ಲಿ ಒಂದು ಬೋರ್ಡ್ ಮಾಡಬೇಕೆಂದು ಅಭಿಪ್ರಾಯ ಪಟ್ಟಿರುವುದಾಗಿ ತಿಳಿದು ಬಂದಿದೆ. ಇಡೀ ಕೃಷ್ಣ ನೀರು ಹಂಚಿಕೆಯ ಮೇಲ್ವಿಚಾರಣೆಗಾಗಿ ಒಂದು ಬೋರ್ಡ್ ಮಾಡುವಾಗ ತುಂಗಭದ್ರಕ್ಕೆ ಸಂಬಂಧಪಟ್ಟಂತೆ ಬೇರೆ ತುಂಗಭದ್ರ ಮಂಡಲಿಯ ಆವಶ್ಯಕತೆ ಇರುವುದಿಲ್ಲ. ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಈ ವಿಚಾರವನ್ನು ಮನದಟ್ಟು ಮಾಡಿ ತುಂಗಭದ್ರ ಬೋರ್ಡ್‌ನ್ನು ರದ್ದುಪಡಿಸಬೇಕೆಂದು ಕೇಳಿಕೊಂಡು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಟಿ. ಆರ್. ಶಾಮಣ್ಣ (ಕೋಟೆ).— ಮಾನ್ಯ ಅಧ್ಯಕ್ಷರೇ, ಇಂದು ನಮ್ಮ ಮುಂದೆ ನಮ್ಮ ರಾಜ್ಯದ ಹಿತದೃಷ್ಟಿಯಿಂದ ಮುಖ್ಯವಾದ ಬೇಡಿಕೆಗಳನ್ನು ಇಟ್ಟಿದ್ದಾರೆ. ಕೃಷಿಗೆ ಸಂಬಂಧಪಟ್ಟಂಥ ಭೂಮಿಗಳನ್ನು ಅಭಿವೃದ್ಧಿ ಪಡಿಸುವುದು, ನೀರು ಹಾಗೂ ವಿದ್ಯುಚ್ಛಕ್ತಿ ಅಭಿವೃದ್ಧಿ ಸೌಕರ್ಯಗಳು ಮತ್ತು ರಾಷ್ಟ್ರದ ನೀರಾವರಿ, ಜಲಸಂಚಾರ, ಚರಂಡಿ ಮತ್ತು ಪ್ರವಾಹ ನಿಯಂತ್ರಣ ಮುಂತಾದವುಗಳಿಗೋಸ್ಕರ ಬೇಡಿಕೆಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಈಗ ಆಡಳಿತ ನಡೆಸುತ್ತಿರುವ ಸರ್ಕಾರದ ಮೇಲೆ ಎಲ್ಲ ಆರೋಪವನ್ನೂ ಕೂಡ ಹಾಕುವುದಕ್ಕೆ ನಾನು ಸಿದ್ಧನಾಗಿಲ್ಲ. ಏಕೆಂದರೆ— ಕಳೆದ ೧೫ ವರ್ಷಗಳಿಂದಲೂ ಈ ಸರ್ಕಾರ ನಾಗರೀಕರಿಂದ ವಸೂಲ್ಮಾಡಿದ ತೆರಿಗೆ ಹಣವನ್ನು, ಅಂದರೆ ಕೋಟಿಗಟ್ಟಲೆ ವಸೂಲಾಗಿರತಕ್ಕ ಹಣವನ್ನು ಇವರು ವರ್ಷಂ ಪ್ರತಿ ಖರ್ಚು ಮಾಡುತ್ತಿದ್ದರು ಅದರಿಂದ ಜನಸಾಮಾನ್ಯರಿಗೆ ಎಷ್ಟು ಪ್ರಮಾಣದಲ್ಲಿ ಪ್ರತಿಫಲ ದೊರೆಯಬೇಕಾಗಿತ್ತೋ ಅಷ್ಟು ದೊರೆಯದಿರುವುದು ಶೋಚನೀಯ. ದೊಡ್ಡ ದೊಡ್ಡ ನೀರಾವರಿ ಯೋಜನೆಗಳ ಮೇಲೆ ಸರ್ಕಾರದವರು ಕೋಟ್ಯಾಂತರ ಹಣವನ್ನು ಖರ್ಚು ಮಾಡುತ್ತಿದ್ದು ಜನರಿಗೆ ಅಗತ್ಯವಾದ ಆಹಾರ ವಸ್ತುಗಳು ಸಿಕ್ಕುತ್ತಿಲ್ಲ. ಒಂದುವೇಳೆ ಸಿಕ್ಕಿದರೂ ಅವುಗಳ ಬೆಲೆ ಪೂರಾ ಏರಿ ಹೋಗಿದೆ. ಇಲ್ಲಿ ಸರ್ಕಾರದವರು ಜನತೆಗೆ ಹೀಗೆ ಬರೀ ಒಂದು ಅಂಕೀ ಅಂಶಗಳನ್ನು ತೋರಿಸಿ ಅವರ ಹೊಟ್ಟೆಯನ್ನು ತುಂಬಿಸಲು ಸಾಧ್ಯವಿಲ್ಲ. ಈ ಅಂಕೀ ಅಂಶಗಳಿಂದ ಅವರ ಹಸಿವು ಇಂಗುವುದಿಲ್ಲ. ಆದುದರಿಂದ ಈ ಅಂಕೀ ಅಂಶಗಳನ್ನು ಕೈಬಿಟ್ಟು ಸರ್ಕಾರದವರು ಖರ್ಚುಮಾಡತಕ್ಕ ಸಾರ್ವಜನಿಕರ ಹಣಕ್ಕೂ ಅದರಿಂದ ಪ್ರಜೆಗಳಿಗೆ ದೊರೆಯುತ್ತಿರುವ ಪ್ರತಿಫಲಕ್ಕೂ ಏನು ಸಂಬಂಧವಿದೆ ಎಂಬುದನ್ನು ಅಳೆಯತಕ್ಕ ಒಂದು ಸಾಧನ ಯಾವುದು ಎಂಬುದನ್ನು ಕಂಡು ಹಿಡಿದು ಅದರಂತೆ ಅವರಿಗೆ ಅನುಕೂಲಗಳನ್ನು ಒದಗಿಸದಿದ್ದರೆ ಈ ಖಾಲಿ ಅಂಕೀಅಂಶಗಳಿಂದ ಅವರಿಗೇನೂ ಪ್ರಯೋಜನವಿಲ್ಲ.

3-30 P.M.

ಇನ್ನು ಈ ಏರಿಯಾ ದೆವಲಪ್‌ಮೆಂಟಿನ ವಿಚಾರಕ್ಕೆ ಬಂದರೆ —ನಾವು ಆ ಇಲಾಖೆಯ ಡಿಮಾಂಡಿನಲ್ಲಿ ಹಣ ಯಾವುದಕ್ಕೆ ಹೆಚ್ಚು ಖರ್ಚಾಗುತ್ತಿದೆಯೆಂಬುದನ್ನು ಪರಿಶೀಲನೆ ಮಾಡಿದರೆ ಅದರಲ್ಲಿ ಬಹುಪಾಲು ನೌಕರರ ಸಂಬಳಕ್ಕಾಗಿ ಖರ್ಚಾಗುತ್ತಿರುವುದು ಕಂಡುಬರುತ್ತದೆ. ಹೆಚ್ಚು ಹಣವನ್ನು ಆಹಾರದ ಉತ್ಪಾದನೆಗೆ ವೆಚ್ಚಮಾಡದೆ ಹೀಗೆ ಸಂಬಳಕ್ಕೆ ಖರ್ಚುಮಾಡುತ್ತಿರುವುದು ಶೋಚನೀಯ. ಡ್ರೈ ಲ್ಯಾಂಡನ್ನು ಉತ್ತಮಪಡಿಸುವುದಕ್ಕೆ ಕಳೆದ ವರ್ಷದಲ್ಲಿ ಎಷ್ಟು ಹಣವನ್ನು ಇಡಲಾಗಿತ್ತೋ ಅದಕ್ಕಿಂತ ಕಡಮೆ ಹಣವನ್ನು ಪ್ರಸಕ್ತ ಸಾಲಿನಲ್ಲಿ ಒದಗಿಸಲಾಗಿದೆ. ಕಳೆದ ಸಾಲಿನಲ್ಲಿ ಪ್ಲಾನ್ಡ್ ಬಡ್ಜೆಟ್ಟಿನಲ್ಲಿ ೭೬ ಲಕ್ಷ ರೂಪಾಯಿ ಒದಗಿಸಿದ್ದರೆ ಈ ವರ್ಷ ಅದೇ ಹೆಡ್ಡಿನಲ್ಲಿ ೭೨ ಲಕ್ಷ ರೂಪಾಯಿ ಮಾತ್ರ ಒದಗಿಸಲಾಗಿದೆ. ನಾನ್ ಪ್ಲಾನ್ಡ್ ಬಾಬಿನಲ್ಲಿ ಕಳೆದ ಸಾಲಿನಲ್ಲಿ ೬ ಲಕ್ಷ ರೂಪಾಯಿ ಒದಗಿಸಿದ್ದರೆ ಪ್ರಸಕ್ತ ಸಾಲಿನಲ್ಲಿ ೩೨ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಆದರೆ ಇದಕ್ಕಿಂತ ಹೆಚ್ಚು ಹಣ ಸಂಬಳ ಸಾರಿಗೆಗೇ ಖರ್ಚಾಗಿವೆ. ಇದರಿಂದ ದೇಶದಲ್ಲಿ ಆಹಾರದ ಉತ್ಪನ್ನ ಹೆಚ್ಚಾಗಬೇಕೆಂದರೆ ಹೇಗೆ ಸಾಧ್ಯ? ಇನ್ನು ಕಾಲಕ್ರಮಕ್ಕೆ ರೈತರೂ ಕೂಡ ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯುವುದಕ್ಕೆ ಗಮನ ಕೊಡುತ್ತಿಲ್ಲ. ಅವರು ಹೆಚ್ಚು ಹೆಚ್ಚಾಗಿ ಕಮರ್ಷಿಯಲ್ ಬೆಳೆಗಳನ್ನ ಅಂದರೆ—ಶೇಂಗಾ, ಹತ್ತಿ, ಹೊಗೆಸೊಪ್ಪು ಇತ್ಯಾದಿಗಳನ್ನು ಬೆಳೆಯುವುದಕ್ಕೆ ಹೋಗಿದ್ದಾರೆ. ಇದರಿಂದ ಅರ್ಧ ದೇಶದಲ್ಲಿ ಆಹಾರದ ಕೊರತೆ ಹೆಚ್ಚಾಗುವುದಕ್ಕೆ ಕಾರಣವಾಗಿದೆ. ಈ ವಿಚಾರದಲ್ಲಿ ನನ

ಸಲಹೆ ಏನೆಂದರೆ—ಸರ್ಕಾರದವರು ಆದಷ್ಟು ಈ ಕಮರ್ಷಿಯಲ್ ಬೆಳೆಗಳನ್ನು ಕಡಿಮೆ ಮಾಡಿ ಅವಕ್ಕೆ ಬದಲು ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಇದರಿಂದ ದೇಶದಲ್ಲಿ ಆಹಾರದ ಪರಿಸ್ಥಿತಿ ಉತ್ತಮವಾಗುವುದಕ್ಕೆ ಸಾಧ್ಯವಿದೆ.

ಇನ್ನು ಡ್ರೈ ಲ್ಯಾಂಡುಗಳನ್ನು ಉತ್ತಮಪಡಿಸತಕ್ಕ ವಿಚಾರದಲ್ಲಿ ಬೇರೆ ಬೇರೆ ರಾಷ್ಟ್ರಗಳಲ್ಲಿ ಡ್ರೈ ಫಾರಂಗಳನ್ನು ಮಾಡುವುದಕ್ಕೆ ಹೆಚ್ಚು ಹಣವನ್ನು ಬಳಸಲಾಗುತ್ತಿದೆ. ಇಲ್ಲಿಯೂ ಅದನ್ನು ಮಾಡಬೇಕೆಂದು ಸಲಹೆ ಮಾಡುತ್ತೇನೆ. ಇನ್ನು ಆಹಾರ ಪರಿಸ್ಥಿತಿಯನ್ನು ಉತ್ತಮಗೊಳಿಸುವುದಕ್ಕೆ ನನ್ನ ಇನ್ನೊಂದು ಸಲಹೆ ಏನೆಂದರೆ— ಸರ್ಕಾರದವರು ಈ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳ ಮೇಲೆ ಅಪಾರ ಹಣವನ್ನು ಹಾಕುತ್ತಿದ್ದಾರೆ. ಇದು ಸರಿಯಲ್ಲ. ಇದರಿಂದ ನಿರೀಕ್ಷಿಸಿದ ಕಾಲಕ್ಕೆ ನಿರೀಕ್ಷಿಸಿದಮಟ್ಟದಲ್ಲಿ ಪ್ರತಿಫಲ ದೊರೆಯುವುದಿಲ್ಲ. ಆದಕ್ಕಾಗಿ ಇನ್ನು ಮೇಲೆ ಹೆಚ್ಚು ಹಣವನ್ನು ಮೀಡಿಯಂ ಮತ್ತು ಸ್ಮಾಲ್ ಪ್ರಾಜೆಕ್ಟ್‌ಗಳ ಮೇಲೆ ಹಾಕುವುದು ಉತ್ತಮವಾದದ್ದೆಂದು ಹೇಳುತ್ತೇನೆ. ಇವರಿಂದ ಬೇಗ ದೇಶದಲ್ಲಿ ಆಹಾರದ ಪರಿಸ್ಥಿತಿ ಉತ್ತಮಗೊಳ್ಳುವುದಕ್ಕೆ ಅವಕಾಶವಿದೆ. ಇದಕ್ಕೆ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕು. ಅಲ್ಲದೆ ನಮಗೆಲ್ಲರಿಗೂ ಗೊತ್ತಿದ್ದಂತೆ ಹಿಂದೆ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳು ಅಂದರೆ ಕನ್ನಂಬಾಡಿ ಕಟ್ಟೆ ಬತ್ತಿ ಹೋಗಿತ್ತು, ತುಂಗಭದ್ರಾ ಮತ್ತು ಕೃಷ್ಣಾ ನದಿಗಳು ಬತ್ತಿಹೋಗಿದ್ದವು ಹೀಗೆ ದೊಡ್ಡ ದೊಡ್ಡ ನದಿಗಳಲ್ಲೇ ನೀರು ಬತ್ತುತ್ತದೆ ಎನ್ನುವಾಗ ನಮಗೆ ಈ ದೊಡ್ಡ ಪ್ರಾಜೆಕ್ಟ್‌ಗಳನ್ನು ಕಟ್ಟಿಕೊಂಡು ಇಲ್ಲಿ ಮಾಡುವುದಾದರೂ ಏನು? ಇದೇ ಯೋಜನೆಗಳನ್ನು ನಾವು ಮುಂದುವರಿಸುತ್ತಾ ಹೋದರೆ ನಾವು ಇನ್ನೂ ದೊಡ್ಡ ಕಷ್ಟಕ್ಕೆ ಗುರಿಯಾಗಬೇಕಾಗುವುದು,

ಇನ್ನು ನೀರನ್ನು ಹೆಚ್ಚು ಹೆಚ್ಚು ಒದಗಿಸುವುದರ ಜೊತೆಗೆ ಹೆಚ್ಚು ಹೆಚ್ಚು ಗೊಬ್ಬರವನ್ನೂ ಕೂಡ ಒದಗಿಸುವುದಕ್ಕೆ ಹೆಚ್ಚು ಗಮನ ಕೊಡಬೇಕು. ಇಲ್ಲದಿದ್ದರೆ ನಮ್ಮಲ್ಲಿ ಹೆಚ್ಚು ಆಹಾರವನ್ನು ಉತ್ಪತ್ತಿ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ರಾಜ್ಯದಲ್ಲಿ ಹೆಚ್ಚು ಗೊಬ್ಬರವನ್ನು ಉತ್ಪತ್ತಿ ಮಾಡಲು ಸರ್ಕಾರದವರು ತ್ವರಿತವಾಗಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಇನ್ನು ನಮ್ಮಲ್ಲಿ ಹಿಂದೆ ರೈತರು ಬಳಸುತ್ತಿದ್ದ ಹಸಿರೆಲೆ ಗೊಬ್ಬರ ಮತ್ತು ದನಗಳ ಗೊಬ್ಬರ ಇವುಗಳನ್ನೂ ಕೂಡ ಹೆಚ್ಚು ಪ್ರಮಾಣದಲ್ಲಿ ಬಳಸುವುದಕ್ಕೆ ಅವರಿಗೆ ಉತ್ತೇಜನ ಕೊಡಬೇಕು. ನಾವು ಯಾವತ್ತೂ ಈ ಕೃತಕ ಗೊಬ್ಬರಗಳನ್ನೇ ನಂಬಿಕೊಂಡು ಇರುವುದಕ್ಕಾಗುವುದಿಲ್ಲ.

ನಮ್ಮಲ್ಲಿ ದೊಡ್ಡ ನೀರಾವರಿಗಳ ಬಗ್ಗೆ ಹಿಂದಿನ ಸರ್ಕಾರ ಸಾಕಷ್ಟು ಶ್ರದ್ಧೆ ವಹಿಸಲಿಲ್ಲ. ಈಗಿರತಕ್ಕ ಸರ್ಕಾರಕ್ಕೆ ಕೇಂದ್ರದಲ್ಲಿ ಹೆಚ್ಚು ಪ್ರಭಾವ ಬೀರಿ ಅನುಕೂಲ ಪಡೆಯಲು ಅವಕಾಶವಿದ್ದಾಗ್ಯೂ ಇವರು ಮನಸ್ಸು ಮಾಡಿಲ್ಲ ಹೀಗಾಗಿ ಕರ್ನಾಟಕಕ್ಕೆ ಅವಕಾಶವಿದ್ದಾಗ್ಯೂ ಇವರು ಮನಸ್ಸು ಮಾಡಿಲ್ಲ. ಹೀಗಾಗಿ ಕರ್ನಾಟಕಕ್ಕೆ ಹಿಂದಿನಿಂದಲೂ ಅನಾನುಕೂಲವಾಗುತ್ತಲೇ ಬಂದಿದೆ. ಆದರೆ ಇಲ್ಲಿ ಒಂದು ವಿಚಾರ ನಾವು ಬೇರೆ ರಾಜ್ಯಗಳ ವಿಚಾರ ತೆಗೆದುಕೊಂಡರೆ—ಕೇಂದ್ರದ ನೀರಾವರಿ ಖಾತೆ ಆಂಧ್ರಕ್ಕೆ ಸೇರಿದ ಒಬ್ಬ ಮಂತ್ರಿಗಳ ಕೈಲಿದ್ದುದರಿಂದ ಆಂಧ್ರಕ್ಕೆ ಬೇಕಾದಷ್ಟು ಅನುಕೂಲವಾಗಿದೆ ನಾನು ಹಿಂದೆ ಒಂದಾವರ್ತಿ ಆ ಆಂಧ್ರಕ್ಕೆ ಹೋಗಿದ್ದಾಗ ಅಲ್ಲಿ ಅವರು ಕೇಂದ್ರದವರ ಅನುಮತಿ ಇಲ್ಲವಿದ್ದಾಗ್ಯೂ ಅವರು ಶ್ರೀಶೈಲ ಮತ್ತು ನಾಗಾರ್ಜುನ ಸಾಗರ ಇತ್ಯಾದಿ ದೊಡ್ಡ ದೊಡ್ಡ ಡ್ಯಾಮುಗಳನ್ನು ಮಾಡಿಕೊಂಡರು. ಮಹಾರಾಷ್ಟ್ರದವರ ಕೈಲಿ ವಿತ್ತೀಯ ಆಯೋಗದ ಅಧ್ಯಕ್ಷ ಪದವಿ ಸಿಕ್ಕಿದ್ದರಿಂದ ಅವರಿಗೆ ಅಲ್ಲಿ ಬೇಕಾದಷ್ಟು ಅನುಕೂಲವಾಯಿತು. ಆದರೆ ಇಲ್ಲಿ ನಮ್ಮ ಸರ್ಕಾರ ನಿದ್ರೆ ಮಾಡುತ್ತಿದೆ. ಒಂದು ವೇಳೆ ಇವರು ಆರಂಭಕ್ಕೆ ಕೈ ಹಾಕಿದರೂ ಇವರ ಕೆಲಸಗಳೆಲ್ಲ ಕುಂಟಿಕೊಂಡು ಸಾಗುತ್ತಿವೆ. ನಾವು ಹೀಗೆ ನಿದ್ರೆ ಮಾಡುತ್ತ ಕುಳಿತರೆ ಮುಂದೆ ನಮ್ಮಲ್ಲಿ ನಡೆಯಬೇಕಾದ ಯೋಜನಾ ಕಾರ್ಯಗಳ ವೆಚ್ಚ ವಿಪರೀತವಾಗಿ ಇಲ್ಲಿ ಆಹಾರ ಧಾನ್ಯಗಳನ್ನು ಹೆಚ್ಚು ಉತ್ಪಾದನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಆದ್ದರಿಂದ ಆದ್ಯ ಗಮನವನ್ನು ನೀರಾವರಿಗೆ ಕೊಡಬೇಕು. ತಾವು ಇದಕ್ಕೆ ಗಮನವನ್ನು ಕೊಡದೇ ಹೋದ ಪಕ್ಷದಲ್ಲಿ ಹಿಂದಿನ ಸರ್ಕಾರದವರು ಯಾವ ತಪ್ಪನ್ನು ಮಾಡಿದ್ದರೋ ಅದನ್ನೇ ನೀವು ಮುಂದುವರಿಸಿಕೊಂಡು ಹೋಗುತ್ತೀರಿ ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬರೀ ನೀರನ್ನು ಒದಗಿಸುವುದರ ಜೊತೆಗೆ ಒಳ್ಳೆಯ ಬೀಜದ ಬೆಳವಣಿಗೆಗೂ ಸಹಾಯವನ್ನು ಕೊಡಬೇಕಾಗಿತ್ತು. ಸರಿಯಾದಂಥ ಬೀಜಗಳನ್ನು ಒದಗಿಸದೆ, ಅನೇಕ ಕಡೆ ಸರಿಯಾದ ಮೊಳಕೆಗಳೇ ಬರಲಿಲ್ಲ ಎನ್ನತಕ್ಕ ದೂರನ್ನು ಅನೇಕ ಕಡೆ ನಾವು ಕೇಳಿದ್ದೇವೆ. ಉತ್ತಮವಾದಂಥ ಬೀಜಗಳನ್ನು ಸರ್ಕಾರದವರು ಒದಗಿಸದೆ ಹೋದ ಪಕ್ಷದಲ್ಲಿ ಉತ್ತಮ ಬೆಳೆಯಾಗುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವುದು ಎಲ್ಲರಿಗೂ ಗೊತ್ತಿದೆ. ಮಲ್ಕಿ ಎನ್ನತಕ್ಕ ಹತ್ತಿಬೀಜ, ಹಿಂದೆ ೮೦ ರೂಪಾಯಿಗಳಿಗೆ ಒಂದು ಕೆ. ಜಿ. ಇದ್ದದ್ದು, ಈಗ ೪೦೦ ರೂಪಾಯಿಗಳಿಗೆ ಒಂದು ಕೆ. ಜಿ. ಆಗಿದೆ ಎಂದು ತಿಳಿದವರಿಂದ ಕೇಳಿದ್ದೇನೆ. ಈ ಬೀಜದ ಬೆಲೆ ಐದು ಪಟ್ಟಷ್ಟು ಏರಿದರೆ ಕೊಳ್ಳತಕ್ಕ ರೈತರಿಗೆ ಎಷ್ಟು ಅನಾನುಕೂಲವಾಗುತ್ತದೆ, ಬೆಳೆಗಳಿಗೆ ಎಷ್ಟು ಅನಾನುಕೂಲ

(ಶ್ರೀ ಟಿ. ಆರ್. ಶಾಮಣ್ಣ)

ದಾಗುತ್ತದೆ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಆದ್ದರಿಂದ ಸರ್ಕಾರದವರು ಆಹಾರದ ಉತ್ಪಾದನೆಗೆ ಅತಿಮುಖ್ಯವಾದಂಥ ನೀರು ಬೇಕಾದಂಥ ಗೊಬ್ಬರ ಮತ್ತು ಒಳ್ಳೆಯ ಬೀಜ

ಗಳನ್ನು ಒದಗಿಸತಕ್ಕುದು ಅವಶ್ಯವಾಗಿದೆ. ಮುಖ್ಯವಾಗಿ ರೈತರಿಗೆ ಸಾಕಾದಷ್ಟು ಹಣದ ಸಹಾಯವನ್ನು ಸರಿಯಾದ ರೀತಿಯಲ್ಲಿ ಮಾಡಿ ಕೊಡಬೇಕಾಗುತ್ತದೆ. ಹೆಚ್ಚಿನ ಸಹಾಯವನ್ನು ರೈತರಿಗೆ ಕೊಟ್ಟರೂ ಕೂಡ ಅದನ್ನು ಅನೇಕ ಮಧ್ಯವರ್ತಿಗಳು ತಮ್ಮ ಪ್ರಭಾವವನ್ನು ಬೀರಿ, ಯಾರು ಇವರಿಗೆ ದುಡ್ಡು ಕೊಡುತ್ತಾರೋ ಅಂಥವರಿಗೆ ಹಣ ಸಹಾಯವನ್ನು ಪಡೆಯುವಂತೆ ಮಾಡುತ್ತಾರೆ. ಆದರೆ ನಿಜವಾಗಿಯೂ ಕಷ್ಟ ಪಟ್ಟ ರೈತರಿಗೆ ಸರ್ಕಾರದಿಂದ ಸಹಾಯವನ್ನು ಪಡೆಯುವುದು ಕಷ್ಟವಾಗಿದೆ. ನಾವು ಯಾವ ಸಮಸ್ಯೆಯನ್ನಾದರೂ ಬಗೆಹರಿಸಬಹುದು. ಆದರೆ ಆಹಾರ ಸಮಸ್ಯೆಯನ್ನು ಬಗೆಹರಿಸುವುದು ಸ್ವಲ್ಪ ಕಷ್ಟ. ಆದ್ದರಿಂದ ರೆವಿನ್ಯೂ ಖಾತೆಯವರು ಅಗ್ರಿಕಲ್ಚರ್ ಖಾತೆಯವರು, ಹಣಕಾಸಿನ ಖಾತೆಯವರು, ಎಲ್ಲರೂ ಸೇರಿ ಒಂದು ಹೈ ಪವರ್ ಬಾಡಿಯನ್ನು ಏನಾದರೂ ಮಾಡಿಕೊಂಡು ಅದಷ್ಟು ಜಾಗ್ರತೆ ಆಹಾರ ಉತ್ಪಾದನೆಯನ್ನು ಹೆಚ್ಚು ಮಾಡಲಿಕ್ಕೆ ಅವಕಾಶ ಕೊಡದೆ ಹೋದ ಪಕ್ಷದಲ್ಲಿ, ನಿಮ್ಮ ಲ್ಯಾಂಡ್ ರಿಫಾರಂಸ್ ನಿಂದಾಗಲೀ ಇನ್ನಾವ ರಿಫಾರಂಸ್ ನಿಂದಾಗಲಿ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ನಾವು ಒಂದು ಹೈ ಪವರ್ ಕಮಿಟಿಯನ್ನು ಏರ್ಪಾಡು ಮಾಡಬೇಕು ಎಂದು ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ.

ನಮ್ಮ ರೈತರು ಈ ವಾಣಿಜ್ಯ ಬೆಳೆಗಳನ್ನು ಹೆಚ್ಚಾಗಿ ಬೆಳೆಯುತಕ್ಕ ಸಂದರ್ಭವನ್ನು ನಾವು ನೋಡುತ್ತಿದ್ದೇವೆ. ಪಟ್ಟಭದ್ರ ಶಕ್ತಿಗಳು ಮತ್ತು ಇತರೆ ರೈತರುಗಳು ತಮಗೆ ಯಾವುದರಲ್ಲಿ ಹೆಚ್ಚು ಲಾಭ ಬರುತ್ತದೆಯೋ ಅಂಥಾದಕ್ಕೆ ಹೆಚ್ಚು ಗಮನ ಕೊಡುತ್ತಾರೆ. ಜನಗಳಿಗೆ ಅಗತ್ಯವಾದ ಬೆಳೆಗಳನ್ನು ಬೆಳೆಯುವುದಕ್ಕೆ ಇವರು ಸಾಕಾದಷ್ಟು ಆಸಕ್ತಿಯನ್ನು ವಹಿಸುತ್ತಿಲ್ಲ. ಸರ್ಕಾರದವರು ಇವನ್ನು ಯೋಚನೆ ಮಾಡಿ, ವಾಣಿಜ್ಯ ಬೆಳೆ ಮತ್ತು ಆಹಾರ ಬೆಳೆಗಳನ್ನು ಪ್ರಪೋರ್ಷನೇಟ್ ಆಗಿ ಬೆಳೆಯಬೇಕು ಎನ್ನುವುದನ್ನು ಮಾಡಿ ಆಹಾರದ ಉತ್ಪನ್ನವನ್ನು ಮಾಡುವವರಿಗೆ ಒಂದು ರೀತಿಯ ಸಬ್ಸಿಡಿ ಮತ್ತು ಅನುಕೂಲವನ್ನು ಒದಗಿಸಿಕೊಡುತ್ತೇವೆಂದು ಹೇಳಬೇಕಾದದ್ದು ಅತಿ ಮುಖ್ಯ. ಈಗ ಲ್ಯಾಂಡ್ ರಿಫಾರಂಸ್ ಜಾರಿಗೆ ಬಂದಿದೆ. ಇದರ ಮುಖ್ಯ ಉದ್ದೇಶವಾದರೂ ಇಷ್ಟೇ, ಉಳುತಕ್ಕವನಿಗೆ ಹೊಲ ಕೊಡಬೇಕು ಎನ್ನುವುದು. ಇದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಈಗ ನಮ್ಮ ಬಡ್ಜೆಟ್ಟಿನಲ್ಲಿ ಪ್ರೊವೈಡ್ ಮಾಡಿರತಕ್ಕ ಹಣ ಸ್ವಲ್ಪವೂ ಕೂಡ ಸಾಕಾಗುವುದಿಲ್ಲ. ಆದ್ದರಿಂದ ನೀವು ಯಾರಿಗೆ ಜಮೀನನ್ನು ಹಂಚುತ್ತೀರೋ ಅವರಿಗೆ ಬೇಕಾದಂಥ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ಇದನ್ನು ನಾನು ಅನೇಕ ಸಾರಿ ಒತ್ತಾಯವಾಗಿ ಹೇಳಿದ್ದೇನೆ. ಇದಕ್ಕೆ ಬಡ್ಜೆಟ್ಟಿನಲ್ಲಿ ಇಟ್ಟಿರತಕ್ಕದ್ದು ಕೇವಲ ೩೦ ಲಕ್ಷ ರೂಪಾಯಿಗಳು, ಅದು ಬರೀ ಸಂಬಳ ಸಾರಿಗೆಗಳಿಗೆ ಸಾಕಾಗುತ್ತದೆ. ಯಾವ ಪ್ರಧಾನವಾದಂಥ ಉತ್ಪಾದನೆಯೂ ಕೂಡ ಇದರಿಂದ ಆಗುವುದಿಲ್ಲ.

ಮುಖ್ಯವಾಗಿ ರೈತನಿಗೆ ಬೇಕಾದಂಥ ಪಂಪು ಸೆಟ್ಟುಗಳನ್ನು ಸಕಾಲದಲ್ಲಿ ಸರ್ಕಾರದವರು ಒದಗಿಸುತ್ತಿಲ್ಲ ಮತ್ತು ಸಾಕಾದಷ್ಟು ಸಂಖ್ಯೆಯಲ್ಲಿಯೂ ಪಂಪ್ ಸೆಟ್ಟುಗಳು ಸಿಕ್ಕುತ್ತಿಲ್ಲ ಎನ್ನುವ ದೊಡ್ಡ ದೂರು ಇದೆ. ಪಂಪ್‌ಸೆಟ್ಟುಗಳನ್ನು ಒದಗಿಸುವುದರ ಬಗ್ಗೆ ವಿದ್ಯುಚ್ಛಕ್ತಿ ಮಂಡಲಿಯವರೊಂದಿಗೆ ಚರ್ಚೆಮಾಡಿ, ಪಂಪ್ ಸೆಟ್‌ಗಳನ್ನು ಒದಗಿಸುವುದಕ್ಕೆ ತಕ್ಕ ಕಾರ್ಯಕ್ರಮವನ್ನು ಬೇಗ ತೆಗೆದುಕೊಳ್ಳಬೇಕಾದುದು ಅತಿ ಅಗತ್ಯ.

ನಮ್ಮ ಮುಂದೆ ಇಟ್ಟಿರತಕ್ಕ ಈ ವಾಟರ್ ಮತ್ತು ಪವರ್‌ಗೆ ಸಂಬಂಧಪಟ್ಟ ಡಿಮ್ಯಾಂಡ್ ಏನು ಇದೆ, ಇದರಲ್ಲಿ ಈ ಎರಡನ್ನೂ ಉತ್ಪನ್ನ ಮಾಡಬೇಕಾದದ್ದು ಅತಿ ಮುಖ್ಯ. ಇದರ ಬಗ್ಗೆ ಸುಮಾರು ೭೩ ಲಕ್ಷ ರೂಪಾಯಿಗಳ ಬಡ್ಜೆಟ್ಟನ್ನು ಇಟ್ಟಿದ್ದಾರೆ. ಇದು ಸಾಲುವುದಿಲ್ಲ. ಇದರ ಬಗ್ಗೆ ಹೆಚ್ಚಿನ ಹಣವನ್ನು ಒದಗಿಸದೆಹೋದ ಪಕ್ಷದಲ್ಲಿ ಇದು ನೌಕರರ ಸಂಬಳ ಸಾರಿಗೆಗಳಿಗೆ ಖರ್ಚು ಆಗುತ್ತದೆಯೇ ಹೊರತು ಇದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಆದ್ದರಿಂದ ಇದರ ಉತ್ಪನ್ನಕ್ಕೆ ಬೇಕಾದಂಥ ಹೆಚ್ಚು ಹಣವನ್ನು ನೀವು ಒದಗಿಸಲೇಬೇಕಾಗುತ್ತದೆ ಎನ್ನುವುದನ್ನು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಪವರ್ ಬಗ್ಗೆ ಹೇಳುವುದಾದರೆ, ನನಗೆ ತಿಳಿದಮಟ್ಟಿಗೆ, ಇದನ್ನು ಉತ್ಪನ್ನ ಮಾಡತಕ್ಕ ಬೆಲೆ, ಒಂದು ಯೂನಿಟ್‌ಗೆ ೪ ಪೈಸೆಯಾಗುತ್ತದೆ. ಆದರೆ ನಮಗೆ ೩-೩೭ ಪೈಸೆಯಂತೆ ಕೊಡುತ್ತಿದ್ದಾರೆ. ಉತ್ಪನ್ನದ ಬೆಲೆ ಇಷ್ಟು ಕಮ್ಮಿ ಇರುವಾಗ ನಮಗೆ ಹೆಚ್ಚು ಬೆಲೆಯನ್ನು ನಿಗದಿ ಮಾಡುವುದಕ್ಕೆ ಕಾರಣ ಏನು ಎನ್ನುವುದರ ಬಗ್ಗೆ ಪರಿಶೀಲನೆ ಅಗತ್ಯವಾಗಿ ಆಗಬೇಕಾಗಿದೆ. ಪವರ್ ಉತ್ಪತ್ತಿಯಾಗತಕ್ಕ ನಮ್ಮ ರಾಜ್ಯದಲ್ಲಿ ಹೆಚ್ಚು ದರವನ್ನು ಗೊತ್ತುಮಾಡಿ, ಬೇರೆ ಬೇರೆ ರಾಜ್ಯಗಳಿಗೆ ಇದೇ ಪವರ್‌ನ್ನು ರಿಯಾಯಿತಿ ದರದಲ್ಲಿ ಕೊಡುತ್ತಿದ್ದಾರೆ. ನಮಗೆ ಈ ಒಂದು ರಿಯಾಯಿತಿ ಇಲ್ಲ, ಆದರಲ್ಲೂ ಕೆಲವು ಕೈಗಾರಿಕೆಗಳಿಗೆ, ಮತ್ತು ಬಾವಿ

ಗಳಿಂದ ನೀರನ್ನು ಎತ್ತುತಕ್ಕ ಪಂಪ್‌ಸೆಟ್ಟುಗಳಿಗೆ ಉಪಯೋಗಿಸತಕ್ಕ ಪವರ್‌ಗೆ ರಿಯಾಯಿತಿ ಕೊಡುವುದಕ್ಕೆ ಆದ್ಯತೆ ಕೊಟ್ಟು ಕಡಿಮೆ ದರವನ್ನು ಗೊತ್ತು ಮಾಡಬೇಕು. ಕೇಂದ್ರದ ಅರ್ಥಸಚಿವರು, ಬೆಲೆಗಳನ್ನು ಇಳಿಸುವುದಕ್ಕೆ ಸಾಧ್ಯವಿಲ್ಲ. ಈ ರೀತಿ ಬೆಲೆಗಳನ್ನೇ ಉಳಿಸುವುದಕ್ಕೆ ಸರ್ವಪ್ರಯತ್ನ ಮಾಡುತ್ತೇವೆ ಎಂದು ಹೇಳಿದ್ದಾರೆ. ಇದನ್ನು ನೋಡಿದರೆ ನಾವು ಜೀವನ ಮಾಡುವುದು ಕಷ್ಟವಾಗುತ್ತದೆ. ಅವರೇ ಈ ರೀತಿ ಹೇಳಿದ ಮೇಲೆ ನಾವು ಏನು ಮಾಡುವುದಕ್ಕಾಗುತ್ತದೆ? ಇದರ ಬಗ್ಗೆ ನಾವು ದೀರ್ಘವಾದ ಯೋಚನೆಯನ್ನು ಮಾಡಬೇಕಾಗುತ್ತದೆ. ಇರಿಗೇಷನ್ ಮತ್ತು ಪವರ್‌ಗೆ ನಾವು ಹೆಚ್ಚು ಹಣವನ್ನು ಖರ್ಚುಮಾಡದೆ ಹೋದರೆ ನಮ್ಮ ಆರ್ಥಿಕ ಸ್ಥಿತಿ ಉತ್ತಮವಾಗುವುದಿಲ್ಲ. ಇದಕ್ಕೆ ಏನೇನು ಕಾರ್ಯಕ್ರಮಗಳು ಬೇಕೋ ಅದನ್ನು ತೆಗೆದುಕೊಳ್ಳುವುದಕ್ಕೆ ಒಂದು ಅಧ್ಯಯನ ಮಾಡಬೇಕು ಎಂದು ನಾನಾದರೂ ಹೇಳುತ್ತೇನೆ, ಪಾಪ್ಯುಲಾರಿಟಿಗೋಸ್ಕರ ಯಾವ ಕೆಲಸವನ್ನು ಮಾಡತಕ್ಕುದು ಸರಿಯಲ್ಲ,

ನಮ್ಮ ನಗರ ಕಾರ್ಪೊರೇಷನ್ ನವರು ಹೆಚ್ಚಿನ ಪವರ್ ಅನ್ನು ಈ ಬೀದಿ ದೀಪಗಳಿಗೆ ಮತ್ತು ವಾಟರ್ ಸಪ್ಲೈಗೆ ಉಪಯೋಗಿಸುತ್ತಿದ್ದಾರೆ. ಕಾವೇರಿ ನೀರನ್ನು ತರುವುದಕ್ಕೆ ಪವರ್ ಅನ್ನು ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸುತ್ತಿದ್ದಾರೆ. ಇವರಿಗೂ ಸ್ವಲ್ಪ ರಿಯಾಯಿತಿ ತೋರಿಸುವುದಕ್ಕೆ ಸಾಧ್ಯವೇ ಎನ್ನುವುದನ್ನು ಸರ್ಕಾರದವರು ಯೋಚನೆ ಮಾಡಬೇಕಾದದ್ದು ಅತಿ ಅಗತ್ಯ. ನಮ್ಮ ಸರ್ಕಾರದವರು ಬೇರೆ ರಾಜ್ಯಗಳಿಗೆ ಪವರ್ ಕೊಡುವಾಗ ಬಹಳ ಕನಿಕರದಿಂದ ರಿಯಾಯಿತಿ ತೋರಿಸುತ್ತಾರೆ. ಅದೇ ರೀತಿಯಲ್ಲಿ, ಬೆಳಗಾಂ ಅಲ್ಯೂಮಿನಿಯಂ ಫ್ಯಾಕ್ಟರಿಗೆ ಪವರ್ ಅನ್ನು ಒಂದು ನಾಮಕಾವಸ್ತೆ ಬೆಲೆಗೆ ಕೊಡುತ್ತಿದ್ದಾರೆ. ಆದ್ದರಿಂದ ಈ ವ್ಯವಸಾಯಕ್ಕೆ ಉಪಯೋಗಿಸುವ ಪವರ್ ಅನ್ನು ಸಾಕಾದಷ್ಟು ರಿಯಾಯಿತಿ ದರದಲ್ಲಿ ಕೊಡದೆ ಇರತಕ್ಕದ್ದು ಬಹಳ ಶೋಚನೀಯವಾದ ವಿಚಾರ. ಆದ್ದರಿಂದ ಇದರ ಬಗ್ಗೆ ಒಂದು ದೀರ್ಘವಾದ ವಿಮರ್ಶೆ ನಡೆಯಬೇಕಾಗಿದೆ. ವಿದ್ಯುಚ್ಛಕ್ತಿ ಮಂಡಳಿಯವರು ಸಾಲವನ್ನು ಎತ್ತುವುದು, ಹೆಚ್ಚು ಖರ್ಚನ್ನು ತೋರಿಸುವುದು ಆಗಿದೆ. ವಿದ್ಯುಚ್ಛಕ್ತಿಯನ್ನು ಕಡಿಮೆ ಖರ್ಚಿನಲ್ಲಿ ಉತ್ಪನ್ನಮಾಡಿ, ಬಳಕೆದಾರರಿಗೆ ಕಡಿಮೆ ಬೆಲೆಗೆ ಕೊಡುವುದಕ್ಕೆ ಸಾಧ್ಯವೇ ಎನ್ನುವುದನ್ನು ಯೋಚನೆ ಮಾಡಬೇಕು. ಇಲ್ಲಿ ರೆವಿನ್ಯೂ ಸಚಿವರು ಮಾತ್ರ ಇದ್ದಾರೆ, ರೆವಿನ್ಯೂ ಸಚಿವರು ರೆವಿನ್ಯೂ ಹೆಚ್ಚಿಸುವುದರ ಜೊತೆಗೆ ಇದರ ಕಡೆಯೂ ಹೆಚ್ಚಿನ ಗಮನವನ್ನು ತಾವು ಕೊಡಬೇಕು ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಈಗ ತೆಗೆದುಕೊಂಡಿರುವ ಎಲ್ಲಾ ನೀರಾವರಿ ಕಾರ್ಯಗಳನ್ನೂ ಇತರ ಕಾರ್ಯಗಳನ್ನು ಕೈಬಿಟ್ಟಾದರೂ ಜಾಗ್ರತೆ ಮುಗಿಸಬೇಕು. ರಸ್ತೆ ಕೆಲಸ, ಸಮಾಜ ಕಲ್ಯಾಣದ ಕಾರ್ಯ, ಮುಂತಾದ ಅನ್‌ಪ್ರೊಡಕ್ಟಿವ್ ಕೆಲಸಗಳನ್ನು ಕಡಮೆಮಾಡಿಯಾದರೂ ಹೆಚ್ಚು ನೀರಾವರಿ ಕೆಲಸಗಳನ್ನು ಮಾಡಬೇಕು. ಹಾಗೆ ಮಾಡದಿದ್ದರೆ ಆಹಾರ ಸಮಸ್ಯೆ ಬಗೆಹರಿಯುವುದಿಲ್ಲ. ಅದು ಬಗೆಹರಿಯುವವರೆಗೆ ಫ್ಯಾಕ್ಟರಿಗಳವರ ಸ್ಟ್ರೈಕು, ವಿಧಾನಸೌಧದ ನೌಕರರ ಸ್ಟ್ರೈಕು ಮುಂತಾದವುಗಳು ಮುಂದುವರೆಯುವುವು. ಬೆಲೆ ಇಳಿಯದಿದ್ದರೆ ಎಷ್ಟು ಸಂಬಳ ಏರಿಕೆಗಾಗಿ ಖರ್ಚುಮಾಡಿದರೂ ಸಮಸ್ಯೆ ಬಗೆಹರಿಯುವುದಿಲ್ಲ. ಆದುದರಿಂದ ಸಾಮಾನುಗಳ ಬೆಲೆ ಇಳಿದು ಜನತೆ ಜೀವನಮಟ್ಟ ಸುಧಾರಿಸಬೇಕಾದರೆ ಬೆಲೆ ಇಳಿಸಲು ಸೂಕ್ತ ಕ್ರಮ ಕೈಕೊಳ್ಳಲೇಬೇಕು. ಈಗ ಕೋಟ್ಯಾಂತರ ರೂಪಾಯಿಗಳನ್ನು ಸಂಬಳಕ್ಕಾಗಿ ಒದಗಿಸುತ್ತಿದ್ದೀರಿ. ಆದರೆ ಅದರಿಂದ ಸಮಸ್ಯೆಗಳು ಎಷ್ಟುಮಟ್ಟಿಗೆ ಬಗೆಹರಿದಿವೆ ಎಂಬುದನ್ನು ಗಮನಿಸಿ ಬೆಲೆ ಇಳಿಸಲು ಸೂಕ್ತ ಕ್ರಮಗಳನ್ನು ಕೈಕೊಳ್ಳಬೇಕಾಗಿದೆ. ಈಗ ವರ್ಷೇ ವರ್ಷೇ ಬೆಲೆಗಳು ಏರುತ್ತಲೇ ಇವೆ. ಇಳಿಯುವುದು ಕಂಡುಬರುತ್ತಿಲ್ಲ. ಆದುದರಿಂದ ಭಾರಿ ಇರಿಗೇಷನ್ ಬಾಬಿಗೆ ಹೆಚ್ಚು ಖರ್ಚುಮಾಡುವುದಕ್ಕೆ ಬದಲಾಗಿ ಸಣ್ಣ ನೀರಾವರಿ ಯೋಜನೆಗಳಿಗೆ ಮೊದಲು ಆದ್ಯತೆ ಕೊಟ್ಟು ಅವುಗಳನ್ನು ಪೂರ್ಣಮಾಡಿ ನಂತರ ದೊಡ್ಡ ಯೋಜನೆಗೆ ಪ್ರಾಶಸ್ತ್ಯ ಕೊಡಬೇಕು, ಮೀಡಿಯಂ ಯೋಜನೆಗಳು ಮತ್ತು ಸಣ್ಣ ಸಣ್ಣ ಯೋಜನೆಗಳಿಗೆ ಸಾಕಷ್ಟು ಹಣ ಒದಗಿಸದಿದ್ದರೆ ಆಹಾರದ ಸಮಸ್ಯೆ ಬೇಗ ಬಗೆಹರಿಯುವುದಿಲ್ಲ. ಉತ್ಪತ್ತಿ ಹೆಚ್ಚುವುದಿಲ್ಲ. ಆದುದರಿಂದ ಸರಕಾರ ಮೈನರ್ ಮತ್ತು ಮೀಡಿಯಂ ಇರಿಗೇಷನ್ನಿಗೆ ಹೆಚ್ಚು ಹಣ ಒದಗಿಸಿ ಆದಷ್ಟು ಬೇಗ ಎಲ್ಲಾ ಪ್ರದೇಶಗಳಲ್ಲೂ ಈ ಕೆಲಸಗಳನ್ನು ಪೂರ್ತಿಮಾಡಿ ರೈತರಿಗೆ ಸುಖವಾಗುವಂತೆಯೂ ಆಹಾರದ ಉತ್ಪತ್ತಿ ಹೆಚ್ಚುವಂತೆಯೂ ಸೂಕ್ತಕ್ರಮ ತೆಗೆದುಕೊಳ್ಳಬೇಕು. ನಮ್ಮ ಮುಂದಿರುವ ಬೇಡಿಕೆಯ ಪ್ರಕಾರ ಹೆಚ್ಚು ಭಾಗ ಹಣ ಮೇಜರ್ ಇರಿಗೇಷನ್ನಿಗೆ ಮೀಸಲಾಗಿದೆ. ಮೈನರ್ ಮತ್ತು ಮೀಡಿಯಂ ಇರಿಗೇಷನ್ನಿಗೆ ಹೆಚ್ಚು ಹಣ ಮೀಸಲಾಗಿಟ್ಟಿಲ್ಲದಿರುವುದು ಶೋಚನೀಯ. ಇದರ ಬಗ್ಗೆ ಸರಕಾರ ಮುಖ್ಯವಾಗಿ ಗಮನಕೊಡಬೇಕು ಎಂದು ಒತ್ತಾಯವಾಗಿ ಹೇಳುತ್ತೇನೆ. ವ್ಯವಸಾಯ, ರೆವಿನ್ಯೂ, ಲೋಕೋಪಯೋಗಿ ಮತ್ತು ಹಣಕಾಸಿನ ಇಲಾಖೆಯ ಮಂತ್ರಿಗಳು ಒಟ್ಟಿಗೆ ಸೇರಿ ಒಂದು ಹೈಪವರ್ ಕಮಿಟಿ ಮಾಡಿ ಇರುವ ಸಮಸ್ಯೆಯನ್ನು ಬಗೆಹರಿಸಬೇಕು. ಹಾಗೆ ಮಾಡಿ ಆಹಾರದ ಉತ್ಪನ್ನವನ್ನು ಹೆಚ್ಚಿಸಲು ಸೂಕ್ತ ಕಾರ್ಯಕ್ರಮ ಕೈಕೊಳ್ಳಬೇಕು, ಇಲ್ಲದಿದ್ದರೆ ಇರುವ ಸಮಸ್ಯೆ ಬಗೆಹರಿಯುವುದಿಲ್ಲ. ಜನರು ಎರಡೂವರೆ ರೂಪಾಯಿಗೆ ಕೆ.ಜಿ. ಅಕ್ಕಿ ಕೊಂಡು ಸುಖವಾಗಿರಲು ಸಾಧ್ಯವಿಲ್ಲ. ಬಡವರು ಮತ್ತು ಮಧ್ಯಮವರ್ಗದವರಿಗೆ ಈಗ ಬೆಲೆಗಳು

(ಶ್ರೀ ಟಿ. ಆರ್ ಶಾಮಣ್ಣ)

ಏರಿರುವುದರಿಂದ ಬಹಳ ತೊಂದರೆಯಾಗಿದೆ, ಸರಕಾರಿ ನೌಕರರಿಗೆ ತೃಪ್ತಿಯಿಲ್ಲ. ಕೈಗಾರಿಕೆಗಳಲ್ಲಿ ಕೆಲಸ ಮಾಡುವವರಿಗೆ ತೃಪ್ತಿಯಿಲ್ಲ ಕಾರ್ಖಾನೆಗಳವರು ಮುಷ್ಕರ ಬೇಕಾದರೆ ಹೂಡಬಹುದು, ಅವಕ್ಕೆ ಅವಕಾಶವಿದೆ ಆದರೆ ಪೆನ್‌ಷನ್‌ದಾರರು, ವ್ಯವಸಾಯ ಮಾಡುವವರು, ಸ್ಟ್ರೈಕ್ ಮಾಡಲು ಶಕ್ತಿಯಿಲ್ಲದವರು ಮುಂತಾದವರಿಗೆ ಅನಾನುಕೂಲವಾಗಿದೆ ಕೆಲವರು ನಿರ್ಗತಿಕರಾಗಿ ಕೆಲಸಮಾಡಲು ಶಕ್ತಿಯಿಲ್ಲದೆ ಒದ್ದಾಡುತ್ತಿದ್ದಾರೆ. ಇವರೆಲ್ಲರಿಗೂ ಅನುಕೂಲವಾಗಬೇಕಾದರೆ ದೀರ್ಘವಾದ ಒಂದು ಯೋಜನೆ ಮಾಡಿ ಆಹಾರ ಸಮಸ್ಯೆಯನ್ನು ಹೂವಲು ಬಗೆಹರಿಸಬೇಕು. ಹಾಗೆ ಮಾಡದಿದ್ದರ ಬೆಲೆಗಳು ವರ್ಷೇವರ್ಷೇ ಏರಿ ಜಾರು ಬೇಸತ್ತು ಅವರನ್ನು ಸುಧಾರಿಸಲು ಸಾಧ್ಯವಿಲ್ಲದಂಥ ಪರಿಸ್ಥಿತಿ ಬರುವುದು. ಬೆಲೆ ಹತೋಟಿಗೆ ತರಬೇಕೆಂದರೆ ಇದು ರಾಜ್ಯ ಸರಕಾರಕ್ಕೆ ಸಂಬಂಧಪಟ್ಟಿಲ್ಲ. ಕೇಂದ್ರ ಸರಕಾರಕ್ಕೆ ಸಂಬಂಧಪಟ್ಟ ವಿಷಯ ಎಂದು ಹೇಳುತ್ತೀರಿ. ಆದರೆ ಹಾಗೆ ಹೇಳಿದರೆ ಆಗದು, ರಾಜ್ಯ ಸರಕಾರ ಮತ್ತು ಕೇಂದ್ರ ಸರಕಾರಗಳಲ್ಲಿ ಒಂದೇ ಆಡಳಿತ ಪಕ್ಷವಿರುವಾಗ ಇಬ್ಬರೂ ಪ್ರಯತ್ನಪಾಡಿ ಇರುವ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸಬೇಕು. ಈಗ ಇದ್ದಕ್ಕಿದ್ದಂತೆ ಬಟ್ಟೆ ಬೆಲೆ ಸೇಕಡ 10 ರಷ್ಟು ಹೆಚ್ಚಾಗಿದೆ. ಪೆಟ್ರೋಲ್ ಮೇಲೆ ಎಕ್ಸೈಜ್‌ರಸುಂಕ ಏರಿಸಿದ್ದಾರೆ ಕೇಂದ್ರ ಸರಕಾರ ತೆರಿಗೆ ಹೆಚ್ಚಿಸಿದಮೇಲೆ ರಾಜ್ಯ ಸರಕಾರ ಕೂಡ ಸೇಲ್ಸ್ ಟ್ಯಾಕ್ಸ್ ಮುಂತಾದ್ದನ್ನು ಏರಿಸುವುದು. ಹಾಲಿನಬೆಲೆಯನ್ನು ಈಗ ಹೆಚ್ಚಿಸಿದ್ದಾರೆ ಇವರಿಂದ ಜನರ ಕಷ್ಟಹೇಳತೀರದಾಗಿದೆ. ಸಂಪಾದನೆಗಿಂತ ಖರ್ಚು ಹೆಚ್ಚಾಗುತ್ತಿದೆ. ಸರಕಾರ ಜನರ ಹಿತದೃಷ್ಟಿಯಿಂದ ಬೇರೆಯವರಿಗೆ ತೊಂದರೆಯಾಗದಂತೆ ಕನ್‌ಸ್ಯೂಮರಿಗೆ ಅನುಕೂಲವಾಗುವಂತೆ ಸೂಕ್ತ ಕಾರ್ಯಕ್ರಮ ಹಾಕಿಕೊಳ್ಳಬೇಕು. ಅನೇಕ ರೈತರು ಈಗ ವಾಟರ್ ರೇಟ್ ಕೊಟ್ಟಿಲ್ಲ. ಬಹಳ ಬಾಕಿ ಇದೆ ಎಂದು ಲೆಕ್ಕದಿಂದ ಗೊತ್ತಾಗುವುದು. ಆದುದರಿಂದ ಬಡವರಿಗೆ ತೊಂದರೆಯಾಗದಂತೆ ಉತ್ತಮ ಸ್ಥಿತಿಯಲ್ಲಿರುವವರಿಂದ ಬರಬೇಕಾದ ಬಾಕಿಯನ್ನು ವಸೂಲುಮಾಡಬೇಕು. ಉತ್ಪತ್ತಿ ಹೆಚ್ಚು ಇರುವವರಿಂದ ಬರಬೇಕಾದ ಬಾಕಿಯನ್ನು ಕಡ್ಡಾಯವಾಗಿ ವಸೂಲುಮಾಡಲೇಬೇಕು. ಬಡವರಿಗೆ ಬೇಕಾದರೆ ಸ್ವಲ್ಪ ರಿಯಾಯಿತಿ ತೋರಿಸಿ. ಹಣವಂತರ ಬಾಕಿಯನ್ನು ಬಿಡದೆ ವಸೂಲು ಮಾಡಬೇಕು. ಬೆಂಗಳೂರು ನಗರದಲ್ಲಿ ವಾಟರ್ ಛಾರ್ಜು, ಲೈಟು ಛಾರ್ಜು ಬಾಕಿ ಇದ್ದರೆ ನಿರ್ದಾಕ್ಷಿಣ್ಯವಾಗಿ ನೀರು ಮತ್ತು ಪವರ್ ಕಟ್ ಮಾಡುವರು. ಆದರೆ ಹಳ್ಳಿಗಳ ಕಡೆ ಮತ್ತು ಇತರ ಪ್ರದೇಶಗಳಲ್ಲಿ ವಾಟರ್ ರೇಟ್ ಬಾಕಿ ಇದ್ದರೆ ಅವರ ಬಗ್ಗೆ ಯಾವ ಕ್ರಮ ತೆಗೆದುಕೊಂಡು ಅದನ್ನು ಜಾಗ್ರತೆ ವಸೂಲು ಮಾಡುತ್ತಿಲ್ಲ, ಇದು ಸರಿಯಲ್ಲ. ಸೂಕ್ತ ಕ್ರಮ ಇವರ ಬಗ್ಗೆ ಕೂಡಲೆ ತೆಗೆದುಕೊಳ್ಳಬೇಕೆಂದು ಒತ್ತಾಯಮಾಡುತ್ತೇನೆ ಅಲ್ಲದೆ ಬಾಕಿ ಹೆಚ್ಚಾದರೆ ರೈತರಿಗೆ ಕೊಡುವ ಶಕ್ತಿ ಇರುವುದಿಲ್ಲ. ಆದುದರಿಂದ ಆಯಾ ವರ್ಷವೇ ಕೊಡಬೇಕಾದ್ದನ್ನು ವಸೂಲು ಮಾಡಿದರೆ ರೈತರಿಗೂ ಭಾರವಾಗುವುದಿಲ್ಲ, ಸರಕಾರಕ್ಕೂ ಹಣ ಒದಗುವುದು. ಹೀಗೆ ವಸೂಲುಮಾಡದಿರುವುದು ಅಪರಾಧ ಎಂದು ಒತ್ತಿ ಹೇಳಬೇಕಾಗಿದೆ.

ಮತ್ತು ಈಗಲೇ ಹೇಳಿದಹಾಗೆ ನದಿ ನೀರಿನ ಹಂಚಿಕೆ ಸರಿಯಾಗಿ ಆಗಿ ನಮಗೆ ನ್ಯಾಯ ದೊರೆತಿಲ್ಲ, ಆಂಧ್ರ ಪ್ರದೇಶದ ಮಂತ್ರಿಗಳ ಊರವನ್ನು ಹೇಳಿದ್ದಾರೆ ಮಹಾರಾಷ್ಟ್ರದವರೂ ಅವರಿಗೆ ಬರಬೇಕಾದ ನೀರಿನ ಬಗ್ಗೆ ಒತ್ತಾಯ ಹಾಕುತ್ತಿದ್ದಾರೆ, ಹಾಗೆ ಆಂಧ್ರದವರು ಗಲಾಟೆ ಮಾಡುತ್ತಿದ್ದಾರೆ ನಮ್ಮ ಮಂತ್ರಿಗಳು ತಾವು ಬೇಕಾದಷ್ಟು ಒತ್ತಾಯ ಹಾಕಿರುವುದಾಗಿ ಹೇಳುತ್ತಿದ್ದಾರೆ. ನಮಗೆ ನ್ಯಾಯ ದೊರೆತಿಲ್ಲ, ನೀರಿನ ಹಂಚಿಕೆಯಲ್ಲಿ ಅನ್ಯಾಯವಾಗಿದೆ. ಆದುದರಿಂದ ಈಗಲಾದರೂ ಒತ್ತಾಯ ಮಾಡಿ ಕೇಂದ್ರ ಸರಕಾರಕ್ಕೆ ಸರಿಯಾದ ಅಂಕಿಅಂಶ ಒದಗಿಸಿ ನಮಗೆ ಬರಬೇಕಾದ ನೀರು ಬರುವಂತೆ ಕ್ರಮ ತೆಗೆದುಕೊಳ್ಳಬೇಕು. ಕಾವೇರಿ ನೀರಿನ ಬಗ್ಗೆ ತಮಿಳುನಾಡಿನವರು ತಮ್ಮ ಹಕ್ಕುಬಾಧ್ಯತೆ ಬಗ್ಗೆ ದೃಢವಾದ ನಿಲುವನ್ನು ತಾಳಿದ್ದಾರೆ. ಹಾಗೆಯೇ ನಮ್ಮ ಸರಕಾರದವರೂ ಸಹ ಕೃಷ್ಣ ಮತ್ತು ಕಾವೇರಿ ನದಿಗಳ ನೀರಿನಲ್ಲಿ ನಮಗೆ ಬರಬೇಕಾದ ಭಾಗವನ್ನು ಪಡೆಯಲು ಒತ್ತಾಯಮಾಡಿ ಪಡೆಯಬೇಕು, ನಮಗೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕು.

4–10 P.M.

ಇವತ್ತಿನ ದಿವಸ ಪವರ್ ಬಗ್ಗೆ ಹೇಳುವಾಗ, ಬೆಂಗಳೂರು ನಗರದಲ್ಲಿ ಮಳೆಗಾಲವಾಗಲಿ, ಗಾಳಿಕಾಲವಾಗಲಿ, ಬಿಸಿಲುಗಾಲವಾಗಲೀ, ಆಗಿಂದಾಗ್ಗೆ ಪವರ್ ಫೇಲ್ಯೂರ್ ಆಗುತ್ತದೆ. ಇದರಿಂದ ಓದತಕ್ಕ ಅನೇಕ ಹುಡುಗರಿಗೆ ತೊಂದರೆಯಾಗುತ್ತದೆ. ಇಷ್ಟೊಂದು ಹಣ ಖರ್ಚುಮಾಡತಕ್ಕ ಎಲೆಕ್ಟ್ರಿಸಿಟಿ ಬೋರ್ಡ್ ಆಗಿಂದಾಗ್ಗೆ ಪವರ್ ಫೈಲ್ಯೂರ್ ಆಗುವುದಕ್ಕೆ ಏನು ಕಾರಣ ಎಂದು ಪರೀಕ್ಷೆ ಮಾಡಿ ಜನಗಳಿಗೆ ಅನುಕೂಲ ಮಾಡತಕ್ಕ ಕಾರ್ಯಕ್ರಮ ತೆಗೆದುಕೊಂಡಿಲ್ಲ ಎಂದು ಒತ್ತಾಯಪೂರ್ವಕವಾಗಿ ಹೇಳಬೇಕಾಗಿದೆ. ಅದರಲ್ಲೂ ಕೂಡ ಕೈಗಾರಿಕೆಗಳನ್ನು ನಡೆಸತಕ್ಕವರಿಗೆ ಲೈಟ್ ಹೋದರೆ ಕಷ್ಟವಾಗುತ್ತದೆ. ಬೊಂಬಾಯಿಯಲ್ಲಿ ಪವರ್

ಆಕಸ್ಮಿಕವಾಗಿ ಕಟ್ ಆದರೆ, ಇಂಡಸ್ಟ್ರಿಯಲ್ ಕನ್‌ಸರ್ನ್ ಅವರು ಕೇಳುತಾರೆ, ನಮ್ಮಲ್ಲಿ ಕೇಳದೇ ಇರುವುದರಿಂದ ಯಾವಾಗ ಬೇಕಾದರೂ ಹೋಗಬಹುದು, ಗಾಳಿ ಬಾತು, ಮರ ಬಿದ್ದು ಹೋಗಿ ವೈರ್ ಹೋಗುತ್ತದೆ. ಎಲ್ಲಾ ಕಾಲದಲ್ಲೂ ಪವರ್ ನಿಂತು ಹೋಗತಕ್ಕ ಪರಿಸ್ಥಿತಿ ಇರುವುದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕು ಇಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇವೆ. ಮತ್ತು ಎಲೆಕ್ಟ್ರಿಸಿಟಿಗೆ ಸಂಬಂಧಪಟ್ಟಹಾಗೆ ಲೆಕ್ಕಪತ್ರಗಳನ್ನು ಇಷ್ಟೇ ಇಲ್ಲ. ಲಕ್ಷಾಂತರ ರೂಪಾಯಿ ವ್ಯತ್ಯಾಸ ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಬಂದಿದೆ. ಮೊನ್ನೆ ಕಾರ್ಪೊರೇಷನ್‌ನವರು ಲೆಕ್ಕ ಪರಿಶೀಲನೆ ಮಾಡಿ ೯ ಲಕ್ಷ ರೂಪಾಯಿ ವಸೂಲು ಮಾಡುವುದಕ್ಕೆ ಲೆಕ್ಕ ಕೊಟ್ಟರು. ಎಲೆಕ್ಟ್ರಿಸಿಟಿ ಬೋರ್ಡ್ ಲೆಕ್ಕಾಚಾರ ಸ್ವಲ್ಪವೂ ಕೂಡ ಸಮರ್ಪಕವಾಗಿಲ್ಲ. ಆದುದರಿಂದ ಸರ್ಕಾರದವರು ಆದೇಶ ಕೊಟ್ಟು ಬೇಕಾದರ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಕಡೆಯಿಂದ ಕಳುಹಿಸಿ ಲೆಕ್ಕದ ಪರಿಸ್ಥಿತಿ ಏಕೆ ಇಷ್ಟು ಹೊಲಸಾಗಿದೆ ಎನ್ನುವ ಬಗ್ಗೆ ಪರಿಶೀಲನೆ ಮಾಡಬೇಕಾಗಿದೆ. ಮದುವೆ ಮಂಟಪಿಯಲ್ಲಿ ಅಡೀಷನಲ್ ಲೈಟ್ ತೆಗೆದುಕೊಳ್ಳುವಾಗ, ಡಿಪಾಸಿಟ್ ೧೫—೨೦—೦೦೦ ರೂಪಾಯಿ ಕೊಡುತ್ತೇವೆ. ಯಾವುದೂ ಕೂಡ ರೀಫಂಡ್ ಬಂದಿಲ್ಲ. ನಾನು ಆರು ಸಂದರ್ಭಗಳಲ್ಲಿ ದುಡ್ಡನ್ನು ಕೊಟ್ಟಿದ್ದೇನೆ. ನಾಲ್ಕೈದು ವರ್ಷವಾದರೂ ಎಷ್ಟು ಖರ್ಚಾಗಿದೆ ಎಷ್ಟು ಬರಬೇಕು ಎನ್ನತಕ್ಕ ಲೆಕ್ಕ ಕೊಟ್ಟಿಲ್ಲ. ಆದುದರಿಂದ ಎಲೆಕ್ಟ್ರಿಸಿಟಿ ಬೋರ್ಡ್‌ನ್ನು ಸ್ಟ್ಯಾಟುಟರಿ ಬೋರ್ಡ್ ಮಾಡಿ, ಅದಕ್ಕೆ ಸರ್ವಾಧಿಕಾರ ಕೊಟ್ಟರೆ ಕಷ್ಟವಾಗುತ್ತದೆ ಸ್ಟ್ಯಾಟುಟರಿ ಬೋರ್ಡ್ ನಡೆಯತಕ್ಕದ್ದು ಸಾರ್ವಜನಿಕರ ಹಣದಿಂದ ಮತ್ತು ಸರ್ಕಾರ ಅನುಕೂಲ ಕೊಡುತ್ತಾ ಇರುವುದರಿಂದ. ಅದರ ಮೇಲೆ ಸರ್ಕಾರಕ್ಕೆ ಪೂರ್ಣವಾದ ಅಧಿಕಾರವಿದೆ. ಎಲೆಕ್ಟ್ರಿಸಿಟಿ ಬೋರ್ಡ್‌ನ ಲೆಕ್ಕವನ್ನು ಒತ್ತಾಯ ಪೂರ್ವಕವಾಗಿ ಪರಿಶೀಲನೆ ಮಾಡಬೇಕು. ಲೆಕ್ಕ ಪರಿಶೀಲನೆ ಮಾಡಲು ನಮ್ಮಲ್ಲಿ ಸಿಕ್ಕಿಲ್ಲ ಎಂದು ಮದ್ರಾಸಿನಿಂದ ಲೆಕ್ಕಕ್ಕೆ ಸಂಬಂಧಪಟ್ಟ ಅಧಿಕಾರಿಯನ್ನು ತಂದಿಟ್ಟು, ಆತನಿಗೆ ಬೇಕಾದ ಮನೆ, ಸಂಬಳ ಎಲ್ಲಾ ಸವಲತ್ತು ಕೊಟಿದ್ದೀರಿ. ಮೈಸೂರು ರಾಜ್ಯದಲ್ಲಿ ಲೆಕ್ಕ ಪರಿಶೀಲನೆ ಮಾಡುವವರ ಅಭಾವ ಎಂದು ಕಾಣುತ್ತದೆ. ಮದ್ರಾಸಿನಿಂದ ಕೃಷ್ಣಮೂರ್ತಿ ಎಂಬುವರನ್ನು ಕರೆಸಿ ಎಲ್ಲಾ ವಿಧವಾದ ಪ್ರಾಧಾನ್ಯತೆ ಕೊಟ್ಟುಕೊಂಡು ಬಂದಿದ್ದೀರಿ. ಇದನ್ನು ಸರಿಪಡಿಸುವುದು ಅತಿ ಅಗತ್ಯ ಎಂದು ಈ ಸಂದರ್ಭದಲ್ಲಿ ಹೇಳುತ್ತೇವೆ.

ಕೊನೆಯದಾಗಿ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ಅತಿಮುಖ್ಯವಾಗಿ, ಎಲೆಕ್ಟ್ರಿಸಿಟಿ ಪ್ರೊಡಕ್ಷನ್ ಕಾಸ್ಟ್ ೩ ಪೈಸೆಯಿಂದ ೪ ಪೈಸೆ ಎಂದು ಕೇಳಿದ್ದೇವೆ. ೩೫ ರಿಂದ ೩೯ ಪೈಸೆವರೆಗೆ ಚಾರ್ಜ್ ಮಾಡುತ್ತಾರೆ. ಇಷ್ಟಾದರೂ ಕೂಡ ಎಲೆಕ್ಟ್ರಿಸಿಟಿ ಬೋರ್ಡ್ ಸಾಲ ಬಗೆಹರಿಯುಲಿಲ್ಲ. ಮತ್ತು ಜನಗಳಿಗೆ ರಿಯಾಯಿತಿ ದರದಲ್ಲಿ ಸಪ್ಲೈ ಮಾಡುವುದಕ್ಕೆ ಆಗುವುದಿಲ್ಲ. ಓವರ್ ಹೆಡ್ ಚಾರ್ಜಸ್ ಎಷ್ಟು ? ಏಕೆ ೪ ಪೈಸೆಗೆ ತೆಗೆದುಕೊಂಡು ಖರ್ಚು ೩೦-೪೦ ಪೈಸೆವರೆಗೆ ಏರುವುದಕ್ಕೆ ಏನು ಕಾರಣ ಎಂದು ಸರ್ಕಾರದವರು ಪರಿಶೀಲನೆ ಮಾಡಬೇಕು. ಏತಕ್ಕೆಂದರೆ ಬೋರ್ಡ್‌ನ ಬಗ್ಗೆ ಸರ್ಕಾರದವರು ಸಾಕಾದಷ್ಟು ಹಿಡಿತ ಇಟ್ಟುಕೊಳ್ಳದೇ ಹೋದಪಕ್ಷದಲ್ಲಿ ನಾಗರೀಕರಿಗೆ ತೊಂದರೆಯಾಗುತ್ತದೆ. ನೀವು ಬೋರ್ಡ್ ಸ್ಟ್ಯಾಟುಟರಿ ಬೋರ್ಡ್ ಆದರ ಮೇಲೆ ನಮ್ಮ ಅಧಿಕಾರ ಇಲ್ಲ ಎಂದ ಸಬೂಬು ಹೇಳುತ್ತೀರಿ. ಆದರೆ ಸರ್ಕಾರ ಬೋರ್ಡ್ ಮುಖಾಂತರ ತಮಗೆ ಬೇಕಾದರೆ ಎಲ್ಲಾ ಅನುಕೂಲಪಡಿಸಿ ಕೊಳ್ಳುತ್ತದೆ. ಆದುದರಿಂದ ಬೋರ್ಡ್‌ನ್ನು ತೆಗೆದುಹಾಕುವುದಕ್ಕೆ ಪ್ರಯತ್ನಪಡಿ, ಇಲ್ಲದಿದ್ದರೆ ಬೋರ್ಡ್‌ಗಳ ಮೇಲೆ ಸರಿಯಾದಂಥ ಹಿಡಿತದನ್ನು ಇಟ್ಟುಕೊಳ್ಳುವುದಕ್ಕೆ ಪ್ರಯತ್ನಮಾಡಿ ಎಂದು ಹೇಳಿ, ನನಗೆ ಈ ದಿನ ಮಾತನಾಡುವುದಕ್ಕೆ ಅವಕಾಶ ಕೊಟ್ಟು ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಪೂರೈಸುತ್ತೇನೆ. ಇದಕ್ಕೆ ಸಂಬಂಧಪಟ್ಟಹಾಗೆ ನಾನು ಕಟ್ ಮೋಷನ್ಸ್ ಕೊಟ್ಟಿದ್ದೇನೆ, ದಯಮಾಟ್ಟು ಅದನ್ನು ಅವಹಾಹವೆಗೆ ತೆಗೆದುಕೊಂಡು ನಿಷ್ಪಕ್ಷಪಾತ ವಿಧ್ಯಪಕ್ಷದಲ್ಲಿ, ಸೂಕ್ತ ಕ್ರಮ ತೆಗೆದುಕೊಳ್ಳ ಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

✦ ಶ್ರೀ ಎಸ್. ಶೆಟ್ಟಿಸ್ವಾಮಿ (ಚಾಮರಾಜನಗರ).—ಸನ್ಮಾನ್ಯ ಉಪಾಧ್ಯಕ್ಷರೇ, ಸದನದ ಮುಂದೆ ಮಾನ್ಯ ಮುಖ್ಯ ಮಂತ್ರಿಗಳು ಇಟ್ಟಿರತಕ್ಕ ಬೇಡಿಕೆಗಳನ್ನು ಸಮರ್ಥಿಸುತ್ತಾ, ಈ ದೊಡ್ಡ ನೀರಾವರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಬಗ್ಗೆ ಮತ್ತು ಈ ಯೋಜನೆಗಳ ಬಗೆ ಸರ್ಕಾರ ತೆಗೆದುಕೊಂಡಿರತಕ್ಕ ನಿಲುವಿನ ಬಗ್ಗೆ ಕೆಲವಾರು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛಿಸುತ್ತೇನೆ. ೧೯೭೪-೭೫ನೇ ನಮ್ಮ ಅಂದಾಜಿನಲ್ಲಿ ದೊಡ್ಡ ನೀರಾವರಿ ಮತ್ತು ಮಧ್ಯಮ ನೀರಾವರಿಗಳಿಗೆ ಹಣವನ್ನು ಹೆಚ್ಚಿಗೆ ಇಟ್ಟಿದ್ದಾರೆ. ಅದಕ್ಕಾಗಿ ನಾವು ಸಂತೋಷ ಪಡೋಣ. ಆದರೆ ೧೯೭೧-೭೨ ರಲ್ಲಿ ೧೯೭೨-೭೩ ರಲ್ಲಿ ಮತ್ತು ಕಳೆದ ವರ್ಷ ೧೯೭೩-೭೪ ರಲ್ಲಿ ಇಡೀ ರಾಜ್ಯದಲ್ಲಿ ಕೃಷ್ಣ ಬೇಸಿನ್ ಆಗಲೀ ಕಾವೇರಿ ಬೇಸಿನ್ ಆಗಲೀ ಸರ್ಕಾರದವರು ಕೈಗೊಂಡಿರತಕ್ಕ ದೊಡ್ಡ ನೀರಾವರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ, ಕಳೆದ ೩—೪ ವರ್ಷಗಳಿಂದ ಏ ಹಣವನ್ನು

(ಶ್ರೀ ಎಸ್. ಪುಟ್ಟಸ್ವಾಮಿ)

ನಾವು ಇಟ್ಟು ಇಷ್ಟು ಖರ್ಚುಮಾಡಿ, ಕೆಲಸ ಮುಗಿಸತಕ್ಕ ಕೆಲಸ ನಡೆದಿದೆ ಇದರ ಬಗ್ಗೆ ಸ್ಥೂಲವಾಗಿ ಪರಿಶೀಲನೆ ನಡೆಸಿದರೆ, ವರ್ಷಗಳ ಕಳೆದ ಹಾಗೆಲ್ಲ ಪ್ರಾಜೆಕ್ಟನ್ನು ಕಟ್ಟತಕ್ಕಂಥ ಮತ್ತು ಪ್ರಾಜೆಕ್ಟನ್ನು ಕಟ್ಟಲು ಉಪಯೋಗಿಸತಕ್ಕ ಸಾಮಾನುಗಳ ಬೆಲೆ ಮತ್ತು ಲೋಕೋಪಯೋಗಿ ಇಲಾಖೆಯವರು ಪ್ರತಿವರ್ಷವೂ ಕೂಡ ಗೊತ್ತುಮಾಡತಕ್ಕ ಷೆಡ್ಯೂಲ್ ಆಫ್ ರೇಟನ್ನು ಪರಿಷ್ಕರಣ ಮಾಡತಕ್ಕದ್ದು ನೋಡಿದರೆ, ಇವತ್ತು ನಾವು ಏನು ೩೦ ಕೋಟಿಗಿಂತಲೂ ಹೆಚ್ಚು ಹಣವನ್ನು ದೊಡ್ಡ ನೀರಾವರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳನ್ನು ಮುಗಿಸುವುದಕ್ಕೆ ಇಟ್ಟಿದ್ದೇವೆ ಈ ಹಣವನ್ನು ಲೆಕ್ಕ ಹಾಕಿದರೆ, ೧೯೭೧—೭೨ರಲ್ಲಿ ವೆಚ್ಚಮಾಡಿದ ಹಣಕ್ಕಿಂತಲೂ ಕಡಿಮೆ ಹಣ ಇದು ಎಂದು ಅನ್ನಿಸುತ್ತದೆ. ಇಲಾಖೆಯವರು ಷೆಡ್ಯೂಲ್ ರೇಟನ್ನು ೧೯೭೪—೭೫ ನೇ ಸಾಲಿನಲ್ಲಿ ೧ನೇ ತಾರೀಖು ರಿವೈಸ್‌ಮಾಡಿ ಪಬ್ಲಿಷ್ ಮಾಡಿದ್ದಾರೆಂದು ನಂಬುತ್ತೇನೆ ಆ ರೇಟನ್ನು ಲೆಕ್ಕ ಹಾಕಿಕೊಂಡರೆ, ಮತ್ತು ನಾವು ಕಳೆದ ೩—೪ ವರ್ಷಗಳಿಂದ ಸರ್ಕಾರಿ ನೌಕರರಿಗೆ ಸಂಬಳ ಮತ್ತು ಭತ್ಯವನ್ನು ಹೆಚ್ಚು ಮಾಡಿರತಕ್ಕದ್ದನ್ನು ಲೆಕ್ಕ ಹಾಕಿಕೊಂಡರೆ, ಇವತ್ತು ಪ್ರಾಜೆಕ್ಟುಗಳನ್ನು ಕಟ್ಟತಕ್ಕ ಕೆಲಸಗಳಿಗೆ ಉಪಯೋಗಮಾಡತಕ್ಕ ಸಿಮೆಂಟ್ ಆಗಲಿ, ಕಬ್ಬಿಣವಾಗಲೀ ಮತ್ತು ಇತರೆ ಸಲಕರಣೆಗಳ ಬೆಲೆಗಳನ್ನು ನಾವು ಲೆಕ್ಕ ಹಾಕಿಕೊಂಡರೆ ೩೦ ಕೋಟಿಗಿಂತ ಹೆಚ್ಚು ಹಣವನ್ನು ಪ್ರಾಜೆಕ್ಟುಗಳನ್ನು ಮುಗಿಸತಕ್ಕ ಕೆಲಸಗಳಿಗೆ ಏನು ತೊಡಗಿಸಿದ್ದೇವೆ ಆ ಹಣ ಏನೇನೂ ಸಾಲದು ಎಂದು ಹೇಳಿದರೆ ತಪ್ಪಾಗಲಾರದು ಎಂದು ನನ್ನ ಅಭಿಪ್ರಾಯ. ಮಾನ್ಯ ವಿರೋಧಪಕ್ಷದ ನಾಯಕರು ಒಂದು ಸೂಕ್ತವಾದಂಥ ಮತ್ತು ಸಮಯೋಚಿತವಾದಂಥ ಸಲಹೆಯನ್ನು ನೀಡಿದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಕಳೆದ ೨—೩ ವರ್ಷಗಳ ಕೆಳಗೆ ಸರ್ಕಾರದವರು ನೀರಾವರಿ ಯೋಜನೆಗಳನ್ನು ತ್ವರಿತವಾಗಿ ಮುಗಿಸಿ, ನಮ್ಮಲ್ಲಿರತಕ್ಕ ಆಹಾರಾಭಾವವನ್ನು ಹೋಗಲಾಡಿಸಬೇಕು ಎಂದು ಎಂದು ನೀರಾವರಿಯೋಜನೆಗಳಿಗೆ ಹೆಚ್ಚಿನ ಆದ್ಯತೆಯನ್ನು, ಪ್ರಾಶಸ್ತ್ಯವನ್ನು ಕೊಡುವ ಸಲುವಾಗಿ ಹಣವನ್ನು ಹುಡುಕತಕ್ಕ ಕೆಲಸಕ್ಕೆ ರಿಸೋರ್ಸಸ್ ಕಮಿಟಿ ಎಂದು ವಿಧಾನಮಂಡಲದ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ಮಾಡಿದ್ದರು.

ಆ ಸಮಿತಿ ಸ್ವಲ್ಪ ಹಣವನ್ನು ಪ್ರಾಜೆಕ್ಟುಗಳ ಕೆಲಸಕ್ಕಾಗಿ ಹುಡುಕಿ ಕೊಟ್ಟು, ಪ್ರಾಜೆಕ್ಟುಗಳಿಗೆ ಉಪಯೋಗ ಮಾಡತಕ್ಕ ಕೆಲಸ ಮಾಡಿತ್ತು ಎಂದು ನಾನೂ ಕೂಡ ತಿಳಿದಿದೆ. ದಯಮಾಡಿ, ಸರಕಾರದವರು ಈ ರೀತಿಯಾದಂಥ ಒಂದು ಸಮಿತಿಯನ್ನು ಈಗಲೂ ಕೂಡ ಮಾಡಬೇಕು. ಕೃಷ್ಣ ಬೇಸಿನ್ ಮತ್ತು ಕಾವೇರಿ ಬೇಸಿನ್‌ಗಳಲ್ಲಿ ಇವತ್ತು ಕೈಗೊಳ್ಳತಕ್ಕ ಮತ್ತು ಇನ್ನು ಮುಂದೆ ಮಂಜೂರು ಮಾಡಿ ಕೈಗೊಳ್ಳತಕ್ಕ ಹಲವಾರು ಮಧ್ಯಮ ತರಗತಿ ಯೋಜನೆಗಳಿಗೆ ೮,೦೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ೧೦ ವರ್ಷಗಳಲ್ಲಿ ಎಲ್ಲಾ ಯೋಜನೆಗಳನ್ನೂ ಮುಗಿಸಬೇಕೆಂದು ಗುರಿಯನ್ನಿಟ್ಟುಕೊಂಡರೂ ಸಹ, ವರ್ಷ ವರ್ಷಕ್ಕೆ ಪದಾರ್ಥಗಳ ಬೆಲೆ ಹೆಚ್ಚಾಗತಕ್ಕದ್ದನ್ನೂ ಮತ್ತು ಇಲಾಖೆಯವರು ಪರಿಷ್ಕರಣ ಮಾಡತಕ್ಕ ಷೆಡ್ಯೂಲ್ ಆಫ್ ರೇಟ್ಸನ್ನು ಗಮನಕ್ಕೆ ತಂದುಕೊಂಡರೆ, ಈ ಎಲ್ಲಾ ಪ್ರಾಜೆಕ್ಟುಗಳನ್ನೂ ಹತ್ತು ವರ್ಷಗಳಲ್ಲಿ ಮುಗಿಸತಕ್ಕ ಕಾಲದಲ್ಲಿ ಒಂದು ಸಾವಿರ ಕೋಟಿ ರೂಪಾಯಿಗಳು ಇದ್ದುದು ೧,೫೦೦ ಕೋಟಿ ರೂಪಾಯಿಗಳಿಗೆ ಅಥವಾ ೧,೬೦೦ ಕೋಟಿ ರೂಪಾಯಿಗಳಿಗೆ ಹೋಗಬಹುದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹತ್ತು ವರ್ಷಗಳಲ್ಲಿ ಮುಗಿಸಬೇಕೆಂಬ ಗುರಿಯನ್ನಿಟ್ಟುಕೊಂಡರೆ, ಒಂದು ವರ್ಷಕ್ಕೆ ಕೊನೆಯ ಪಕ್ಷ ೦೦ ಕೋಟಿ ರೂಪಾಯಿಗಳನ್ನಾದರೂ ಬಜೆಟ್ಟಿನಲ್ಲಿ ಒದಗಿಸದೇ ಹೋದರೆ, ಈ ಪ್ರಾಜೆಕ್ಟುಗಳನ್ನು ೫೦ ವರ್ಷಗಳಾದರೂ ಕೂಡ ಮುಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಈಗಾಗಲೇ ಸುಮಾರು ನೂರು ಕೋಟಿ ರೂಪಾಯಿಗಳನ್ನು ನೀರಾವರಿ ಯೋಜನೆಗಳಿಗೆ ತೊಡಗಿಸಿದ್ದೇವೆ. ಆದರೆ, ಒಂದಲ್ಲ ಒಂದು ಪ್ರಾಜೆಕ್ಟಿನಿಂದ ರೈತರಿಗೆ ನೀರು ಕೊಟ್ಟು, ಆದರಿಂದ ಉತ್ಪನ್ನ ಮಾಡತಕ್ಕ ಸೂಚನೆ ಕಾಣುಬರುತ್ತಾ ಇಲ್ಲ. ಹೀಗೆ ಉತ್ಪನ್ನ ಬರದೇ ಇರತಕ್ಕ ಕೆಲಸಗಳಿಗೆ ನೂರಾರು ಕೋಟಿ ರೂಪಾಯಿಗಳನ್ನು ವರ್ಷೇ ವರ್ಷೇ ತೊಡಗಿಸಿ ನಮ್ಮ ಆರ್ಥಿಕ ವ್ಯವಸ್ಥೆಯನ್ನು ಇಕ್ಕಟ್ಟಿನಲ್ಲಿ ಸಿಕ್ಕಿಸಿ, ಜನರಿಗೆ ಹೆಚ್ಚಿನ ತೊಡಕನ್ನೂ, ತೊಂದರೆಯನ್ನೂ ನಾವೇ ಒದಗಿಸಿದಂತಾಗುತ್ತದೆಂದು ಹೇಳುವುದಕ್ಕೆ ಇಚ್ಛಿಸುತ್ತೇನೆ. ಆದುದರಿಂದ, ಮಾನ್ಯ ವಿರೋಧ ಪಕ್ಷದ ನಾಯಕರು ಸಲಹೆ ಮಾಡಿದ ರೀತಿಯಲ್ಲಿ ನಾನೂ ಕೂಡ ಒತ್ತಾಯ ಮಾಡುತ್ತೇನೆ. ಮುಖ್ಯ ಮಂತ್ರಿಗಳು ಆ ರೀತಿ ಒಂದು ಸಮಿತಿಯನ್ನು ನೇಮಿಸಿ, ಆ ಸಮಿತಿಯು, ರಾಜ್ಯದಲ್ಲಿ ನೀರಾವರಿ ಯೋಜನೆಗೆ ಒದಗಿಸತಕ್ಕ ಹಣದ ಮೂಲವನ್ನು ಕಂಡುಹಿಡಿಯುತಕ್ಕ ಕೆಲಸವನ್ನು ಮಾಡುವುದರ ಜೊತೆಗೆ, ಕೇಂದ್ರ ಸರ್ಕಾರದ ಮೇಲೆ ಹೆಚ್ಚಿನ ಒತ್ತಾಯವನ್ನೂ ಮತ್ತು ಪ್ರಭಾವವನ್ನೂ ಬೀರಿ, ಕರ್ನಾಟಕ ರಾಜ್ಯ ಆಹಾರದ ಕೊರತೆ ಎದುರಿಸುತ್ತಿದೆ, ನಮ್ಮಲ್ಲಿ ನೀರಾವರಿ ಶೇಕಡಾವಾರು ಕಡಿಮೆ ಇದೆ ಎಂದು ಹೇಳಿ ನಮ್ಮಲ್ಲಿರತಕ್ಕ ಬಡತನ ಮತ್ತು ತೊಂದರೆಗಳನ್ನು ನಿವಾರಿಸತಕ್ಕ ವಿಷಯಗಳನ್ನು ಅವರ ಗಮನಕ್ಕೆ ತಂದುಕೊಟ್ಟು, ಹೆಚ್ಚಿನ ಹಣವನ್ನು ವಿಶೇಷವಾದ ರೀತಿಯಲ್ಲಿ

ಆದರಲ್ಲೂ ಕೂಡ ವಿದ್ಯುಚ್ಛಕ್ತಿಯನ್ನು ಉತ್ಪನ್ನ ಮಾಡತಕ್ಕ ಕೆಲಸಗಳಿಗೆ ಮತ್ತು ನೀರಾವರಿ ಯೋಜನೆಗಳನ್ನು ಪೂರೈಸತಕ್ಕ ಕೆಲಸಗಳಿಗೆ ಕೊಡಬೇಕೆಂದು ಒತ್ತಾಯವನ್ನೂ ಕೂಡ ಮಾಡತಕ್ಕದ್ದು ಸೂಕ್ತವೆಂದು ಶ್ರೀ ದೇವೇಗೌಡರು ಹೇಳಿದಂಥ ಸಲಹೆಯನ್ನು ನಾನೂ ಕೂಡ ಸಮರ್ಥಿಸುತ್ತೇನೆ.

ಈಗ ಕೃಷ್ಣಾ ಬೇಸಿನ್‌ನಲ್ಲಿ ತೆಗೆದುಕೊಂಡಿರತಕ್ಕ ಪ್ರಾಜೆಕ್ಟುಗಳಿಗೆ ಹೆಚ್ಚು ಹಣ ಒದಗಿಸಿ ಬೇಗ ಮುಗಿಸಬಾರದೆಂದು ಹೇಳುವವರ ಪೈಕಿ ನಾನೊಬ್ಬನಲ್ಲ. ಕೃಷ್ಣ ಬೇಸಿನ್‌ನಲ್ಲಿ ಕೈಗೊಂಡಿರತಕ್ಕ ಪ್ರಾಜೆಕ್ಟುಗಳನ್ನು, ಅವುಗಳಿಗೆ ಇರತಕ್ಕ ವೈಶಿಷ್ಟತೆಯನ್ನೂ, ಹಾಗೆಯೇ ಕಾವೇರಿ ಬೇಸಿನ್‌ನಲ್ಲಿ ನಾವು ನಡೆಸತಕ್ಕ ಪ್ರಾಜೆಕ್ಟುಗಳಿಗೂ ಇರತಕ್ಕ ಕಾನೂನು ಇಕ್ಕಟ್ಟುಗಳನ್ನೂ ಮತ್ತು ಅಂತರ ರಾಜ್ಯ ನೀರಾವರಿ ವಿವಾದವನ್ನು ಗಣನೆಗೆ ತೆಗೆದುಕೊಂಡರೆ, ಹೆಚ್ಚಿನ ಪ್ರಾಶಸ್ತ್ಯವನ್ನು ಕಾವೇರಿ ಬೇಸಿನ್‌ಗೆ ಕೊಡಬೇಕು. ಹೆಚ್ಚಿನ ಹಣವನ್ನು ಉಪಯೋಗಿಸಿ ಈಗ ಯಾವ ಪ್ರಾಜೆಕ್ಟುಗಳನ್ನು ತೆಗೆದುಕೊಂಡಿದ್ದೇವೋ ಅವುಗಳನ್ನು ೧೯೮೦ರೊಳಗೆ ಪೂರೈಸಿ, ನಮ್ಮ ನೀರನ್ನು ಉಪಯೋಗಮಾಡತಕ್ಕಂಥ ಕೆಲಸವನ್ನು ಮಾಡುತ್ತಲಿಲ್ಲವೆಂದರೆ, ಅಂತರ ರಾಜ್ಯ ನೀರಿನ ವಿವಾದದಲ್ಲಿ ಸಿಕ್ಕಿ ನಮ್ಮ ಹಕ್ಕನ್ನು ಕಳೆದುಕೊಳ್ಳತಕ್ಕ ಪರಿಸ್ಥಿತಿ ಒದಗಬಹುದೇನೋ ಎನ್ನುವ ಒಂದು ಭಯದಿಂದ, ಕಾವೇರಿ ಬೇಸಿನ್‌ನಲ್ಲಿ ಇರತಕ್ಕ ಪ್ರಾಜೆಕ್ಟುಗಳಿಗೆ ಹೆಚ್ಚಿನ ಹಣವನ್ನು ಇಟ್ಟು ಉಪಯೋಗ ಮಾಡುವಂಥಾದ್ದು ಸಾಧುವೆಂದು ಸೂಚನೆ ಕೊಡುವುದಕ್ಕೆ ಬಯಸುತ್ತೇನೆ.

ಕಾವೇರಿ ಬೇಸಿನ್‌ನಲ್ಲಿ ನಾವು ಕಟ್ಟುತ್ತಿರತಕ್ಕ ಪ್ರಾಜೆಕ್ಟುಗಳಲ್ಲಿ. ಪ್ರಾಜೆಕ್ಟನ್ನು ಪ್ರಾರಂಭ ಮಾಡಿ ಸುಮಾರು ಇಲ್ಲಿಗೆ ೧೦–೧೫ ವರ್ಷಗಳಾಯಿತು. ಅದಕ್ಕಾಗಿ ಸುಮಾರು ಕೋಟಿ ರೂಪಾಯಿಗಳನ್ನು ಈಗಾಗಲೇ ಖರ್ಚು ಮಾಡಿದ್ದೇವೆ. ಕಳೆದ ವರ್ಷ ಅಲ್ಲಿ ನಡೆದ ಕೆಲಸಗಳಲ್ಲಿ ಅವ್ಯವಹಾರ ನಡೆದಿದೆ, ಅಳತೆಗಳನ್ನು ಕೊಡತಕ್ಕ ಸಂದರ್ಭಗಳಲ್ಲಿ ಸ್ವಲ್ಪ ಹೆಚ್ಚಿನ ಅಳತೆಗಳನ್ನು ಕೊಟ್ಟಿದ್ದಾರೆ, ಅಳತೆ ಮಾಡತಕ್ಕ ಕಾಲದಲ್ಲಿ ಕ್ಲಾಸಿಫಿಕೇಷನ್‌ನಲ್ಲಿ ವ್ಯತ್ಯಾಸ ಕಂಡುಬಂದಿದೆ ಎನ್ನುವ ಒಂದು ಸಂಶಯದ ಮೇಲೆ, ಅದನ್ನು ವಿಜಿಲೆನ್ಸ್‌ಗೆ ಅಥವಾ ಅವರ ಡಿಪಾರ್ಟ್‌ಮೆಂಟ್‌ನಲ್ಲಿರತಕ್ಕ ಟೆಕ್ನಿಕಲ್ ಆಡಿಟ್ ಸೆಲ್‌ಗೆ ವಹಿಸಿ, ಅವನ್ನು ಅವರು ವಿಚಾರಣೆ ನಡೆಸಿ, ನಾಲಾ ಸಂಬಂಧಪಟ್ಟ ಮೆಷರ್ ಬುಕ್‌ಗಳನ್ನೂ ಕೂಡ ವಶಪಡಿಸಿಕೊಂಡು, ತನಿಖೆ ಕೆಲಸಕ್ಕೆ ತೆಗೆದುಕೊಂಡು ಹೋಗಿ, ಆ ಪುಸ್ತಕಗಳನ್ನು ಇನ್ನೂ ವಾಪಸು ಕೊಡಲಿಲ್ಲ, ಬಹುತಃ ಕಬಿನಿ ಪ್ರಾಜೆಕ್ಟ್ ಮತ್ತು ನಾಲಾ ಡಿವಿಜನ್‌ನಲ್ಲಿ ಕೆಲಸ ಮಾಡತಕ್ಕವರಿಗೆ ಮುಂದಿನ ಕೆಲಸ ಮಾಡುವುದಕ್ಕೆ ತೊಂದರೆಯಾಗಿದೆ. ಕಳೆದ ವರ್ಷ ಸರಕಾರದವರು ಕಬಿನಿ ಪ್ರಾಜೆಕ್ಟ್ ಕೆಲಸಕ್ಕಾಗಿ ಬಡ್ಜೆಟ್ಟಿನಲ್ಲಿ ಇಟ್ಟಂತಹ ಹಣದಲ್ಲಿ ೫೦ ಭಾಗ ಕೂಡ ಖರ್ಚು ಮಾಡಲಿಲ್ಲ ಎನ್ನುವ ವಿಚಾರ ಆಫೀಸರುಗಳ ಜೊತೆಗೆ ಸಮಾಲೋಚನೆ ನಡೆಸಿದ ಸಂದರ್ಭದಲ್ಲಿ ನನ್ನ ಗಮನಕ್ಕೆ ಬಂತು. ಈಗ ಒಂದೂವರೆ ಅಥವಾ ಎರಡು ವರ್ಷಗಳಿಂದ ವಿಜಿಲೆನ್ಸ್ ಅಥವಾ ಟೆಕ್ನಿಕಲ್ ಆಡಿಟ್ ಸೆಲ್‌ನಿಂದ ಪಿಡಬ್ಲ್ಯುಡಿ. ಅಧಿಕಾರಿಗಳಿಗೆ ಪುಸ್ತಕಗಳನ್ನು ವಾಪಸು ಕೊಡಿಸಿ, ಕೆಲಸವನ್ನು ತೀವ್ರಗತಿಯಿಂದ ನಡೆಸುವ ಕಾರ್ಯಕ್ರಮವನ್ನು ಏತಕ್ಕೆ ಇನ್ನೂ ತೆಗೆದುಕೊಳ್ಳಲಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ೧೯೭೪–೭೫ ನೇ ಸಾಲಿನಲ್ಲಿ ಒದಗಿಸಿರತಕ್ಕ ಹಣವನ್ನೂ ಕೂಡ ಖರ್ಚು ಮಾಡದೇ ಇರತಕ್ಕ ಪರಿಸ್ಥಿತಿಯಲ್ಲಿರುವುದರಿಂದ, ದಯುಮಾಡಿ, ಮಾನ್ಯ ಮುಖ್ಯ ಮಂತ್ರಿಗಳು ಇದರ ಕಡೆ ಗಮನ ಹರಿಸಿ, ವಿಜಿಲೆನ್ಸ್‌ನಿಂದಾಗಲೀ ಅಥವಾ ಟೆಕ್ನಿಕಲ್ ಆಡಿಟ್ ಸೆಲ್‌ನಿಂದಾಗಲೀ ಪುಸ್ತಕಗಳನ್ನು ವಾಪಸು ಕೊಡಿಸಿ, ಈ ಒಂದು ಸಮಸ್ಯೆಯನ್ನು ಬಿಡಿಸುವುದಕ್ಕೆ ಬೇಗ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಕಾವೇರಿ ಬೇಸಿನ್‌ನಲ್ಲಿ ಕೆಲವು ಮಧ್ಯಮ ನೀರಾವರಿ ಯೋಜನೆಗಳನ್ನು ಸರಕಾರದವರು ಮಂಜೂರು ಮಾಡಿ, ಕಾರ್ಯ ಪ್ರಾರಂಭ ಮಾಡಿದ್ದಾರೆ. ಇನ್ನೂ ಕೆಲವು ಮಧ್ಯಮ ನೀರಾವರಿ ಯೋಜನೆಗಳಲ್ಲಿ ನಾನ್–ಷೆಡ್ಯೂಲ್ಡ್ ರಿವರ್ಸ್‌ಗೆ ಸಂಬಂಧಪಟ್ಟಹಾಗೆ ಕೆಲವು ಅಂದಾಜುಗಳನ್ನು ತಯಾರುಮಾಡಿದ್ದಾರೆ. ಈ ಸಂದರ್ಭದಲ್ಲಿ, ನಮ್ಮ ಕೊಳ್ಳೇಗಾಲ ಮತ್ತು ಗುಂಡ್ಲುಪೇಟೆ ಭಾಗಗಳು ಪ್ರತಿವರ್ಷವೂ ಬರಗಾಲಕ್ಕೆ ತುತ್ತಾಗತಕ್ಕ ಪ್ರದೇಶಗಳಾಗಿರುವುದರಿಂದ, ನಲ್ಲೂರು ಅಮಾನಕೆರೆ ಮತ್ತು ದೇವಲಾಪುರ ಯೋಜನೆಗಳನ್ನು ತಯಾರು ಮಾಡಿ ಬಡ್ಜೆಟ್ಟಿನಲ್ಲಿ ಸೇರಿಸಿ ಕಳೆದ ವರ್ಷ ಮಂಜೂರು ಮಾಡಿದ್ದು ಆಗಿದೆ. ಅದಕ್ಕೆ ಟೆಕ್ನಿಕಲ್ ಮಂಜೂರಾತಿ ಕೊಟ್ಟು, ಇನ್ನೂ ಕೆಲಸ ಪ್ರಾರಂಭಿಸಿಲ್ಲ ಕೊಳ್ಳೇಗಾಲ ಪ್ರದೇಶವು ಬರಗಾಲ ಎದುರಿಸತಕ್ಕ ತಾಲ್ಲೂಕಾಗಿರುವುದರಿಂದ ಅಲ್ಲಿ ಸಣ್ಣ ಹೊಳೆಗಳಿಗೆ, ಅಂದರೆ ಉಡುತೊರೆ ಮತ್ತು ಮಿಣ್ಣ್ಯಾತಹಳ್ಳಿ ಮತ್ತು ಒಂದೆರಡು ಪ್ರಾಜೆಕ್ಟುಗಳನ್ನು ಪರಿಶೀಲನಾ ಇಲಾಖೆಯವರು ತಯಾರು ಮಾಡಿದ್ದಾರೆ. ಈ ಪ್ರಾಜೆಕ್ಟುಗಳನ್ನು ಮಂಜೂರು ಮಾಡಬೇಕೆಂದು ನಾನೂ ಮತ್ತು ಆ ಭಾಗದ ನನ್ನ ಸ್ನೇಹಿತರೂ ಕೂಡ ೨ ವರ್ಷಗಳಿಂದ ಸರಕಾರವನ್ನು ಒತ್ತಾಯ ಮಾಡುತ್ತಿದ್ದೇವೆ. ದಯಮಾಡಿ, ಈ ವರ್ಷ ಉಡುತೊರೆ ಮತ್ತು ಮಿಣ್ಣ್ಯಾತಹಳ್ಳಿ ಪ್ರಾಜೆಕ್ಟುಗಳನ್ನು ಮಂಜೂರು ಮಾಡುವುದರ ಜೊತೆಗೆ ಈಗಾಗಲೇ ಬಡ್ಜೆಟ್ಟಿನಲ್ಲಿ ಸೇರಿಸಿರತಕ್ಕ ನಲ್ಲೂರು ಅಮಾನಕೆರೆ ಮತ್ತು ದೇವಲಾಪುರ ಪ್ರಾಜೆಕ್ಟುಗಳ ಕೆಲಸಗಳನ್ನೂ ಕೂಡ ಮಾಡಿಸಿ ಕೊಡಬೇಕು. ಬಡ್ಜೆಟ್ಟಿನಲ್ಲಿ ಒದಗಿಸಿರತಕ್ಕ ಹಣದ ಜೊತೆಗೆ ಇನ್ನೂ ಹೆಚ್ಚು ಹಣವನ್ನು ಒದಗಿಸಿಕೊಟ್ಟು, ಆ ಕೆಲಸಗಳನ್ನೂ ಪ್ರಾರಂಭ ಮಾಡಬೇಕೆಂದು ಈ ಸಂದರ್ಭದಲ್ಲಿ ಸರಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

(ಶ್ರೀ ಎಸ್. ಪುಟ್ಟಸ್ವಾಮಿ)

ಅಲ್ಲದೆ, ಸುಮಾರು ೧೯೭೨ ರಲ್ಲಿ ದುರ್ದೈವದಿಂದ ನೀರು ಕೊಟ್ಟಂತಹ ಚಿಕ್ಕಹೊಳೆ ಪ್ರಾಜೆಕ್ಟ್, ಪ್ರವಾಹ ಒಂದು ಒಡೆದು ಹೋಯಿತು. ಇದು ಆಗಿ ಒಂದು ವರ್ಷ ೪ ತಿಂಗಳು ಮುಗಿಯುತ್ತಾ ಬಂದರೂ, ಒಡೆದು ಹೋದ ಕೆರೆಯನ್ನು ಸರಿಪಡಿಸಿಲ್ಲ. ದಯವಿಟ್ಟು, ಆ ಪ್ರಾಜೆಕ್ಟನ್ನು ಸರಿಪಡಿಸಿಕೊಟ್ಟು ರೈತರಿಗೆ ನೀರಿನ ಅನುಕೂಲ ಮಾಡಿಕೊಡಬೇಕೆನ್ನುವುದು ನನ್ನ ಅಭಿಪ್ರಾಯ. ಸರಕಾರದವರು ಅಭಿಪ್ರಾಯವೂ ಕೂಡ ಇದೇ ಎಂದು ನಂಬಿರುತ್ತೇನೆ.

ಇದರಲ್ಲಿ ವಿಚಾರಣೆ ನಡೆಸತಕ್ಕಂಥ ಕೆಲಸ ಮುಗಿದಿಲ್ಲ, ವಿಚಾರಣೆ ನಡೆಸತಕ್ಕ ಕೆಲಸವನ್ನೇ ಎರಡು ವರ್ಷಗಳವರೆಗೆ ಮಾಡುತ್ತಾರೆ. ಆ ಭಾಗದಲ್ಲಿ ಕಳೆದ ಎರಡು ವರ್ಷಗಳಿಂದ ೪ ಸಾವಿರ ಎಕರೆಯಿಂದ ಜೀವನ ಮಾಡತಕ್ಕ ರೈತರು ಕಂಗಾಲಾಗಿದ್ದಾರೆ. ಯಾವ ಬೆಳೆಯನ್ನು ಬೆಳೆಯುವುದಕ್ಕೆ ಆಗದೇ ತೊಂದರೆಗೆ ಸಿಕ್ಕಿದ್ದಾರೆ. ದಯುಮಾಡಿ ಈ ಪ್ರಾಜೆಕ್ಟ್ ಕೊಡುವುದಕ್ಕೆ ಒಂದೆರಡು ವರ್ಷ ತಡವಾದರೆ ಬಹುಶ: ಜನರಿಗೆ ಸಹಾಯ ಮಾಡುವುದು ಕಷ್ಟವಾಗುತ್ತದೆ ಎನ್ನುವ ದೃಷ್ಟಿಯಿಂದ ಈ ವರ್ಷ ಬೇಗ ಮಂಜೂರು ಮಾಡಿಸಿ ಕೆಲಸಗಳನ್ನು ಪ್ರಾರಂಭ ಮಾಡಿಸಿಕೊಡಬೇಕೆಂದು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇದೇ ಭಾಗದಲ್ಲಿ ಚಾಮರಾಜನಗರ ತಾಲ್ಲೂಕಿನಲ್ಲಿ ಸುವರ್ಣಾವತಿ ನದಿಗೆ ಅಣೆ ಕಟ್ಟುವ ಕೆಲಸ ಮುಗಿಯುತ್ತಾ ಬಂದಿದೆ. ಕ್ರಸ್ಟ್ ಗೇಟ್ ಹಾಕಿದ್ದಾರೆ ಇದರಿಂದ ಮುಂದಿನ ವರ್ಷ ಜೂನ್ ತಿಂಗಳಿನಿಂದ ಅಲ್ಲಿ ಇರತಕ್ಕ ಅಚ್ಚುಕಟ್ಟು ಹಾಗು ಹೊಸದಾಗಿ ಬರತಕ್ಕ ಅಚ್ಚುಕಟ್ಟು ೧೮ ಸಾವಿರ ಎಕರೆಗೆ ನೀರಾವರಿ ಕೊಡತಕ್ಕ ಕೆಲಸ ಸರ್ಕಾರದವರು ಮಾಡಿದ್ದಾರೆ ಅದಕ್ಕಾಗಿ ಸರ್ಕಾರದವರನ್ನು ಅಭಿನಂದಿಸು ತ್ತೇನೆ. ಆ ಕೆಲಸ ಮಾಡಿರುವುದರ ಜೊತೆಗೆ ಏನು ನಮ್ಮ ಸುವರ್ಣಾವತಿ ನದಿಗೆ ಅಣೆಕಟ್ಟಿನ ಮೂಲಕ ಫೀಡರ್ ಚಾನಲ್‌ಗಳನ್ನು ತೆಗೆದು, ಮೊದಲು ನೇರವಾಗಿ ಬಳಸುತ್ತಾ ಇರತಕ್ಕ ಕಾಲುವೆಗಳನ್ನು ಮತ್ತು ಫ್ರೆಶ್ ವುಡ್ ಅಣೆಕಟ್ಟುಗಳನ್ನು ಕಟ್ಟುವುದಕ್ಕೆ ಸುವರ್ಣಾವತಿ ಪ್ರಾಜೆಕ್ಟ್‌ನಲ್ಲಿ ದುಡ್ಡನ್ನು ಅಳವಡಿಸಿಕೊಂಡಿದ್ದಾರೆ. ೧೦ ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಬ್ರೆಶ್‌ವುಡ್ ಅಣೆಕಟ್ಟುಗಳನ್ನು ನಾಲೆಗಳನ್ನು ದುರಸ್ತಿಮಾಡುವುದಕ್ಕೆ ಅಂದಾಜಿನಲ್ಲಿ ಸೇರಿಸಿಕೊಂಡಿದ್ದಾರೆ. ಆದರೆ ಪ್ರಾಜೆಕ್ಟ್ ಕೆಲಸ ಪ್ರಾರಂಭವಾಗಿ ಅದು ಮುಂದುವರಿದಂಥ ಸಂದರ್ಭದಲ್ಲಿ ಈ ಅಂದಾಜನ್ನು ಪರಿಸ್ಕರಣ ಮಾಡತಕ್ಕ ಸನ್ನಿವೇಶ ಬಂದುದರಿಂದ, ನಾಲೆಗಳನ್ನು ದುರಸ್ತಿ ಮಾಡುವುದು ಮತ್ತು ಬೆಶ್‌ವುಡ್ ಅಣೆಕಟ್ಟುಗಳನ್ನು ಕೈಬಿಡುವಂತೆ ಕಾಣುತ್ತದೆ. ದಯುಮಾಡಿ ಸುವರ್ಣಾವತಿ ಅಣೆಕಟ್ಟಿನ ಅಂದಾಜನ್ನು ಪರಿಸ್ಕರಣಮಾಡುವ ಕಾಲದಲ್ಲಿ ನಾಲೆಯ ದುರಸ್ತಿ ಕೆಲಸ ಬ್ರೆಶ್ ವುಡ್‌ಗೆ ಕೊಡುವ ಕೆಲಸ ಸೇರಿಸಿ, ಆ ಪ್ರಾಜೆಕ್ಟ್ ಕೆಲಸ ಮುಗಿದ ನೀರು ಕೊಡತಕ್ಕಂಥ ಸಂದರ್ಭದಲ್ಲಿ ಅದನ್ನು ಮುಂದುವರಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಈ ಸಂದರ್ಭದಲ್ಲಿ ಸರ್ಕಾರದವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಮತ್ತು ಕಬಿನಿ ಪ್ರಾಜೆಕ್ಟ್ ಕೆಲಸಗಳನ್ನು ಜೂನ್‌ನಲ್ಲಿ ಮುಗಿಯುತ್ತದೆಂದು ಕಾಣುತ್ತದೆ ಕ್ರಸ್ಟ್ ಗೇಟ್ ಹಾಕಬಹುದು ಎಂದು ಸುಮಾರು ೩ ತಿಂಗಳ ಹಿಂದೆ ಅಲ್ಲಿಗೆ ಹೋಗಿ ನೋಡಿದ ಸಂದರ್ಭದಲ್ಲಿ ಅಧಿಕಾರಿಗಳು ತಿಳಿಸಿದ್ದಾರೆ. ನಮ್ಮಲ್ಲಿ ಪ್ರಾಜೆಕ್ಟ್ ಕೆಲಸ ಮುಗಿದಿದೆ ನೀರನ್ನು ಹಿಡಿದಿಟ್ಟಿದ್ದಾರೆ ಆದರೆ ನಾಲೆಯ ಕೆಲಸ ಏನೇನೂ ಆಗಿಲ್ಲ. ಅದರಲ್ಲೂ ನಮ್ಮ ನುಗು ಅಚ್ಚುಕಟ್ಟಿನಲ್ಲಿ, ಕಬಿನಿ ಅಚ್ಚುಕಟ್ಟಿನಲ್ಲಿ ಬರತಕ್ಕಂಥ ಅಚ್ಚುಕಟ್ಟು ಏರಿಯಾ ಹೇಳಿ. ಅಲ್ಲಿ ಬರತಕ್ಕಂಥದ್ದು ಎರಡು ನಾಲೆ ರಾಮಪುರ ಮತ್ತು ಹುಲಹಳ್ಳಿಗಳ ಭಾಗದಲ್ಲಿರತಕ್ಕ ಜನರಿಗೆ ಎರಡು ಬೆಳೆಗೆ ನೀರು ಕೊಡಲಿಕ್ಕೆ ವ್ಯವಸ್ಥೆ ಮಾಡುವುದು ಸೂಕ್ತ. ಅಣೆಕಟ್ಟಿನಲ್ಲಿ ನೀರನ್ನು ಹಿಡಿದಾದ ಮೇಲೆ ಆ ನೀರನ್ನು ಪ್ರಯೋಜನವಾಗುವ ರೀತಿಯಲ್ಲಿ ಬಳಸಬೇಕೆಂದು ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಮತ್ತೇ ನಾವು ಈಗ ಕೆಲಸ ಮಾಡುತ್ತಾ ಇರತಕ್ಕಂಥ ಧಾಟಿಯಲ್ಲಿ ಕಬಿನಿ ನಾಲೆಯ ಕೆಲಸವನ್ನು ಮುಂದುವರಿಸಿದರೆ ಇನ್ನು ೧೦ ವರ್ಷಗಳಾದರೂ ನಾಲೆ ಕೆಲಸ ಪೂರೈಸುವುದಕ್ಕೆ ಆಗುವುದಿಲ್ಲ. ಆದುದರಿಂದ ಕಬಿನಿ ನಾಲೆಗೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟು, ಹೆಚ್ಚಿನ ಹಣ ಒದಗಿಸಿ ಸಾಧ್ಯವಾದರೆ ಇನ್ನೊಂದು ಡಿವಿಷನ್ ತೆಗೆದು ಬೇಗ ಅತಿ ಶೀಘ್ರವಾಗಿ ಕೆಲಸ ಮುಗಿದು ಆ ಪ್ರಾಜೆಕ್ಟ್‌ನಿಂದ ನೀರನ್ನು ಬಳಸತಕ್ಕ ಕೆಲಸ ಒಂದೆರೆಡು ವರ್ಷಗಳಲ್ಲಿ ನಮಗೆ ಒದಗತಕ್ಕಂಥ ಸನ್ನಿವೇಶ ಮಾಡಿಸಿಕೊಡಬೇಕೆಂದು ಈ ಒಂದು ಸಲಹೆ ಇಡುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೆ ಎಲೆಕ್ಟ್ರಿಸಿಟಿ ಬಗ್ಗೆ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈಗ ಕಳೆದ ಒಂದು ವರ್ಷದಲ್ಲಿ ನಮ್ಮಲ್ಲಿ ಎಲೆಕ್ಟ್ರಿಸಿಟಿಗೆ ನೀರಿನ ಅಭಾವದಿಂದ ಎಲೆಕ್ಟ್ರಿಸಿಟಿಗೆ ಕೊರತೆ ಬಂದಿತ್ತು. ಆದುದರಿಂದ ಕಳೆದ ವರ್ಷದ ಪ್ರಾರಂಭದಲ್ಲಿ ಈ ತೊಂದರೆಯನ್ನು ಎಲ್ಲಾ ಜನತೆ ಅನುಭವಿಸಿತು, ಇದಾದ ಮೇಲೆ ಸ್ವಲ್ಪ ಸುಧಾರಿಸಿತು. ಈಗ ನೀರಾವರಿಗೆ ಮತ್ತು ಮನೆಗಳಿಗೆ ಮಂತ್ರಿತರ ಉಪಯೋಗಕ್ಕೆ ಅದರ ಕೊರತೆ ಕಾಣಲಿಲ್ಲ, ಇನ್ನು ಕೂಡ ಇಂಡಸ್ಟ್ರೀಸ್‌ಗಳಿಗೆ ಕೊರತೆ ಇದೆ ಎಂದು ನಾನು ತಿಳಿಯುತ್ತೇನೆ. ಈ ವಿಷಯುವನ್ನು ಒಂದು ಸಂದರ್ಭದಲ್ಲಿ ಮಂತ್ರಿಗಳು ಪ್ರಸ್ತಾಪ ಮಾಡಿದ್ದು ನನಗೆ ಜ್ಞಾಪಕಕ್ಕೆ ಇದೆ. ಕಳೆದ ವರ್ಷ ಎಲೆಕ್ಟ್ರಿಸಿಟಿ ನಮ್ಮಲ್ಲಿರತಕ್ಕ ವಿದ್ಯುಚ್ಛಕ್ತಿಯನ್ನು ಬಳಸಿ

ಸರ್ಕಾರದವರು ಹಾಕಿಕೊಂಡಿರತಕ್ಕ, ಹಳ್ಳಿಗಳಿಗೆ ದೀಪ ಕೊಡತಕ್ಕ ಕೆಲಸವಾಗಲೀ ಪಂಪ್‌ಸೆಟ್‌ಗಳಿಗಾಗಲೀ ಭಾವಿಗಳಿಗೆ ನೀರನ್ನು ಎತ್ತಿಸುವ ಕೆಲಸಕ್ಕೆ ಕೊಡತಕ್ಕ ವಿಧ್ಯುಚ್ಛಕ್ತಿಯಾಗಲೀ ಕಳೆದ ವರ್ಷ ನಡೆಸಿದಂಥ ಕಾರ್ಯಕ್ರಮವನ್ನು ನೋಡಿದರೆ ಬಹುಶ: ಯಾವ ವರ್ಷವೂ ಕೂಡ ಆ ರೀತಿಯಾದಂಥದ್ದು ಕಂಡಿಲ್ಲ ಅಥವಾ ನೀರಾವರಿ ಆಗಿಲ್ಲವೆಂದು ಹೇಳಿದರೆ ತಪ್ಪಾಗಲಾರದೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ೧೯೭೪-೭೫ರಲ್ಲಿ ಎಷ್ಟು ವಿಧ್ಯುಚ್ಛಕ್ತಿ ಕೊಡುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳುತ್ತಾರೆ, ಅದಕ್ಕೆ ಬೇಕಾದಂಥ ಸಾಮಾನು ಸರಂಜಾಮು ವ್ಯವಸ್ಥೆ ಮಾಡಿ ಕಳೆದ ವರ್ಷ ಮಾಡಿದಂಥ ಗೊಂದಲ ಆಗದ ರೀತಿಯಲ್ಲಿ ಈ ವರ್ಷ ಪಂಪ್‌ಸೆಟ್‌ಗಳನ್ನು ಹಾಗು ವಿದ್ಯುಚ್ಛಕ್ತಿ ಕೊಡತಕದ್ದು. ಹಳ್ಳಿಗಳಿಗೆ ದೀಪ ಕೊಡತಕ್ಕ ಕೆಲಸಗಳನ್ನು ವಿದ್ಯುಚ್ಛಕ್ತಿ ಮಂಡಲಿ ಮಾಡಬೇಕೆಂದು ನಿರ್ದೇಶನವನ್ನು ಸರ್ಕಾರದವರು ಕೊಡಬೇಕು ಎನ್ನುವ ಮಾತನ್ನು ಹೇಳಿ, ಕೊನೆಯದಾಗಿ ಏರಿಯಾ ಡೆವಲಪ್‌ಮೆಂಟ್ ಬಗ್ಗೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈಗಾಗಲೇ ಇದರ ಬಗ್ಗೆ ಇಡೀ ರಾಜ್ಯದಲ್ಲಿ ಒಂದು ಸರ್ವೆ ನಡೆದಿದೆ ಅದರ ರಿಪೋರ್ಟ್ ಕೂಡ ಬಂದಿದೆ. ಆ ರಿಪೋರ್ಟ್‌ನ್ನು ನಾನು ಕೂಡ ನೋಡಿದ್ದೇನೆ ಏರಿಯಾ ಡೆವಲಪ್‌ಮೆಂಟ್ ಬಗ್ಗೆ ನಮ್ಮಲ್ಲಿ ಸರ್ಕಾರ ಯಾವುದೇ ಒಂದು ತೀಕ್ಷ್ಣವಾದಂಥ ಕೆಲಸಗಳನ್ನು ಮಾಡಿ ಪೂರೈಸತಕ್ಕ ಸ್ಥಿತಿಯಲ್ಲಿಲ್ಲ ಎಂದು ಭಾವಿಸುತ್ತೇನೆ. ಅದಕ್ಕೆ ಸರ್ಕಾರದ ಅನೇಕ ಇಲಾಖೆಗಳ ಕೋ ಆರ್ಡಿನೇಷನ್ ಅಗತ್ಯವೆಂದು ಕಾಣುತ್ತದೆ. ಮಾನ್ಯ ಕಾಮಣ್ಣನವರು ಸಲಹೆ ಕೊಟ್ಟ ಹಾಗೆ ಸರ್ಕಾರದ ಮೇಲೆ ಒಂದು ಕ್ಯಾಬಿನೆಟ್ ಸಬ್ ಕಮಿಟಿ ಮಾಡಿ ಆಹಾರವನ್ನು ಹೆಚ್ಚಿಗೆ ಉತ್ಪಾದನೆ ಮಾಡತಕ್ಕ ಉದ್ದೇಶಕ್ಕಾಗಿ ಸಬ್ ಕಮಿಟಿಯನ್ನು ಕ್ಯಾಬಿನೆಟ್ ಮಟ್ಟದಲ್ಲಿ ಮಾಡಿ ಅನೇಕ ಇಲಾಖೆಗಳನ್ನು ಹೊಂದಾಣಿಕೆ ಮಾಡತಕ್ಕ ಕೆಲಸಗಳನ್ನು ಮಾಡಿ ಏರಿಯಾ ಡೆವಲಪ್‌ಮೆಂಟಿಗೆ ತೊಡಗಿಸತಕ್ಕ ಹಣವನ್ನು ಸದುಪಯೋಗಪಡಿಸತಕ್ಕ ಕೆಲಸಗಳಿಗೆ ಹೆಚ್ಚು ಹಣವನ್ನು ತೊಡಗಿಸಿ ಏರಿಯಾ ಡೆವಲಪ್‌ಮೆಂಟಿಗೆ ಸರ್ಕಾರದವರು ಒಂದು ರಿಪೋರ್ಟ್‌ನ್ನು ಪಡೆದು ರಾಜ್ಯದ ಯಾವ ಯಾವ ಭಾಗದಲ್ಲಿ ಕೆಲಸ ನಡೆಯಬೇಕು ಎಂದು ಅಂದಾಜು ಆಗಿದೆಯೋ ಅದು ಸುಸೂತ್ರವಾಗಿ ನಡೆದು ಎಲ್ಲಾ ಜನತೆಗೂ ಅನುಕೂಲವಾಗುವ ಹಾಗೆ ಪ್ರಯತ್ನ ನಡೆಸಬೇಕೆಂಬ ಮಾತನ್ನು ಹೇಳುತ್ತೇನೆ.

ಕೊನೆಯದಾಗಿ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಮ್ಮಲ್ಲಿ ಹತ್ತಾರು ವರ್ಷಗಳ ಕಾಲ ಕಾವೇರಿ ಬೇಸಿನ್‌ನಲ್ಲಿ ಅನೇಕ ಪ್ರಾಜೆಕ್ಟ್‌ಗಳನ್ನು ಕಟ್ಟಬೇಕೆಂದು ಸರ್ಕಾರದವರು ಪರಿಶೀಲನೆ ಮಾಡಿ ಅಂದಾಜುಗಳನ್ನು ತಯಾರು ಮಾಡಿದರು ಅದು ರಾಜಕೀಯ ಕಾರಣಕ್ಕಾಗಿಯಾಗಲೀ ಸ್ವಂತ ಕಾರಣಕ್ಕಾಗಲೀ ಕೆಲವು ಪ್ರಾಜೆಕ್ಟ್‌ಗಳನ್ನು ನೀವು ಕ್ಲಿಯರೆನ್ಸ್ ಕೂಡ ಪಡೆಯುವುದಕ್ಕೆ ಆಗಲಿಲ್ಲ ಇನ್ನು ಕೆಲವು ಪ್ರಾಜೆಕ್ಟ್‌ಗಳಿಗೆ ಕ್ಲಿಯರೆನ್ಸ್ ಕೂಡ ಪ್ರಯತ್ನ ಮಾಡಿ ಹಣವನ್ನು ಒದಗಿಸಿ ಕೆಲಸಗಳನ್ನು ಪ್ರಾರಂಭ ಮಾಡುವುದಕ್ಕೆ ಆಗಲಿಲ್ಲ. ಆ ರೀತಿಯಾದಂಥ ಪ್ರಾಜೆಕ್ಟ್‌ಗಳ ಪೈಕಿ ಕಂಬದಕಡ ಪ್ರಾಜೆಕ್ಟ್ ಕೂಡ ಒಂದು ಎಂದು ನಾನು ಭಾವಿಸುತ್ತೇನೆ. ಈ ಪ್ರಾಜೆಕ್ಟನ್ನ ಕೆಲಸಗಳನು ಕೈಬಿಟ್ಟು ಅಳವಾದ ಏತದ ನೀರಾವರಿ ಯೋಜನೆಯನ್ನು ತಯಾರು ಮಾಡಿ ಹುಣಸೂರು, ಪಿರಿಯಾಪಟ್ಟಣ ಮತ್ತಿತರ ತಾಲ್ಲೂಕುಗಳಿಗೆ ಲಕ್ಷಾಂತರ ಎಕರೆಗೆ ನೀರನ್ನು ಕೊಡುವ ಯೋಜನೆ ತಯಾರು ಮಾಡಲಾಗಿದೆಂದು ತಿಳಿದು ಬಂದಿದೆ. ಈ ಯೋಜನೆ ಯಾವ ಹಂತದಲ್ಲಿ ಇದೆ ಯಾವ ಸಂಸ್ಥೆಗೆ ಕಳುಹಿಸಿ ಮಂಜೂರಾತಿ ಪಡೆಯುವುದಕ್ಕೆ, ಮೊದಲೇ ದುರ್ದೈವವೆಂದು ಕಾಣುತ್ತದೆ. ದೊಡ್ಡ ಪ್ರಾಜೆಕ್ಟ್‌ಗೆ ಕೊಡುವ ಮಾತು ಇರಲಿ, ನೂರು ಎಕರೆಗೆ ನೀರು ಕೊಡತಕ್ಕ ಸಣ್ಣ ನೀರಾವರಿ ಯೋಜನೆ ತಯಾರು ಮಾಡಿ ನೀರು ನಿಲ್ಲಿಸತಕ್ಕ ಸ್ಥಳದಲ್ಲಿ ಹಿಡುವಳಿ ಜಮೀನಿದ್ದರೆ ಅಕ್ವೈಯರ್ ಮಾಡುತ್ತಾರೆ ಕೆಲವು ಕಡೆ ಮುಳುಗಡೆ ಆಗುವಾಗ ತಕರಾರು ಬಂದರೆ ಗುಂಪನ್ನು ಕಟ್ಟಿ ಶಕ್ತಿಯನ್ನು ಉಪಯೋಗಿಸಿ ಕೆರೆ ಕೊಡತಕ್ಕದ್ದು ಸರಿಯಾದದ್ದು ಅಲ್ಲ, ಸರ್ಕಾರಕ್ಕೆ ಒತ್ತಾಯತರತಕ್ಕ ಕೆಲಸಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದರೆ ನಮ್ಮ ರಾಜ್ಯದಲ್ಲಿ ಈಗಾಗಲೇ ನಾವು ಬಹಳ ಕೆಳ ಮಟ್ಟದಲ್ಲಿ ನೀರಾವರಿ ಹೊಂದಿರತಕ್ಕ ರಾಜ್ಯದಲ್ಲಿ ನಾವು ಆಹಾರದ ಕೊರತೆಯನ್ನು ತೊಂದರೆಯನ್ನು ಅನುಭವಿಸತಕ್ಕ ರಾಜ್ಯದಲ್ಲಿ ಯಾವ ನೀರಾವರಿ ಯೋಜನೆಯನ್ನು ಕೂಡ ಮಾಡುವುದಕ್ಕೆ ಆಗುವುದಿಲ್ಲ ಎನ್ನುವ ಭಯ ನನ್ನಲ್ಲಿ ಮೂಡಿದೆ. ಸಣ್ಣ ನೀರಾವರಿ ಯೋಜನೆ ಮಾಡುವುದಕ್ಕೆ ಆಗುವುದಿಲ್ಲ ಸಂಬಂಧಪಟ್ಟ ಸಣ್ಣ ರೈತರು ತಕರಾರು ಹಾಕಿ ಕೋರ್ಟಿಗೆ ಹೋಗುತ್ತಾರೆ, ಮುಳುಗಡೆ ಆಗತಕ್ಕ ಜಮೀನಿರುವ ರೈತರಿಗೆ ರೆವಿನ್ಯೂ ಇಲಾಖೆಯವರು ೬ ತಿಂಗಳು ಒಂದು ವರ್ಷ ಅಕ್ವೈರ್ ಮಾಡಿಸಿ ಕೊಡದೇ ಇರತಕ್ಕ ನೂರಾರು ನಿದರ್ಶನಗಳನ್ನು ನಾವು ಕಾಣಬಹುದು. ೫ ವರ್ಷ ೮ ವರ್ಷ ೧೦ ವರ್ಷಗಳ ಹಿಂದೆ ಮಂಜೂರು ಆದ ಪ್ರಾಜೆಕ್ಟ್‌ಗಳನ್ನು ಇವತ್ತೂ ಕೂಡ ಸಣ್ಣ ನೀರಾವರಿ ಯೋಜನೆಗಳ ಕೆಲಸ ಮಾಡುವುದಕ್ಕೆ ಆಗಿಲ್ಲ. ಎಂದರೆ ಲಕ್ಷಾಂತರ ಎಕರೆಗೆ ನೀರು ಕೊಡತಕ್ಕ ಒಂದು ಯೋಜನೆಯನ್ನು ತಯಾರು ಮಾಡಿ, ಸರ್ಕಾರ ಮಂಜೂರು ಮಾಡಬೇಕಾದ ಸಂದರ್ಭದಲ್ಲಿ ಯಾರನ್ನು ಕುರಿತು ಹೇಳತಕ್ಕಂಥದ್ದು ಅಲ್ಲ ರಾಜಕೀಯ ಬಣ್ಣಗಳಿಂದ ಕೂಡಿದ್ದೇ ಆಗಲಿ, ಮುಳುಗಡೆ ಆಗತಕ್ಕಂಥವರ ಒಂದು ಸಂಘ ರಚನೆ ಮಾಡಿ ಅವರು ಸರ್ಕಾರದ ಮೇಲೆ ಮತ್ತು ಜನತೆಯ ಮೇಲೆ ಒತ್ತಾಯ ತಂದು ಈ ರೀತಿ ಜನತೆ ಉಪಯೋಗವಾಗತಕ್ಕ ಕೆಲಸಕ್ಕೆ ಅಡ್ಡಿ

(ಶ್ರೀ ಎಸ್. ಪುಟ್ಟಸ್ವಾಮಿ)

ಮಾಡತಕ್ಕ ಕೆಲಸ ಯಾರೂ ಮಾಡಿಲ್ಲ, ಅದು ಸರ್ವಥಾ ತಪ್ಪು, ಕರ್ನಾಟಕ ರಾಜ್ಯದ ಹಿತದೃಷ್ಟಿಯಿಂದ ಒಳ್ಳೆಯದು ಅಲ್ಲ, ಈ ರೀತಿ ಮಾಡತಕ್ಕದು ಸರಿಯಾದದ್ದು ಅಲ್ಲ, ಎಂದು, ಈ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಸರ್ಕಾರದ ಈ ಒಂದು ಯೋಜನೆಯನ್ನು ಮಾಡುವುದರಿಂದ ಬರಗಾಲಕ್ಕೆ ಸಿಕ್ಕಿರತಕ್ಕಂಥ ೨-೩ ಜಾಗಗಳಲ್ಲಿ ಈ ನೀರಿನ ಕೆಲಸ ಪೂರೈಸಬಹುದು. ಆದುದರಿಂದ ದಯಮಾಡಿ ಸರ್ಕಾರದವರು ಯಾವ ಒಂದು ಒತ್ತಾಯಕ್ಕೂ ಮಣಿಯದೆ, ಯಾವ ರಾಜಕೀಯ ಹಿನ್ನೆಲೆಗೂ ಜಗ್ಗದೆ ಈ ಒಂದು ಕೆಲಸವನ್ನು ಮಂಜೂರು ಮಾಡಿ ಆದಷ್ಟು ಶೀಘ್ರವಾಗಿ ಈ ಕೆಲಸವನ್ನು ಪ್ರಾರಂಭಿಸಿ ಮುಗಿಸಿಕೊಡಬೇಕೆಂದು ಹೇಳುತ್ತೇನೆ. ಕೊನೆಯದಾಗಿ, ನನಗೆ ಮಾತನಾಡಲು ಅಷ್ಟು ಕಾಲಾವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

4-30 P. M.

† ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—ಸನ್ಮಾನ್ಯ ಉಪಾಧ್ಯಕ್ಷರೇ, ರಾಜ್ಯದ ಮುಖ್ಯಮಂತ್ರಿಗಳು ಈ ಸದನದ ಮುಂದೆ ಇಟ್ಟಿರತಕ್ಕಂಥ ಬೃಹತ್ ನೀರಾವರಿ ವಾಟರ್ ಅಂಡ್ ಪವರ್ ಡೆವಲಪ್‌ಮೆಂಟ್ ಸರ್ವಿಸಸ್, ಇರ್ರಿಗೇಷನ್, ನ್ಯಾವಿಗೇಷನ್, ಮುಂತಾದ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ವಿಚಾರಗಳನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಮೊದಲನೆಯದಾಗಿ ನಾನು ಹೇಳುವುದು ಕಳೆದ ಎರಡು ವರ್ಷಗಳಿಂದಲೂ ನಮ್ಮ ರಾಜ್ಯ ಸರ್ಕಾರ ರೈತರ ಹಿತದೃಷ್ಟಿಯಿಂದ ಅನೇಕ ಉಪಯುಕ್ತವಾದ ಕೆಲಸಕಾರ್ಯಗಳನ್ನು ಮಾಡುತ್ತೇನೆ ಎಂದು ಹೇಳಿಕೊಂಡು ಬಂದಿದ್ದರೂ ಕೂಡ ಮತ್ತು ಹಿಂದುಳಿದಿರತಕ್ಕಂಥ ಜನಕ್ಕೆ ಮತ್ತು ಬರಗಾಲಕ್ಕೆ ಒಳಗಾಗಿರತಕ್ಕಂಥ ಜನಕ್ಕೆ ಪ್ರಾಜೆಕ್ಟುಗಳನ್ನು ತೆಗೆದುಕೊಂಡು ಆದಷ್ಟು ಬೇಗ ಮುಗಿಸಿಕೊಡುತ್ತೇವೆ ಎನ್ನುವ ಮಾತನ್ನು ಜನತೆಗೆ ಕೊಟ್ಟಿದ್ದರೂ ಕೂಡ ಆ ಮಾತಿನ ಪ್ರಕಾರ ಕೆಲಸಕಾರ್ಯಗಳನ್ನು ನಡೆಸುತ್ತಾ ಇಲ್ಲ. ಇದು ಬಹಳ ವಿಷಾದನೀಯ ವಿಚಾರ ಎಂದು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ದೇಶದಲ್ಲಿ ನೀರಾವರಿ ಪ್ರಗತಿ ಆಗ ಆರ್ಥಿಕ ಪ್ರಗತಿಆಗಲಾರದು ಮತ್ತು ಆಹಾರದಲ್ಲೂ ಕೂಡ ಸ್ವಾವಲಂಬನ ಸಾಧಿಸುವುದಕ್ಕೆ ಸಾಧ್ಯವಾಗಲಾರದು ಎಂದು ಹೇಳುತ್ತೇನೆ ಅಲ್ಲದೆ ಈ ಮುಂಚೆ ಅವರು ಏನು ಹೇಳುತ್ತಿದ್ದರು ಎಂದರೆ ರಾಜ್ಯ ಸರ್ಕಾರ ಮತ್ತು ಕೇಂದ್ರಸರ್ಕಾರದಲ್ಲಿ ಭಿನ್ನಾಭಿಪ್ರಾಯ ಇರುವುದರಿಂದ ಹೆಚ್ಚು ಹಣವನ್ನು ಪಡೆಯುವುದಕ್ಕೆ ಸಾಧ್ಯವಾಗುವುದಿಲ್ಲ ನಾವು ಬಂದರೆ ಕೇಂದ್ರ ಸರ್ಕಾರದಿಂದ ಹೆಚ್ಚು ಹಣವನ್ನು ಪಡೆದು ಕಾವೇರಿ ಬೇಸಿನ್, ಕೃಷ್ಣ ಬೇಸಿನ್ ಎಲ್ಲಾ ಪ್ರಾಜೆಕ್ಟುಗಳನ್ನೂ ತೀವ್ರಗತಿಯಲ್ಲಿ ಮುಗಿಸಿ ಲಕ್ಷಾಂತರ ಎಕರೆಗೆ ನೀರನ್ನು ಕೊಡುತ್ತೇವೆ ಹೇಳುತ್ತಾ ಬಂದಿದ್ದಾರೆ. ಆದರೆ ಕಳೆದ ಎರಡು ವರ್ಷದಿಂದ ಆಗಿರುವ ಪ್ರಗತಿ ನೋಡಿದರೆ ಬಹುಶಃ ಕೇಂದ್ರ ಸರ್ಕಾರದಲ್ಲಿ ಯಾವ ಒಂದು ಪ್ರಭಾವ ಬೀರಬೇಕಾಗಿತ್ತೋ ಅದು ಬಹುಮಟ್ಟಿಗೆ ಕಡಿಮೆ ಆಗಿರುವುದರಿಂದ ಈ ಕೆಲಸಗಳು ಕುಂಠಿತವಾಗಿ ನಡೆಯುತ್ತಾ ಇದೆ ಎಂದು ಹೇಳಿದರೆ ತಪ್ಪಾಗಲಾರದು ಅಲ್ಲದೆ ನಮ್ಮ ರಾಜ್ಯದ ೨೭ ಜನ ಪಾರ್ಲಿಮೆಂಟ್ ಸದಸ್ಯರುಗಳು ಒಂದೇ ಪಾರ್ಟಿಯಲ್ಲಿ ಬಂದಿರುವುದರಿಂದ ರಾಜ್ಯ ಸರ್ಕಾರದ ಕೆಲಸಗಳು ಬಹಳ ಉತ್ತಮ ಸ್ಥಿತಿಯಲ್ಲಿ ಆಗುತ್ತವೆ ಅದಕ್ಕೆ ಪ್ರಬಲವಾಗಿ ಹೋರಾಡುತ್ತಾರೆ ಎಂದು ತಿಳಿದುಕೊಂಡಿದ್ದೆವು ಆದರೆ ನಾವು ನಿರೀಕ್ಷಣೆ ಮಾಡಿಕೊಂಡ ಹಾಗೆ ಆಗಲಿಲ್ಲ. ಆದುದರಿಂದ ಇಂಥಾ ಒಂದು ಪರಿಸ್ಥಿತಿ ಹಿಂದೆಂದೂ ಇರಲಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಮತ್ತು ಈ ಕೆಲಸ ಕಾರ್ಯದಲ್ಲಿ ರಾಜ್ಯ ಸರ್ಕಾರದ ಮುಖಂಡರುಗಳು ಕೇಂದ್ರ ಸರ್ಕಾರದಲ್ಲಿ ವರ್ಚಸ್ಸನ್ನು ಬೀರಿ ಸಾಕಷ್ಟು ಹಣ ತರುವುದರಲ್ಲಿ ಪೂರ್ಣವಿಫಲರಾಗಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು ಮತ್ತು ಈಗ ಇಟ್ಟಿರತಕ್ಕಂಥ ಯಾವ ವಿಧದಲ್ಲೂ ತ್ವರಿತವಾಗಿ ಪ್ರಾಜೆಕ್ಟುಗಳನ್ನು ಮುಗಿಸುವುದಕ್ಕೆ ಸಾಧ್ಯವಾಗಲಾರದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಹೇಮಾವತಿ ಪ್ರಾಜೆಕ್ಟ್ ಕೆಲಸ ಶುರುವಾಗಿ ೪—೫ ವರ್ಷವಾದರೂ ಕೂಡ ನಾವು ನಿರೀಕ್ಷಿಸಿದ ಮಟ್ಟದಲ್ಲಿ ಪ್ರಗತಿ ಆಗುತ್ತಾ ಇಲ್ಲ ಈ ವರ್ಷ ಇದಕ್ಕಾಗಿ ೪—೫ ಕೋಟಿ ರೂಪಾಯಿ ಇಟ್ಟಿದ್ದಾರೆ. ಕಳೆದ ವರ್ಷ ಇದಕ್ಕೆ ೬ ಕೋಟಿ ರೂಪಾಯಿ ಖರ್ಚು ಆಯಿತು. ಎಂದು ಕೇಳಿದ್ದೇನೆ. ಈ ವರ್ಷ ಇದಕ್ಕಾಗಿ ೫ ಕೋಟಿ ರೂಪಾಯಿ ಏನು ಇಟ್ಟಿದ್ದೀರೋ ಇದರಲ್ಲಿ ಬಹುಭಾಗ ಎಸ್ಟಾಬ್ಲಿಷ್‌ಮೆಂಟಿಗೆ ಖರ್ಚಾಗಿ ನಿರೀಕ್ಷಿಸಿದಷ್ಟು ಕೆಲಸಕಾರ್ಯಗಳು ಈ ಪ್ರಾಜೆಕ್ಟಿನಲ್ಲಿ ಆಗುವುದಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಳೆದ ಸಾರಿ ಈ ಸದನದಲ್ಲಿ ಮಾನ್ಯ ಬೃಹತ್ ನೀರಾವರಿ ಸಚಿವರು ಒಂದು ಹೇಳಿಕೆ ಕೊಟ್ಟಿದ್ದಾರೆ ೧೯೭೪ನೇ

ಇಸವಿಯಲ್ಲಿ ಹೇಮಾವತಿ ಪ್ರಾಜೆಕ್‌ನಿಂದ ನೀರನ್ನು ವ್ಯವಸಾಯಕ್ಕೆ ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಬಹುಶಃ ೧೯೭೭ ಒಳಗೇ ಇಸವಿಗೆ ಅವರು ಮಾತು ಫಲಪ್ರದವಾಗುತ್ತದೆಯೋ ಎನ್ನುವುದನ್ನು ಕಾದು ನೋಡಬೇಕಾಗಿದೆ ಮತ್ತು ಈ ಮುಳುಗದೆ ಆಗಿರತಕ್ಕಂಥ ಹಳ್ಳಿಗಳಿಗೂ ಕೂಡ ಸರಿಯಾದ ಕಾಂಪನ್ಸೇಷನ್ ಕೊಡದೆ ಕಳೆದ ವರ್ಷದಿಂದಲೂ ಆ ಕಾರ್ಯ ತೀವ್ರಗತಿಯಲ್ಲಿ ನಡೆಯುತ್ತಾ ಇಲ್ಲ. ನಮಗೆ ಸರಿಯಾದ ಕಾಂಪನ್ಸೇಷನ್ ಕೊಡದೆ ಹೋದರೆ ಈ ಬಗ್ಗೆ ಏನೇ ಅಡಚಣೆಗಳು ಬಂದರೂ ಕೂಡ ನಾವು ಜಗ್ಗದೆ ಹೋರಾಟ ಮಾಡುತ್ತೇವೆ ಎಂದು ಆ ಜಂಗಳು ಹಟಹಿಡಿದಿದ್ದಾರೆ. ಮತ್ತು ಆ ಜನರಿಗೆ ಕೋರ್ಟಿನಲ್ಲಿ ಆಗಿರತಕ್ಕಂಥ ಅವಾರ್ಡ್ ಕೊಟ್ಟಿಲ್ಲ. ಅಲ್ಲದೆ ಅವರ ಪುನರ್ವಸತಿ ಬಗ್ಗೆ ಯಾವ ಒಂದು ಕೆಲಸವನ್ನೂ ಮಾಡಿಕೊಟ್ಟಿಲ್ಲ, ಬೇರೆ ಕಡೆ ಜಮೀನೂ ಕೊಟ್ಟಿಲ್ಲ. ಒಂದು ವೇಳೆ ಅವರಿಗೆ ಬೇರೆ ಸೈಟುಗಳನ್ನು ಒದಗಿಸಿ ಕೊಡದೇ ಹೋದರೆ ನೀರಾವರಿ ಬಂದರೂ ಕೂಡ ನಾವು ಬಿಡುವುದಿಲ್ಲ ಎನ್ನುವ ಒಂದು ನಿರ್ಣಯವನ್ನು ಆ ಜನರು ತೆಗೆದುಕೊಂಡಿದ್ದಾರೆ ಎಂದು ಕೇಳಿದ್ದೇನೆ. ಸರ್ವಸಂಪನಗಳನ್ನೂ ಕಳೆದುಕೊಂಡಂಥ ಜನರಿಗೆ ರೀಹ್ಯಾಬಿಲ್‌ಟೇಟ್ ಮಾಡುವುದಕ್ಕೆ ಸಾಕಷ್ಟು ಹಣ ಕೊಡದೆ ನಾನಾ ತೊಂದರೆಗಳನ್ನು ಕೊಡುತ್ತಿದ್ದಾರೆ. ಸರ್ಕಾರದವರು ಯಾವ ಕೆಲಸಕ್ಕೇ ಕೈ ಹಾಕಿದರೂ ಹೇಳುವುದೇ ಒಂದು ಮಾಡುವುದೇ ಒಂದು. ಹೀಗೆ ನಾನಾರೀತಿಯಲ್ಲಿ ರೈತರಿಗೆ ತೊಂದರೆಯಾಗುತ್ತಾ ಇದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಆದುದರಿಂದ ನಾನು ಹೇಳುವುದು ಈಗಲಾದರೂ ಕೂಡ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ಕೊಡಿ ಎಂದು. ಸಾಕಷ್ಟು ಹಣವನ್ನು ತಕ್ಷಣ ಒದಗಿಸಿಕೊಡಿ ಮತ್ತು ಮುಳುಗಡೆ ಆಗಿರತಕ್ಕಂಥ ರೈತರಿಗೆ ಪರಿಹಾರ ಧನವನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡಬೇಕು ಹಾಗೆಯೇ ರೀಹ್ಯಾಬಿಲಿಟೇಟ್ ಮಾಡುವುದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಹೇಮಾವತಿ ಪ್ರಾಜೆಕ್ಟ್‌ಗೆ ಸಂಬಂದಪಟ್ಟ ಹಾಗೆ ಒಂದು ವಿಚಾರ ಹೇಳುತ್ತೇನೆ. ಈ ಹೇಮಾವತಿ ಪ್ರಾಜೆಕ್ಟ್ ಮಧ್ಯದಲ್ಲಿ ಒಂದು ಚಂಗರವಳ್ಳಿ ಛಾನಲ್ ಇದೆ. ಕಳೆದ ೫-೬ ವರ್ಷದಲ್ಲಿ ಈ ಡ್ಯಾಮು, ಕೆಲಸ ಸರಿಯಾಗಿ ಮಾಡದೆ ಡ್ಯಾಮಿನ ಮಧ್ಯದಲ್ಲಿ ಇರತಕ್ಕಂಥ ಚಂಗರವಳ್ಳಿ ಛಾನಲ ಮುಖಾಂತರ ರೈತರಿಗೆ ನೀರನ್ನು ಕೊಡುತ್ತಾ ಇದ್ದರು. ಈ ವರ್ಷ ಸರ್ಕಾರ ಈ ಛಾನಲ್ ಭಾಗವನ್ನು ಮುಚ್ಚಿಬಿಟ್ಟು ನೀರನ್ನು ಕೊಡದೇ ಇರುವ ಹಾಗೆ ನಿಲ್ಲಿಸಿದ್ದಾರೆ ಎನ್ನುವ ಒಂದು ನಿರ್ಣಯ ತೆಗೆದುಕೊಂಡಿದ್ದಾರೆ ಎಂದು ನಾನು ಕೇಳಿದ್ದೇನೆ. ಇದರ ಬಗ್ಗೆ ಸುಮಾರು ೧೩೦೦೦ ಎಕರೆಯ ಹೇಮಾವತಿ ಅಚ್ಚುಕಟ್ಟುದಾರರು ಸೂಪರಿಂಟೆಂಡಿಂಗ್ ಇಂಜಿನೀಯರ್ ಆಫೀಸ್ ಹತ್ತಿರ ಹೋಗಿ ಗಲಾಟೆ ಮಾಡಿ ಧರಣಿ ಮಾಡಿದಾರೆ ಎಂದು ನಾನು ಕೇಳಿದ್ದೇನೆ. ಈ ವಿಚಾರ ಪತ್ರಿಕೆಯಲ್ಲೂ ಕೂಡ ಬಂದಿದೆ. ೧೩೦೦೦ ಎಕರೆಗೆ ನೀರಾವರಿಯಾಗತಕ್ಕಂಥ ಈ ಚಂಗರವಳ್ಳಿ ಛಾನಲ್ ನೀರಿನ ತೂಬನ್ನು ಮುಚ್ಚಿಬಿಟ್ಟಿದ್ದಾರೆ. ಈ ಡ್ಯಾಮ್ ಕಂಪ್ಲೀಟ ಆಗಬೇಕಾದರೆ ಇದನ್ನು ಮುಚ್ಚಬೇಕಾದ್ದು ಆವಶ್ಯಕ ಇದೆ. ಆದರೆ ಇದರಿಂದ ವರ್ಷಕ್ಕೆ ೬೦ ಲಕ್ಷ ರೂಪಾಯಿಯಷ್ಟು ಆಹಾರಧಾನ್ಯ ಬೆಳೆಯುತಕ್ಕಂಥಾದ್ದು ನಿಂತು ಹೋಗುತ್ತದೆ ಈ ಬಗ್ಗೆ ರೈತರು ಗಲಾಟೆ ಮಾಡಿದ ಮೇಲೆ ಇಲಾಖಾ ಅಧಿಕಾರಿಗಳು ೧೨ ಲಕ್ಷ ರೂಪಾಯಿಯ ಒಂದು ಎಸ್ಟಿಮೇಟನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ ಎಂದು ಕೇಳಿದ್ದೇನೆ, ಈ ಎಸ್ಟಿಮೇಟ್ ಪ್ರಕಾರ ಹೇಮಾವತಿ ಹೊಳೆಗೆ ಹೈಪವರ್ ಪಂಪ್ ಹಾಕಿ ಚಂಗರವಳ್ಳಿ ಛಾನಲ್ ಮುಖಾಂತರ ನೀರನ್ನು ಉಪಯೋಗಿಸಿಕೊಳ್ಳುವ ಹಾಗೆ ಒಂದು ಪ್ರಪೋಸಲ್ ಕೊಟ್ಟಿರುತ್ತಾರೆ ಎಂದು ಕೇಳಿದ್ದೇನೆ. ಬಹುಶಃ ಈ ೧೨ ಲಕ್ಷ ರೂಪಾಯಿಯ ಎಸ್ಟಿಮೇಟ್ ಮಂಜೂರಾಗಿದೆಯೋ ಇಲ್ಲವೋ ಎನ್ನುವುದು ಅನುಮಾನಸ್ಪದವಾಗಿದೆ. ಏತಕ್ಕೆಂದರೆ ಹಣಕಾಸಿನ ಪರಿಸ್ಥಿತಿ ಕಷ್ಟವಾಗಿರುವುದರಿಂದ ಇಂಥಾ ಕೆಲಸಗಳಿಗೆ ಹಣ ಸಿಕ್ಕುತದೋ ಇಲ್ಲವೋ ಅನ್ನುವುದು ಅನುಮಾನಸ್ಪದವಾಗಿದೆ. ಈ ಒಂದು ಪ್ರಪೋಸಲ್‌ನ್ನು ಸ್ಯಾಂಕ್ಷನ್ ಮಾಡಿ ಕೆಲಸ ಮಾಡುವುದಾದರೆ ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಒಂದುವೇಳೆ ಹಣದ ಅಭಾವದಿಂದ ಇದನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಾಗದಿದ್ದರೆ ಚಂಗರವಳ್ಳಿ ಛಾನಲ್‌ನಲ್ಲಿ ಎಡಭಾಗದ ತೂಬಿನಲ್ಲಿ ೩೦೦ ಗಜ ಅಂತರದಲ್ಲಿ ಒಂದು ಚಾನಲ್ ತೆಗೆದು ಅದರ ಮುಖಾಂತರ ನೀರನ್ನು ಬಿಡುವ ವ್ಯವಸ್ಥೆಯನ್ನಾದರೂ ಮಾಡಿ. ದದಕ್ಕೆ ನಿಮ್ಮ ಇಲಾಖಾ ಅಧಿಕಾರಿಗಳ ಅಂದಾಜಿನ ಪ್ರಕಾರ ೫೦ ಸಾವಿರ ರೂಪಾಯಿಗಿಂತ ಹೆಚ್ಚಾಗಿ ಖರ್ಚಾಗಲಾರದು. ಈ ರೀತಿ ಮಾಡಿದರೆ ಈ ಛಾನಲ ನಿಂದ ವರ್ಷಕ್ಕೆ ಸುಮಾರು ೨೫ ಲಕ್ಷ ರೂಪಾಯಿನಷ್ಟು ಬೆಳೆಯು ಆಹಾರಧಾನ್ಯ ಉತ್ಪತ್ತಿಯಾಗಿ ಇದರಿಂದ ರೈತರಿಗೂ ಅನುಕೂಲವಾಗುತ್ತದೆ. ಆದುದರಿಂದ ತಕ್ಷಣ ಈ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಇನ್ನು ಹೇಮಾವತಿ ಪ್ರಾಜೆಕ್ಟ್‌ನಲ್ಲಿ ಒಂದು ಪಕ್ಷ ೧-೨ ವರ್ಷ ನೀರು ನಿಂತು ವ್ಯವಸಾಯಕ್ಕೆ ಆ ನೀರನ್ನು ಕೊಡುವುದಾದರೂ ಕೂಡ ಇದರ ಹಿಂಬಾಗದಲ್ಲಿ ಸಾಕಷ್ಟು ಕೆಲಸ ಇನ್ನೂ ಪೂರ್ತಿಯಾಗದೆ, ಇರುವುದರಿಂದ ಆ ನೀರು ಅಲ್ಲೇ ನಿಂತುಬಿಡುತ್ತದೆ. ಒಂದುವೇಳೆ ಡ್ಯಾಮ್ ಕೆಲಸ ಪೂರ್ತಿ ಆದರೂ

(ಶ್ರೀ ಕೆ. ಹೆಚ್. ಹನುಮೇಗೌಡ)

ಕೂಡ ಆ ಫೀಲ್ಡ್ ಚಾನಲ್‌ಗೆ ನೀರು ಹೋಗುವ ಪರಿಸ್ಥಿತಿ ಇಲ್ಲ. ಅಲ್ಲಿ ರೇಟುಗಳನ್ನು ಯಂದ್ವಾತದ್ವಾ ಕೊಡುವುದರ ಮೂಲಕ ಅವ್ಯವಹಾರ ನಡೆದಿರುವ ಕಾರಣ ಹೊಸದಾಗಿ ಬಂದಂಥ ಅಧಿಕಾರಿಗಳು ತಮ್ಮ ಕೈಯನ್ನೇಕೆ ಸುಟ್ಟುಕೊಳ್ಳಬೇಕು ಎಂಬ ಕಾರಣದಿಂದ ಕೆಲಸವನ್ನು ಮುಂದುವರೆಸುತ್ತಿಲ್ಲ. ಮುಂದೆ ಇದರ ಬಗ್ಗೆ ವಿವರವಾಗಿ ಪ್ರಸ್ತಾಪ ಮಾಡಬೇಕೆಂದಿದ್ದೇನೆ. ಇಂದು ಆ ಭಾಗದಲ್ಲಿ ಯಾವ ಕೆಲಸಕ್ಕೆ ಕೈಹಾಕಿದರೂ ಸಹ ಪರಿಪೂರ್ಣ ಮಾಡುತ್ತಿಲ್ಲ. ಕಂಟ್ರಾಕ್ಟರ್‌ಗಳಿಗೆ ಅನುಕೂಲವಾಗುವುದಾದರೆ ಕೆಲಸವನ್ನು ಪೂರ್ತಿಯಾಗಿ ಮಾಡಿಸುವುದು ಇಲ್ಲವಾದರೆ ಆ ಕೆಲಸವನ್ನು ಮಾಡಿಸದೆ ಅರ್ಧಕ್ಕೆ ನಿಲ್ಲಿಸುವುದು ನಡೆಯುತ್ತಿದೆ. ಹೀಗಾಗಿ ಯಾವ ಕೆಲಸವೂ ಸರಿಯಾಗಿ ನಡೆಯುತ್ತಿಲ್ಲ. ಯಾವಾಗಲೂ ಟೆಂಡರ್ ಕರೆದು ಕೆಲಸ ವಹಿಸುವಾಗ ಇಲಾಖೆಗೂ ಮತ್ತು ಸಂಬಂಧಪಟ್ಟ ಕಂಟ್ರಾಕ್ಟರಿಗೂ ಒಂದು ಅಗ್ರಿಮೆಂಟ್ ಆಗಿರುತ್ತದೆ. ಆ ಒಂದು ಅಗ್ರಿಮೆಂಟ್ ಪ್ರಕಾರ ಕೆಲಸ ಏತಕ್ಕೆ ಪೂರ್ತಿಯಾಗುವುದಿಲ್ಲ. ಕೆಲಸ ಅರ್ಧಕ್ಕೇ ನಿಲ್ಲಲು ಕಾರಣವೇನು ಎಂಬತಕ್ಕಂಥ ಪ್ರಶ್ನೆಯನ್ನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ಈ ಯೋಜನೆಯ ಹಿಂಭಾಗದಲ್ಲಿರುವ ಸುಮಾರು ಒಂದು ಲಕ್ಷ ಚಿಲ್ಲರೆ ಎಕರೆ ಭೂಮಿಗೆ ನೀರಾವರಿ ಸೌಕರ್ಯವನ್ನು ಇನ್ನು ಒಂದೆರಡು ವರ್ಷಗಳಲ್ಲಿ ಒದಗಿಸಬೇಕೆಂಬ ಉದ್ದೇಶವನ್ನು ಸರ್ಕಾರದವರು ಹೊಂದಿದ್ದರೂ ಸಹ ಆ ಭಾಗ ಇನ್ನೂ ಡೆವಲಪ್ ಆಗಿಲ್ಲ. ಮತ್ತು ಸರಿಯಾದಂಥ ಫೀಡಲ್ ಚಾನಲ ತೆಗೆದಿಲ್ಲ. ಜೊತೆಗೆ ರೈತರೂ ಸಹ ಆ ನೀರನ್ನು ಸದುಪಯೋಗ ಮಾಡಿಕೊಳ್ಳುವ ಪರಿಸ್ಥಿತಿ ಇಲ್ಲ. ಈ ದೃಷ್ಟಿಯಿಂದ ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒಂದು ಸಲಹೆ ಮಾಡುತ್ತೇನೆ. ಏನೆಂದರೆ ಈಗ ತುಂಗಭದ್ರಾ ಡ್ಯಾಂ ಹತ್ತಿರ ಆಯಕಟ್ ಡೆವಲಪ್‌ಮೆಂಟ್ ಬೋರ್ಡ್ ಎಂಬುದಾಗಿ ಮಾಡಿ ಅದರ ಮೂಲಕ ಆ ಭಾಗದಲ್ಲಿ ಕೆಲಸಗಳನ್ನು ತ್ವರಿತಗತಿಯಿಂದ ಮಾಡುತ್ತಿರುವಂತೆ ಈ ಭಾಗದಲ್ಲಿಯೂ ಸಹ ಹೇಮಾವತಿ ಆಯಕಟ್ ಡೆವಲಪ್‌ಮೆಂಟ್ ಬೋರ್ಡ್ ಎಂಬುದಾಗಿ ಒಂದು ಸಂಸ್ಥೆಯನ್ನು ತೆರೆದು ಈ ಪ್ರಾಜೆಕ್ಟಿನ ಹಿಂಭಾಗದಲ್ಲಿರುವ ರೈತರು ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಸೂಚನೆ ಮಾಡುತ್ತೇನೆ. ಈ ಯೋಜನೆಯಿಂದ ಹಾಸನ ತಾಲ್ಲೂಕಿನಲ್ಲಿ ೩ ಸಾವಿರ ಎಕರೆ ಭೂಮಿ ಮುಳುಗಡೆಯಾಗುತ್ತದೆ. ಆದರೆ ನೀರಾವರಿಗೆ ಒಳಪಡತಕ್ಕ ಭೂಮಿ ಕೇವಲ ಮೂರೂವರೆ ಸಾವಿರ ಎಕರೆ ಮಾತ್ರ. ಹಾಸನ ತಾಲ್ಲೂಕು ಕಳೆದ ೬-೭ ವರ್ಷಗಳಿಂದ ಕ್ಷಾಮಕ್ಕೆ ತುತ್ತಾಗುತ್ತಿದೆ. ಮುಖ್ಯವಾಗಿ ಶಾಂತಿಗ್ರಾಮ, ಕಸಬಾ ಕಟ್ಟಾಯ ಹೋಬಳಿಗಳು ಬಹಳ ತೊಂದರೆಗೆ ಒಳಗಾಗಿವೆ. ಈ ಭಾಗದ ರೈತರು ಬಹಳ ತೊಂದರೆಯನ್ನು ಅನುಭವಿಸುತ್ತಿರುವುದರಿಂದ ಈ ಪ್ರದೇಶಕ್ಕೆ ಸುಮಾರು ೫೦ ಅಥವಾ ೬೦ ಅಡಿ ಎತ್ತರದ ಹೈಲೆವೆಲ್ ಚಾನಲ್ ತೆಗೆಯುವುದರ ಮೂಲಕ ನೀರನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದರಿಂದ ಡ್ಯಾಂನಲ್ಲಿ ಶೇಖರಣೆಯಾಗುವ ನೀರಿಗೂ ಸಹ ತೊಂದರೆ ಬರುವುದಿಲ್ಲ. ಮತ್ತು ಈ ಪ್ರಾಜೆಕ್ಟಿನ ಹಿಂಭಾಗದಲ್ಲಿರುವ ಜಮೀನಿನಲ್ಲಿ ಬೆಳೆ ಬೆಳೆಯುವ ರೈತರಿಗೂ ಸಹ ನೀರಿನ ತೊಂದರೆ ಬರುವುದಿಲ್ಲ. ಆದಕಾರಣ ನಾನು ಹೇಳಿದಂತೆ ಒಂದು ಹೈಲೆವಲ್ ಚಾನಲ ತೆಗೆದರೆ ಆ ವ್ಯಾಲಿಯಲ್ಲಿ ಬರುವ ನೂರಾರು ಕೆರೆಗಳಿಗೂ ಸಹ ನೀರನ್ನು ಒದಗಿಸಿದಂತೆ ಆಗುತ್ತದೆ. ಈ ಅಂಶವನ್ನು ನಾನು ಕಳೆದ ಎರಡು ವರ್ಷಗಳಿಂದಲೂ ಈ ಸದನದಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಮತ್ತು ಈ ತಾಲ್ಲೂಕಿನ ಜನರು ಸಹ ಆಗಾಗ್ಗೆ ಸರ್ಕಾರಕ್ಕೆ ಒತ್ತಾಯ ಹಾಕಿದ್ದಾರೆ. ಆದರೂ ಕೂಡ ಇದುವರೆಗೆ ಯಾವ ಕಾರ್ಯಕ್ರಮವನ್ನು ಸರ್ಕಾರ ಕೈಕೊಂಡಿಲ್ಲ. ಈ ಬಗ್ಗೆ ರೈತರು ಎಚ್ಚೆತ್ತು ಹೋರಾಟ ಮಾಡುವುದಕ್ಕೆ ಮುಂಚೆ ಮತ್ತು ಪರಿಸ್ಥಿತಿ ವಿಕೋಪಕ್ಕೆ ಹೋಗುವುದಕ್ಕೆ ಮುಂಚೆ ಸರ್ಕಾರದವರು ಇದರ ಬಗ್ಗೆ ತಕ್ಷಣ ಆಲೋಚನೆ ಮಾಡಿ ಅದು ರೀಜನಬಲ್ ಇದ್ದರೆ ಕಾರ್ಯಗತ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಹೇಮಾವತಿ ಡ್ಯಾಂನಲ್ಲಿ ಕೆಲಸ ಮಾಡಲು ಕೆಲವರನ್ನು ಡೈಲಿ ವೇಜಸ್ ಮೇಲೆ ತೆಗೆದುಕೊಳ್ಳಲಾಗಿದೆ. ಇವರಿಗೆ ಭಾನುವಾರ ಮತ್ತು ಇತರೇ ರಜಾ ದಿನಗಳಲ್ಲಿ ಕೂಲಿ ಸಿಗುವುದಿಲ್ಲ. ಉಳಿದಂತೆ ಇವರಿಗೆ ತಿಂಗಳಿಗೆ ಕೂಲಿ ಸಿಗುವುದು ೪೫ರಿಂದ ೬೦ ರೂಪಾಯಿಗಳು ಮಾತ್ರ. ಇವರುಗಳಿಗೆ ವಾಸಕ್ಕೆ ಷೆಡ್‌ಗಳನ್ನು ಕೊಟ್ಟಿರುವುದರಿಂದ ಅದರ ಬಾಡಿಗೆ ಎಂದು ೬೦ ರೂಪಾಯಿಗಳ ಕೂಲಿ ಹಣದಲ್ಲಿ ೨೦ ರೂಪಾಯಿಗಳನ್ನು ವಸೂಲಿ ಮಾಡುತ್ತಿದ್ದಾರೆ. ಒಂದು ಕಡೆ ಈ ಸರ್ಕಾರದವರು ತಮಗೆ ಬಡವರ ಬಗ್ಗೆ ಅನುಕಂಪವಿದೆ ಎಂದು ಕಣ್ಣೀರು ಸುರಿಸುತ್ತಾರೆ. ಮತ್ತೊಂದು ಕಡೆ ಅವರಿಗೆ ಬರುತ್ತಿರುವ ಅಲ್ಪ ಸಂಬಳದಲ್ಲಿ ೩೦ ರೂಪಾಯಿಗಳನ್ನು ಬಾಡಿಗೆ ಎಂದು ಕಡ್ಡಾಯವಾಗಿ ವಸೂಲಿ ಮಾಡುತ್ತಿದ್ದಾರೆ. ಇದಕ್ಕಿಂತ ನಾಚಿಕೆಗೇಡಿನ ವಿಚಾರ ಮತ್ತೊಂದಿಲ್ಲ. ಈ ವಿಚಾರ ನಿಜವಾಗಿದ್ದರೆ ಸರ್ಕಾರದವರು ತಕ್ಷಣ ಆ ಬಡಪಾಯಿಗಳಿಂದ ಬಾಡಿಗೆ ವಸೂಲಿ ಮಾಡುವುದನ್ನು ನಿಲ್ಲಿಸಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಹಾಸನ ಜಿಲ್ಲೆ ಯಾವಾಗಲೂ ಕ್ಷಾಮಕ್ಕೆ ತುತ್ತಾಗುತ್ತಿರುವುದರಿಂದ ಅದನ್ನು ಹೋಗಲಾಡಿಸಲು ಹೆಗಬಿ ಮತ್ತು ವೋಟೆಹೊಳೆ ಪ್ರಾಜೆಕ್ಟ್‌ಗಳನ್ನು ಜಾಗ್ರತೆ

ಕೈಕೊಳ್ಳಬೇಕೆಂದು ನಾವು ಹೇಳುತ್ತಾ ಬಂದಿದ್ದೇವೆ, ಒಂದೂವರೆ ವರ್ಷದ ಹಿಂದೆ ಆ ಜಿಲ್ಲೆಯ ಪಾರ್ಲಿಮೆಂಟ್ ಸದಸ್ಯರು ಈ ಬಗ್ಗೆ ಒಂದು ಹೇಳಿಕೆಯನ್ನು ಹೊರಡಿಸಿ ಇನ್ನು ೧೫-೨೦ ದಿವಸಗಳಲ್ಲಿ ಈ ದೇಶದ ಪ್ರಧಾನಮಂತ್ರಿಗಳನ್ನು ಕರೆಸಿ ಅವರ ಅಮೃತ ಹಸ್ತದಿಂದ ಈ ಪ್ರಾಜೆಕ್ಟ್‌ಗಳ ಕೆಲಸವನ್ನು ಪ್ರಾರಂಭ ಮಾಡಿಸಲಾಗುತ್ತದೆ ಎಂದು ತಿಳಿಸಿದರು. ಆ ವಿಚಾರವನ್ನು ಪತ್ರಿಕೆಗಳವರೂ ಸಹ ದಪ್ಪಕ್ಷರಗಳಲ್ಲಿ ಪ್ರಕಟ ಮಾಡಿದರು. ಆದರೆ ಇಲ್ಲಿಯವರೆಗೆ ಯಾವ ಒಂದು ಕೆಲಸಕಾರ್ಯಗಳು ಸಹ ಆಗಲಿಲ್ಲ. ಇದರ ಜೊತೆಗೆ ಈಗ ಆ ಜಿಲ್ಲೆಯ ಮಂತ್ರಿಗಳನ್ನು ಸಹ ಮಂತ್ರಿಮಂಡಲದಿಂದ ತೆಗೆದುಹಾಕಿದ್ದಾರೆ,

ಶ್ರೀ ಎಚ್. ಡಿ. ದೇವೇಗೌಡ.—ಹಾಸನ ಜಿಲ್ಲೆ ತಬ್ಬಲಿಯಾಯಿತು ಎಂದು ಹೇಳುತ್ತಿದ್ದಾರೆ.

ಶ್ರೀ ಕೆ. ಎಚ್. ಹನುಮೇಗೌಡ.—ಈ ಭಾಗದ ಜನರು ಕಳೆದ ೬-೭ ವರ್ಷಗಳಿಂದ ಪಡಬಾರದ ಕಷ್ಟಗಳನ್ನು ಅನುಭವಿಸಿರುವುದರಿಂದ ಆದಷ್ಟು ಜಾಗ್ರತೆ ಈ ಪ್ರಾಜೆಕ್ಟ್‌ಗಳ ಕೆಲಸವನ್ನು ಕೈಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಜಿಲ್ಲೆಯಲ್ಲಿ ಕ್ಷಾಮ ಬಂದಾಗ ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುವುದರ ಮೂಲಕ ಪರಿಹಾರ ಕಾಮಗಾರಿ ಕೆಲಸಗಳನ್ನು ಕೈಗೊಳ್ಳುತ್ತಾರೆ. ಇದರ ಬದಲು ಶಾಶ್ವತವಾದಂಥ ನೀರಾವರಿ ಯೋಜನೆಗಳ ಕೆಲಸವನ್ನು ಕೈಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಈಗಾಗಲೆ ಕಳೆದ ಒಂದೂವರೆ ತಿಂಗಳಿಂದ ಜನರು ಕುಡಿಯುವುದಕ್ಕೆ ನೀರು ಇಲ್ಲದೆ ತೊಂದರೆ ಅನುಭವಿಸುತ್ತಿದ್ದಾರೆ. ಬೋರ್‌ವೆಲ್‌ಗಳ ಮೂಲಕ ಈಗ ನೀರನ್ನು ಒದಗಿಸಲಾಗುತ್ತಿದೆ. ಆದರೆ ಅದು ಸಾಲದು ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿದೆಯೋ ಕಾರಣ ಇದನ್ನು ತಡೆಗಟ್ಟಬೇಕೆಂದು ಹೇಳುತ್ತೇನೆ. ಕಳೆದ ೬-೭ ತಿಂಗಳ ಹಿಂದೆ ದೆಹಲಿಯಿಂದ ವಾಪಸ್ ಬಂದ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟರು ಏಕೆಂದರೆ ಕಾವೇರಿ ಬೇಸಿನ್‌ನಲ್ಲಿರುವ ಎಲ್ಲ ಯೋಜನೆಗಳನ್ನು ಕೈಕೊಳ್ಳಲು ಕೇಂದ್ರ ಸರ್ಕಾರ ಒಪ್ಪಿಗೆ ಕೊಟ್ಟಿರುವುದರಿಂದ ಆ ಬಗ್ಗೆ ಕೆಲಸಗಳನ್ನು ತಕ್ಷಣ ಪ್ರಾರಂಭ ಮಾಡುತ್ತೇವೆ ಎಂದು, ಈ ಒಂದು ಘಟಿಯಲ್ಲಿ ಅವರು ಕೊಟ್ಟಂತಹ ಹೇಳಿಕೆಯಿಂದ ನಾನು ಸಂತೋಷಗೊಂಡು ಅವರಿಗೆ ಒಂದು ಪತ್ರವನ್ನು ಬರೆಯುವುದರ ಮೂಲಕ ಕನ್‌ಗ್ರಾಜುಲೇಷನ್ ಮಾಡಿದೆ; ತಮ್ಮ ಕಾಲದಲ್ಲಿ ಇಂತಹ ಒಂದು ಉತ್ತಮವಾದ ಕೆಲಸವನ್ನು ಸಾಧನೆ ಮಾಡಿದ್ದೀರಿ, ಇದರಿಂದ ಹಾಸನ ತಾಲ್ಲೂಕು ಮತ್ತು ಅದರ ಅಕ್ಕಪಕ್ಕದ ಜನರ ಕಷ್ಟಗಳು ಪರಿಹಾರವಾಗುತ್ತವೆಯಾದ್ದರಿಂದ ಆ ಜನರ ಪರವಾಗಿ ತಮಗೆ ವಂದನೆಯನ್ನು ಅರ್ಪಿಸುತ್ತೇನೆ ಎಂದು ಆ ಕಾಗದದಲ್ಲಿ ತಿಳಿಸಿದ್ದೆ. ಅವರು ಕೇಂದ್ರಸರ್ಕಾರದಿಂದ ಸ್ಯಾಂಕ್ಷನ್ ಮಾಡಿಸಿಕೊಂಡು ಬಂದಿದ್ದಾರೆಂದು ನಾನು ತಿಳಿದುಕೊಂಡೆ. ಆದರೆ ಅವರು ಅಲ್ಲಿ ಏನು ಹೇಳಿದರೋ ಮತ್ತು ಇವರು ಇಲ್ಲಿ ಏನು ಹೇಳಿದರೋ ಸರಿಯಾಗಿ ನನಗೆ ಗೊತ್ತಿಲ್ಲ. ಆದರೆ ನಮ್ಮ ಭಾಗದಲ್ಲಿ ಯಾವ ಯೋಜನೆಯ ಕೆಲಸಗಳು ಸಹ ಇಲ್ಲಿಯವರೆಗೆ ಪ್ರಾರಂಭವಾಗಲಿಲ್ಲ. ಆ ಜಿಲ್ಲೆಯ ಪಾರ್ಲಿಮೆಂಟ್ ಸದಸ್ಯರು ಸಹ ಆಗಾಗ್ಗೆ ಈ ವಿಚಾರದಲ್ಲಿ ಹೇಳಿಕೆ ಕೊಡುತ್ತಿರುತ್ತಾರೆ. ಮತ್ತೊಂದು ಕಡೆ ಸರಕಾರದವರು ಹೇಳಿಕೆ ಕೊಡುತ್ತಿರುತ್ತಾರೆ. ಆದರೆ ಯಾವ ಕೆಲಸಗಳೂ ಸಹ ಪ್ರಾರಂಭವಾಗಲಿಲ್ಲ. ದೇಶದ ಹಿತದ ದೃಷ್ಟಿಯಿಂದ ಮತ್ತು ಆ ಭಾಗದ ಜನರು ಸ್ವಾವಲಂಬಿಗಳಾಗುವ ದೃಷ್ಟಿಯಿಂದ ಈ ಬಹು ಮುಖ್ಯವಾದ ಯೋಜನೆಗಳ ಕೆಲಸವನ್ನು ಕೈಕೊಳ್ಳಿ ಎಂದು ಶಾಂತಿಯಿಂದ ಕೇಳಿಕೊಂಡರೂ ಸಹ ಸರ್ಕಾರದ ಗಮನಕ್ಕೆ ಬರದಿರುವುದನ್ನು ನೋಡಿದರೆ, ಮುಂದೆ ಆ ಭಾಗದ ಜನರು ವಿಧಿಯಿಲ್ಲದೆ ಈ ಸರ್ಕಾರದ ಮೇಲೆ ಮತ್ತು ಕೇಂದ್ರಸರ್ಕಾರದ ಮೇಲೆ ಚಳುವಳಿ ಹೂಡುವ ಕಾಲ ಬರಬಹುದು ಎಂದ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಆ ಭಾಗದ ಜನರು ಮಳೆಬೆಳೆ ಇಲ್ಲದೆ ತಮ್ಮ ಸಂಸಾರವನ್ನು ಸಾಕಲು ಸಾವಿರಾರು ರೂಪಾಯಿಗಳ ಸಾಲವನ್ನು ಮಾಡಿಕೊಂಡಿದ್ದಾರೆ. ಇಂತಹ ಜನರಿಗೆ ತಾವು ಸರಿಯಾದ ಅನುಕೂಲಗಳನ್ನು ಮಾಡಿಕೊಡದಿದ್ದರೆ ಮುಂದೆ ಅವರು ಏನು ಮಾಡುವುದಕ್ಕೂ ಹಿಂಜರಿಯುವುದಿಲ್ಲ. ತಾವು ಬೇಕಾದರೆ ಸೈನ್ಯವನ್ನು ಕರೆಸಬಹುದು. ಅದಕ್ಕೂ ಸಹ ಅವರು ಜಗ್ಗುವುದಿಲ್ಲ. ಹಸಿದ ಜನರು, ಹೊಟ್ಟೆಗೆ ಇಲ್ಲದ ಜನರು ಯಾವುದಕ್ಕೂ ಹೆದರುವುದಿಲ್ಲವೆಂಬುದನ್ನು ತಾವು ತಿಳಿದುಕೊಳ್ಳಬೇಕು. ಈಗಾಗಲೇ ಗುಜರಾತಿನ ಜನರು ಮಾಡಿ ತೋರಿಸಿದ್ದಾರೆ. ಮುಖ್ಯ ಮಂತ್ರಿಗಳು ಈಗ ಸಭೆಗೆ ಬರುತ್ತಿದ್ದಾರೆ. ಅವರು ಕೆಲವು ತಿಂಗಳ ಕೆಳಗೆ ದೆಹಲಿಯಿಂದ ವಾಪಸ್ ಬಂದಮೇಲೆ ಕೇಂದ್ರ ಸರ್ಕಾರದವರು ಕಾವೇರಿ ಬೇಸಿನ್‌ನಲ್ಲಿರುವ ಎಲ್ಲ ಯೋಜನೆಗಳ ಕೆಲಸಗಳನ್ನು ಕೈಕೊಳ್ಳುವುದಕ್ಕೆ ಒಪ್ಪಿಕೊಂಡಿದ್ದಾರೆ. ಆದಕಾರಣ ಆ ಕೆಲಸಗಳನ್ನು ತ್ವರಿತಗತಿಯಿಂದ ಮಾಡುತ್ತೇವೆ ಎಂದು ಹೇಳಿಕೆ ಕೊಟ್ಟರು.

ಮಾನ್ಯ ಮುಖ್ಯ ಮಂತ್ರಿಗಳಿಗೆ ನಾನು ಒಂದು ಪತ್ರವನ್ನು ಬರೆದಿದ್ದೇನೆ. ಈ ಮುಖ್ಯಮಂತ್ರಿಗಳ ಕಾಲದಲ್ಲಿ ಜನತೆಯ ಕಷ್ಟಗಳು ಪರಿಹಾರವಾಗುತ್ತದೆಂದು ಸಂತೋಷದಿಂದ ಅವರಿಗೆ ನಾನು ಒಂದು ಪತ್ರವನ್ನು ಬರೆದಿದ್ದೆ. ಆದ್ದರಿಂದ ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಒಂದು ಪ್ರಶ್ನೆಯನ್ನು

ಶ್ರೀ ಕೆ. ಹೆಚ್. ಹನುಮೇಗೌಡ)

ಹಾಕುತ್ತೇನೆ. ತಮ್ಮ ಕಾಲದಲ್ಲಿ ಯಾವ ಯಾವ ಕೆಲಸಕಾರ್ಯಗಳು ಎಲ್ಲಿಯವರೆಗೆ ಬಂದಿದೆ, ಯೋಜನೆಯ ಕೆಲಸಗಳನ್ನು ನ್ಯಾಯವಾಗಿ ಮಾಡದೇ ಇರುವುದಕ್ಕೆ ಕಾರಣವೇನು ? ಈ ದೇಶದ ಆ ಭಾಗದ ಜನ ತರಿಗೆಯನ್ನು ಕೊಡುತ್ತಾ ಇಲ್ಲವೇ ? ಅವರು ಸರ್ಕಾರಕ್ಕೆ ಎಲ್ಲಾ ವಿಧಗಳಲ್ಲಿಯೂ ಸರಿಯಾಗಿ ನಡೆಯುವುದಿಲ್ಲವೇ ? ಯಾವ ಕಾರಣದಿಂದ ಆ ಭಾಗದ ಜನರ ಬೇಡಿಕೆಯನ್ನು ಕಡೆಗಾಣಿಸುತ್ತೀರಿ ಎಂದು ನಾನು ಪ್ರಶ್ನೆಯನ್ನು ಹಾಕುತ್ತೇನೆ. ಸರ್ಕಾರದವರು ಇದೇ ರೀತಿಯ ಧೋರಣೆಯನ್ನು ತಳೆದರೆ ವಿಧಿಯಿಲ್ಲದೆ ಆ ಭಾಗದ ಜನ ರಾಜ್ಯ ಸರ್ಕಾರದ ಮೇಲೆ ಕೇಂದ್ರ ಸರ್ಕಾರದ ಮೇಲೆ ಒಂದು ಚಳುವಳಿಯನ್ನು ಹೂಡಿ ತಮ್ಮ ಬೇಡಿಕೆಯನ್ನು ಈಡೇರಿಸಿಕೊಳ್ಳಬೇಕಾಗುತ್ತದೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ನಮ್ಮ ಭಾಗದವರು ಮಂತ್ರಿಗಳಾಗಿದ್ದರು. ಅವರನ್ನೂ ಈಗ ತೆಗೆದಿದ್ದಾರೆ, ಅವರನ್ನು ತೆಗೆದ ಮೇಲೆ ನಮ್ಮ ಭಾಗದ ಇನ್ನೊಬ್ಬರಿಗಾದರೂ ಆ ಪದವಿಯನ್ನು ಕೊಟ್ಟಿಲ್ಲ. ಅವರಾದರೂ ಮಂತ್ರಿಗಳಾಗಿದ್ದರೆ ಹೋರಾಟ ಮಾಡಿ ನಮ್ಮ ನೀರಾವರಿ ಪ್ರಾಜೆಕ್ಟ್ ಕೆಲಸವನ್ನು ಕಾರ್ಯಗತ ಮಾಡಿಕೊಡುತ್ತಿದ್ದರು. ಈಗ ಮಾನ್ಯ ಮುಖ್ಯ ಮಂತ್ರಿಗಳು ದಯಮಾಡಿ ನಮ್ಮ ಭಾಗದ ಜನರ ಬೇಡಿಕೆಗಳನ್ನು ಈಡೇರಿಸಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಯಂಗಚಿ ಮತ್ತು ಓಟಿಹೊಳೆ ಪ್ರಾಜೆಕ್ಟ್‌ಗಳನ್ನು ಕಾರ್ಯಗತ ಮಾಡಿಕೊಡಬೇಕು. ಶ್ರೀ ಮಾನ್ ದೇವರಾಜ ಅರಸ್ ಅವರು ಮುಖ್ಯ ಮಂತ್ರಿಗಳಾಗಿ ಬಂದವೇಳೆ ಅವರು ರಾಜಮನೆತನದವರು, ರಾಜರ ವಂಶದಿಂದ ಬಂದವರು ರೈತರ ಹಿತದೃಷ್ಟಿಯಿಂದ ಉಪಯುಕ್ತವಾದ ಕೆಲಸಗಳನ್ನು ಮಾಡಿ ಎಲ್ಲರ ಮೆಚ್ಚಿಗೆಗೂ ಪಾತ್ರರಾಗುತ್ತಾರೆ ಎಂದು ನಾನು ನಿರೀಕ್ಷಣೆ ಮಾಡಿಕೊಂಡಿದ್ದೆ. ಅವರು ಮುಖ್ಯಮಂತ್ರಿಗಳಾದ ದಿವಸ ನಾನು ಬಹಳ ಸಂತೋಷ ಪಟ್ಟೆ. ಆದರೆ ನಾವು ನಿರೀಕ್ಷಣೆ ಮಾಡಿದ ಧಾಟಿಯಲ್ಲಿ ಕೆಲಸಗಳು ನಡೆಯುತ್ತಿಲ್ಲ. ಅವರು ದೇಶಕ್ಕೆ ಒಳ್ಳೆಯ ಮತ್ತು ಶುದ್ಧವಾದ ಆಡಳಿತವನ್ನು ಕೊಡಬೇಕಾಗಿತ್ತು. ಅನೇಕ ವರ್ಷಗಳ ಕಾಲ ದೇಶದ ಜನ ಜ್ಞಾಪಕದಲ್ಲಿ ಇಟ್ಟುಕೊಳ್ಳತಕ್ಕ ಉತ್ತಮವಾದ ಕೆಲಸ ಆಗುತ್ತದೆ ಎಂದು ನಾನು ನಂಬಿಕೊಂಡಿದ್ದೆ. ಆದರೆ ನನ್ನ ನಿರೀಕ್ಷಣೆಗೆ ತದ್ವಿರುದ್ಧವಾದ ವ್ಯವಹಾರಗಳು ನಡೆಯುತ್ತಿವೆ. ಪ್ರಾಜೆಕ್ಟ್ ಕೆಲಸಕಾರ್ಯಗಳು ಉತ್ತಮ ಮಟ್ಟದಲ್ಲಿ ನಡೆಯುತ್ತಿಲ್ಲ. ನಡೆಯಬಾರದ ಅವ್ಯವಹಾರಗಳು ಬಿಲ್ಲುಗಳನ್ನು ಕೊಡುವುದರಲ್ಲಿ ನಡೆಯುತ್ತಿವೆ. ಇದನ್ನು ಸರಿಪಡಿಸಬೇಕು. ವರ್ಷೇ ವರ್ಷೇ ಬರಗಾಲಕ್ಕೆ ತುತ್ತಾಗತಕ್ಕ ಪ್ರದೇಶಗಳಿಗೆ ಅನುಕೂಲವಾಗತಕ್ಕಂಥಾ ಯಂಗಚಿ ಮತ್ತು ಓಟಿಹೊಳೆ ಪ್ರಾಜೆಕ್ಟ್ ಕಾರ್ಯಗತ ಮಾಡುವುದಕ್ಕೆ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಹಾಕಿ ಈ ಕೆಲಸವನ್ನು ಮಾಡಿಕೊಡಬೇಕು. ಮತ್ತು ನಾನು ಈಗಾಗಲೇ ಹೇಳಿದ ಹೇಮಾವತಿ ಯೋಜನೆಯ ಚಂಗರವಳ್ಳಿ ಪ್ರದೇಶದ ತೂಬೊಂದನ್ನು ಮುಚ್ಚಿರುವುದರಿಂದ ಸುಮಾರು ೨೦ ಲಕ್ಷ ರೂಪಾಯಿಗಳ ಆಹಾರಧಾನ್ಯವನ್ನು ಬೆಳೆಯುವ [illegible]೩೦೦ ಎಕರೆಗೆ ಜಮೀನಿಗೆ ತೊಂದರೆಯಾಗಿದೆ. ಈ ಬಗ್ಗೆ ನಾನು ಈಗಾಗಲೇ ಹೇಳಿದಹಾಗೆ ತಕ್ಷಣ ಪರ್ಯಾಯ ವ್ಯವಸ್ಥೆ ಮಾಡಬೇಕು. ಇಲಾಖೆಯ ಅಧಿಕಾರಿಗಳಿಗೂ ಕೂಡ ನಾನು ಈ ಬಗ್ಗೆ ಹೇಳಿದ್ದೇನೆ ಇದಕ್ಕೆ ೨೧,[illegible]೦ ಸಾವಿರ ರೂಪಾಯಿಗಳು ಖರ್ಚಾಗಬಹುದು. ಇದನ್ನು ಮಾಡಿಕೊಟ್ಟು ರೈತರಿಗೆ ನೀರಿನ ವ್ಯವಸ್ಥೆಯನ್ನು ಮಾಡಿಕೊಡಬೇಕು ಎಂದು ಹೇಳಿ, ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಂ. ಸಜ್ಜನ್ (ಮುದ್ದೇಬಿಹಾಳ್).—ಮಾನ್ಯ ಉಪಾಧ್ಯಕ್ಷರೆ ಈ ದಿವಸ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀಮಾನ್ ದೇವರಾಜ ಅರಸ್ ಅವರು ಈ ಸಭೆಯ ಮುಂದೆ ಮಂಡಿಸಿರುವ ಬೇಡಿಕೆಗಳನ್ನು ಸಮರ್ಥಿಸಿ ಅವುಗಳಿಗೆ ನನ್ನ ಬೆಂಬಲವನ್ನು ನೀಡುತ್ತಾ ನಾಲ್ಕು ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ. ನನಗೆ ತಿಳಿದ ಹಾಗೆ ಈ ಬೃಹತ್ ನೀರಾವರಿ ಯೋಜನೆಯ ಕಾರ್ಯಕ್ರಮವನ್ನು ನಿರೂಪಿಸುವುದು ತಪ್ಪಾಗುತ್ತದೆಯೋ ಏನೋ ಎಂದು ಈ ಸದನದ ಎಲ್ಲ ಮಾನ್ಯ ಸದಸ್ಯರು ಆಲೋಚನೆ ಮಾಡತಕ್ಕ ಪ್ರಸಂಗ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ರೀತಿ ಇವುಗಳಲ್ಲಿ ತಪ್ಪುಗಳಾಗಿ ನಮ್ಮ ರಾಜ್ಯದ ನೀರಾವರಿ ಕೆಲಸಕಾರ್ಯಗಳು ಸುಗಮವಾಗಿ ಸಾಗುತ್ತಿಲ್ಲ, ತೀವ್ರವಾದ ಗತಿಯಲ್ಲಿ ನಡೆದಿಲ್ಲ ಎಂದು ಹೇಳಬೇಕಾಗಿದೆ. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಎನಿವೆ ಇದು ೫೫೭ ಕೋಟಿ ರೂಪಾಯಿಗಳ ಯೋಜನೆ. ಈ ಕೆಲಸಕ್ಕೆ ತಕ್ಕಷ್ಟು, ಬೇಕಾದಷ್ಟು ದುಡ್ಡಿನ ವ್ಯವಸ್ಥೆಯನ್ನು ಮಾಡದೆ ಇರುವುದರಿಂದ ಈ ಯೋಜನೆಯ ಕೆಲಸ ಯಾವರೀತಿ ನಡೆಯಬೇಕಾಗಿತ್ತೋ ಆ ರೀತಿಯಲ್ಲಿ ನಡೆದಿಲ್ಲ ಎಂದು ವಿಷಾದ ಪಡಬೇಕಾಗಿದೆ. ಕೇವಲ ಸಣ್ಣ ಕೆಲಸ ಯಾವರೀತಿ ನಡೆಯುತ್ತಿದೆ ಅದೇರೀತಿ ಈ ಕೃಷ್ಣಾಮೇಲ್ದಂಡೆಯ ಯೋಜನೆ ಕೆಲಸ ನಡೆದಿದೆ. ಕೆಲವು ದಿವಸಗಳ ಹಿಂದೆ ಈ ಪ್ರಾಜೆಕ್ಟಿನಲ್ಲಿ ಕೆಲಸ ಮಾಡತಕ್ಕ ಕೆಲಸಗಾರರಿಗೆ ಸಂಬಳ ಕೊಡುವುದಕ್ಕೆ ಸಹ ದುಡ್ಡು ಇರಲಿಲ್ಲ ಎಂದು ನಾನು ಕೇಳಿದ್ದೇನೆ. ಅದಕ್ಕಾಗಿ ನನ್ನ ಸೂಚನೆ ಏನೆಂದರೆ ಸುಲಭ ಖರ್ಚಿನಲ್ಲಿ ತಕ್ಷಣ ಪ್ರತಿಫಲ ಕೊಡತಕ್ಕಂಥಾ ರೀತಿಯಲ್ಲಿ ದೊಡ್ಡ ದೊಡ್ಡ ಯೋಜನೆಗಳನ್ನು

ಕೈಗೊಳ್ಳುವುದಕ್ಕೆ ಪರಿಶೀಲನೆ ಮಾಡಿ ಅಂಥವುಗಳನ್ನು ಮೊದಲು ನೋಡಿ ಪ್ರತಿಫಲ ಪಡೆಯುವಂತೆ ಯೋಜನೆಯನ್ನು ಮಾಡಬೇಕು. ಇಂಥಾದ್ದಕ್ಕೆ ಒಂದು ತಜ್ಞರ ಸಮಿತಿಯನ್ನು ಮಾಡಿ ಅದನ್ನು ಕಾರ್ಯ ರೂಪಕ್ಕೆ ತರಬೇಕು. ಇದರಲ್ಲಿ ಯಾವುದೇ ರಾಜಕೀಯವನ್ನು ಮಾಡಬಾರದು. ನೀರಾವರಿಯಲ್ಲಿ ನಿಪುಣರು, ಪಂಡಿತರು, ತಜ್ಞರಾದಂತಹವರನ್ನು ಈ ನೀರಾವರಿ ಖಾತೆಗೆ ನೇಮಿಸಿ ಈ ನೀರಾವರಿ ಕೆಲಸ ಗಳನ್ನು ಮಾಡಿಸಬೇಕು ಎಂಬುದು ನನ್ನ ಅಭಿಪ್ರಾಯ. ಪಿ. ಡಬ್ಲ್ಯೂನಲ್ಲಿ ಸಿ.ಬಿ. ಮತ್ತು ಪಿ.ಎಚ್. ಇ. ನಲ್ಲಿ ಕೆಲಸ ಮಾಡತಕ್ಕವನ್ನು ಇರಿಗೇಷನ್ ಕೆಲಸಕಾರ್ಯಗಳಿಗೆ ಹಾಕಿದರೆ ಅವರು ಇರಿಗೇಷನ್ನಿಗೆ ಸಂಬಂಧಪಟ್ಟ ಕೆಲಸ ಮತ್ತು ಪ್ಲಾನಿಂಗ್ ಪ್ರೋಗ್ರಾಮ್‌ಗಳನ್ನು ತಿಳಿದುಕೊಳ್ಳು ವುದಲ್ಲಿ ಬೇರೆ ಕಡೆಗೆ ಅವರನ್ನು ವರ್ಗ ಮಾಡುತ್ತಾರೆ. ಅದಕ್ಕಾಗಿ ನೀರಾವರಿ ಕೆಲಸ ಮಾತಕ್ಕ ಇಂಜಿನಿಯ ರಿಂಗ್ ಖಾತೆಯನ್ನು ಬೇರೆ ಖಾತೆಯನ್ನು ಮಾಡಿ ಅದರಲ್ಲಿ ಅವರು ಕೆಲಸ ಮಾಡತಕ್ಕ ಪ್ರಯತ್ನ ಮಾಡಿದರೆ ಅವರಿಗೆ ಅದರಲ್ಲಿ ಹೆಚ್ಚಿನ ಅನುಭವ ಬರುತ್ತದೆ. ನೀರಾವರಿ ಕೆಲಸಗಳೂ ಸುಗಮವಾಗಿ ತೀವ್ರವಾಗಿ ಆಗುತ್ತವೆ ಎಂದು ನನ್ನ ಅಭಿಪ್ರಾಯ.

5-00 P.M.

ಇನ್ನು ನಮ್ಮ ಸರ್ಕಾರದ ಬಡ್ಜೆಟ್ಟಿನಲ್ಲಿ ಇರತಕ್ಕ ಹಣದಲ್ಲಿ ಅರ್ಧಹಣವನ್ನು ನೀರಾವರಿ ಸೌಲಭ್ಯಗಳಿಗೆ ಖರ್ಚು ಮಾಡಬೇಕೆಂಬುದೇ ನನ್ನ ಆಶೆ ಬರಗಾಲದಲ್ಲಿ ಇದು ಬಹಳ ಮುಖ್ಯ. ಬಿಜಾಪುರ ಜಿಲ್ಲೆಯಲ್ಲಿ ನಾನು ಇರತಕ್ಕ ಕ್ಷೇತ್ರವಾದ ಮುದ್ದೇಬಿಹಾಳ ತಾಲ್ಲೂಕು ಯಾವಾಗಲೂ ಬರಗಾಲ ದವಡೆಗೆ ಸಿಕ್ಕ ಅಲ್ಲಿನ ಜನರು ಬಹಳ ಕಷ್ಟಪಡುತ್ತಾ ಇರುವುದರಿಂದ ಈ ವಿಚಾರದಲ್ಲಿ ತೀವ್ರ ಕ್ರಮವನ್ನು ಕೈಗೊಳ್ಳಬೇಕು. ಹೆಚ್ಚು ಹೆಚ್ಚಾಗಿ ನೀರಾವರಿ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಅಲ್ಲಿ ಯಾವ ರೀತಿ ಬೆಳವಣಿಗೆಯ ಕೆಲಸ ಕಾರ್ಯಗಳನ್ನು ಮಾಡಬೇಕೋ . ರೀತಿಯಾಗಿ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಅದರ ಬಗ್ಗೆ ಒಂದು ತಜ್ಞರ ಸಮಿತಿಯನ್ನು ಬರಗಾಲ ಪ್ರದೇಶಗಳಲ್ಲಿ ನೀರಾವರಿ ಕೆಲಸಕಾರ್ಯಗಳನ್ನು ತೆಗೆದುಕೊಳ್ಳು ವುದಕ್ಕೆ ಮಾಡಿದ್ದರೂ ಆ ಸಮಿತಿಯ ವರದಿಯನ್ನು ಕಾರ್ಯಾಚರಣೆ ಮಾಡಬೇಕೆಂದು ನನ್ನ ಸೂಚನೆ ಇದೆ. ನಮ್ಮ ರಾಜ್ಯಕ್ಕೆ ಸಲ್ಲತಕ್ಕ ಕೃಷ್ಣಾ ನೀರಿನ ಬಗ್ಗೆ ಈಗಾಗಲೆ ಠರಾವು ಬಂದಿದೆ ಆದ್ದರಿಂದ ಇನ್ನು ಮುಂದೆ ಅಲ್ಲಿ ನೀರು ಹೆಚ್ಚಾಗಿ ದೊರಕುವಂತೆ ನಮ್ಮ ಸರ್ಕಾರದವರು ಜವಾಬ್ದಾರಿ ವಹಿಸಬೇಕೆಂದು ನಾನು ಪ್ರಾರ್ಥಿಸುತ್ತೇನೆ. ಬಹು ಮುಖ್ಯವಾಗಿ ಬರಗಾಲ ಪ್ರದೇಶದೊಳಗೆ ಜನರಿಗೆ ಹೆಚ್ಚಿಗೆ ಆಹಾರ ವನ್ನು ಒದಗಿಸಬೇಕಾದರೆ ನೀರಾವರಿಗೆ ಆ ಭಾಗದಲ್ಲಿ ಹೆಚ್ಚು ಹಣವನ್ನು ಖರ್ಚುಮಾಡಿ ಶಾಶ್ವತವಾದ ಪರಿಹಾರವನ್ನು ಒದಗಿಸಬೇಕು. ವಿಶೇಷವಾಗಿ ಹಣವನ್ನು ನೀರಾವರಿಗೇ ಖರ್ಚು ಮಾಡಬೇಕೆಂದೂ ಮತ್ತು ಆ ಹಣವನ್ನು ಬಡ್ಜೆಟ್ಟಿನಲ್ಲಿ ಈ ಬಾಬಿಗೆ ಮೀಸಲಾಗಿಡ ಬೇಕೆಂದು ನಾನು ಸಲಹೆಮಾಡುತ್ತೇನೆ. ಇನ್ನು ಕೃಷ್ಣಾ ನದಿ ಯೋಜನೆಯ ಬಗ್ಗೆ ನನಗೆ ಕನಸಾಗಿದೆ. ಅದರ ಬಗ್ಗೆ ಸಾಕಷ್ಟು ಕೆಲಸಗಳು ಆಗಿಲ್ಲ ಕೆಲವು ವರ್ಷಗಳ ಹಿಂದೆ ಅಲ್ಲಿನ ಕೆಲಸಗಾರರಿಗೆ ಸಂಬಳ ಕೊಡುವುದಕ್ಕೆ ಹಣವಿಲ್ಲ, ಕಾಸು ಇಲ್ಲ ಈಗ ೫೫೦ ಕೋಟಿ ರೂಪಾಯಿಗಳಷ್ಟು ವರಮಾನ ಕೃಷ್ಣಾನದಿ ಯೋಜನೆಯಿಂದ ಬರುತ್ತದೆಂಬ ಬಗ್ಗೆ ನನಗೆ ಸಂಶಯವಿದೆ. ಅದರ ಬದಲಾಗಿ ಆಲಮಟ್ಟಿ ನೀರಾವರಿ ಯೋಜನೆಯನ್ನು ಕಾರ್ಯಗತಮಾಡಬೇಕೆಂದು ನಾನು ನಮ್ಮ ನೆಚ್ಚಿನ ನಾಯಕರಾದ ಮಾನ್ಯ ಮುಖ್ಯಮಂತ್ರಿಗಳಲ್ಲಿ ಹೇಳುತ್ತೇನೆ. ಇದು ೪ ೮೫ ಲಕ್ಷ ರೂಪಾಯಿಗಳ ಯೋಜನೆ ೫೯-೭೦ರಲ್ಲಿ ಅದರ ಕರಡನ್ನು ಮಾಡಿ ಅದರ ನಕಾಶೆಯನ್ನು ಸರ್ಕಾರಕ್ಕೆ ಕಳುಹಿಸಿದೆ ನಮ್ಮ ತಾಲ್ಲೂಕಿನ ನೀರಾವರಿ ಯೋಜನೆಗಳ ಪೈಕಿ ಬಸವನ ಬಾಗೇವಾಡಿ ನೀರಾವರಿ ಯೋಜನೆ ಆಗುತ್ತದೆ. ೪.೮೫ ಲಕ್ಷ ರೂಪಾಯಿ ಗಳನ್ನು ಖರ್ಚುಮಾಡಿದರೆ ಎರಡು ವರ್ಷಗಳಲ್ಲಿ ೫೦ ಸಾವಿರ ಎಕರೆ ನೀರಾವರಿಯಾಗುತ್ತದೆ. ಅದರಿಂದ ಈ ಎರಡು ತಾಲ್ಲೂಕುಗಳಿಗೆ ಅನುಕೂಲವಾಗುವ ಪ್ರಸಂಗ ಆಗುತ್ತದೆ. ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಆಶೀರ್ವದಿಸಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ನನಗೆ ತಿಳಿದಂತೆ ಇದು ಕೆಲವರು ಯು.ಕೆ.ಪಿ. ಭಾಗದಲ್ಲಿ, ಇದಕ್ಕೆ ಸಿ. ಡಬ್ಲ್ಯೂ. ಡಿ. ಕ್ಲಿಯರೆನ್ಸ್ ಬೇಕೆಂದು ಹೇಳುತ್ತಿದ್ದರು ಎಂಬುದಾಗಿ ನಾನು ಧೃಢಪಡಿಸುತ್ತೇನೆ ಈ ಆಲಮಟ್ಟಿ ಯೋಜನೆ ಏನಿದೆಯೋ ಇದು ಯು. ಕೆ. ಪಿ. ಪ್ರಾಜೆಕ್ಟಿನ ಭಾಗವಲ್ಲ. ಇದು ಇಂಡಿಪೆಂಡೆಂಟ್ ಪ್ರಾಜೆಕ್ಟ್. ಇನ್ನೂ ಇತರ ನೀರಾವರಿ ಯೋಜನೆಗಳು ಅಲ್ಲಿ ಪ್ರಾರಂಭವಾಗಬೇಕಾಗಿತ್ತು. ಇದರಿಂದ ದುಡ್ಡು ಅಷ್ಟು ಹೆಚ್ಚಿಗೆ ಖರ್ಚಾಗುವುದಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಯೋಜನೆಯನ್ನು ಕೈಗೆ ಎತ್ತಿಕೊಳ್ಳಬೇಕೆಂದು ನಾನು ಹೇಳುತ್ತೇನೆ ನಮ್ಮ ತಾಲ್ಲೂಕಿನಲ್ಲಿ ಬಸವನ ಬಾಗೇವಾಡಿ ತಾಲ್ಲೂಕಿನ ನೀರಾವರಿ ಯೋಜನೆ ಬರಗಾಲ ಪ್ರದೇಶಕ್ಕೆ ಕ ಮಧೇನು ಆಗುತ್ತದೆ. ಇಂತಹ ಯೋಜನೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ಕೈಗೊಂಡರೆ ಅಲ್ಲಿಯ ಜನರು ಈ ಸರ್ಕಾರವನ್ನು ಎಷ್ಟು ಕೊಂಡಾಡಿದರೂ ಸಹ ಕಡಿಮೆಯಾಗುತ್ತದೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ

(ಶ್ರೀ ಎಂ. ಎಂ. ಸಜ್ಜನ್)

ಹೇಳುತ್ತೇನೆ. ಈಗ ಡಿಮ್ಯಾಂಡ್ ನಂಬರ್ ೫೪ರಲ್ಲಿ ಒದಗಿಸಿರುವ ಹಣದಲ್ಲಿ ಆಲಮಟ್ಟಿ ಅಪ್ಪರ್ ಇರ್ರಿಗೇಷನ್ನಿಗೆ ಪೂರ್ತಿಯಾಗಿ ಹಣವನ್ನು ಒದಗಿಸಿಕೊಡಬೇಕೆಂದು ನಾನು ಮಾನ್ಯ ಮುಖ್ಯ ಮಂತ್ರಿಗಳನ್ನು ಪ್ರಾರ್ಥಿಸುತ್ತೇನೆ.

ಕೊನೆಯದಾಗಿ, ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಎನ್. ಎಸ್. ಗುರುಸಿದ್ದಪ್ಪ (ಬಿಳಿಗೆರೆ) :—ಮಾನ್ಯ ಸಭಾಧ್ಯಕ್ಷರವರೇ, ನಾನು ಈ ಬೇಡಿಕೆಗಳನ್ನು ಸರ್ಕಾರ ಕೇಳಿರುವುದನ್ನು ನೋಡಿದಾಗ, ನನಗೇನು ಅನ್ನಿಸುತ್ತದೆಂದರೆ ನಮ್ಮ ರಾಜ್ಯದಲ್ಲಿ ಜನತೆಗೆ ಪ್ರಯೋಜನಕಾರಿಯಾಗುವಂತೆ ಹಲವಾರು ಪ್ರಾಜೆಕ್ಟ್‌ಗಳನ್ನು ಆದಷ್ಟು ಜಾಗ್ರತೆಯಾಗಿ ಮುಗಿಸ ಬೇಕೆಂದು ಈ ಸರ್ಕಾರದಲ್ಲಿ ಕಾಣುತ್ತಾ ಇಲ್ಲ. ಬಜೆಟ್ಟಿನಲ್ಲಿ ಕೊಟ್ಟಿರುವ ಹಣ ಸರಿಯಾಗಿ ಉಪಯೊಗ ಆಗುತ್ತಾ ಇಲ್ಲ. ಆಡಳಿತದಲ್ಲಿ ಸ್ವಚ್ಛತೆ ಇಲ್ಲದೇ ಇದ್ದುದೇ ಇದಕ್ಕೆ ಕಾರಣ. ಕೊಟ್ಟ ಹಣವು ಸಹ ಅನೇಕ ಸಂದರ್ಭದಲ್ಲಿ ದುರುಪಯೋಗವಾಗುತ್ತಿದೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಮೊಟ್ಟಮೊದಲನೆಯದಾಗಿ ಇಂಜನಿಯರುಗಳಲ್ಲಿ ರಾಷ್ಟ್ರೀಯತೆಯನ್ನು ಕಲಿಸಬೇಕು. ಜನಸಾಮಾನ್ಯರು ಜೊತೆಯಲ್ಲಿ ಯಾವರೀತಿಯಲ್ಲಿ ಬೆರೆಯಬೇಕು, ಅವರನ್ನು ಯಾವ ರೀತಿಯಲ್ಲಿ ಅವರು ಭೇಟಿ ಮಾಡಬೇಕು ಎಂಬುದನ್ನು ಕಲಿಸಬೇಕು. ಕೇವಲ ಹಣವೇ ಮುಖ್ಯವಲ್ಲವೆಂದು ಅವರು ತಿಳಿಯಬೇಕೆಂದು ನನ್ನ ಅಭಿಪ್ರಾಯ ಇದರಲ್ಲಿ ಮುಖ್ಯವಾಗಿ ಏನಾಗಿದೆಯೆಂದರೆ, ಅವರು ಜನಸಾಮಾನ್ಯರನ್ನು ವಿಚಾರಿಸುವುದೇ ಇಲ್ಲ. ಆ ಇಂಜನಿಯರುಗಳ ವೈಭವ, ಅವರ ಮಾತುಕತೆಗಳು ಬಹಳ ಅಸಾಧ್ಯವಾಗಿವೆ, ಅವರಿಗೆ ಹಣವೇ ಜೀವನದಲ್ಲಿ ಮುಖ್ಯವೆಂದು ತಿಳಿದಿದ್ದರೆ ಅದು ಶುದ್ಧ ತಪ್ಪು. ನಾವು ನಿಜವಾಗಿ ಸರ್ಕಾರ ಕೈಗೊಂಡಿರತಕ್ಕ ಪ್ರಾಜೆಕ್ಟ್‌ಗಳನ್ನು ಕಟ್ಟುತ್ತೇವೆಯೋ ಎಂಬ ಬಗ್ಗೆ ಯೋಚನೆಮಾಡಿ ಗ್ರಾಮಾಂತರ ಪ್ರದೇಶಗಳಲ್ಲಿ ಹಾಕಿಕೊಂಡಿ ರತಕ್ಕ ಪ್ರಾಜೆಕ್ಟ್‌ಗಳನ್ನೆಲ್ಲಾ ಕಟ್ಟಿ ಮುಗಿಸಿದರೆ ಮಾತ್ರ ಅನೇಕ ಹಳ್ಳಿಗಳು ಉದ್ಧಾರವಾಗುತ್ತವೆ. ಆದ್ದರಿಂದ ಜನಸಾಮಾನ್ಯರಿಗೂ ಹೆಚ್ಚಿನ ಅನುಕೂಲವಾಗುತ್ತದೆ. ಈಗ ಯಾವ ಬಿಲ್ಡಿಂಗ್ ಕಟ್ಟಲಿ ಯಾವ ಸೇತುವೆ ಕಟ್ಟಲಿ, ಅವು ಕೆಲವು ವರ್ಷಗಳಾದಮೇಲೆ ನಮ್ಮ ತಲೆಯಮೇಲೆಯೇ ಬೀಳುತ್ತವೆ ಆದ್ದರಿಂದ ಇಂಜನಿಯರ್ಸ್‌ಗೆ ಹಣವೇ ಮುಖ್ಯವಲ್ಲ. ಅವರು ಪ್ರಾಜೆಕ್ಟ್‌ಗಳನ್ನು ಕಟ್ಟುವಾಗ ಅದರಿಂದ ಜನರಿಗೆ ಅನೇಕ ವರ್ಷಗಳ ಕಾಲ ಪ್ರಯೋಜನವಾಗುತ್ತದೆಯೋ ಎಂಬುದನ್ನು ನೋಡಿ ಅವುಗಳನ್ನು ಪೂರ್ತಿ ಮಾಡಬೇಕು. ಅವರಲ್ಲಿ ಹೆಚ್ಚಿನಮಟ್ಟಿಗೆ ರಾಷ್ಟ್ರೀಯತೆ ಇರಬೇಕು. ಸತ್ಯವಾಗಿ ನಡೆಯಬೇಕೆಂಬ ಮನೋ ಭಾವ ಮಾಡಬೇಕು. ಇದನ್ನು ಅವರು ಮೊದಲು ಕಲಿಯಬೇಕೆಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಇನ್ನು ನನ್ನ ತಾಲೂಕಿನ ವಿಷಯವಾಗಿ ಹೇಳುವುದಾದರೆ, ಹಿರೆ ಹಳ್ಳಿ ಪಿಕಪ್ಪನ್ನು ಮಹಾರಾಜರ ಕಾಲದಲ್ಲಿ ಕಟ್ಟಿಸಿದರು. ಅದು ೧೪ ಸಾವಿರದ ವೆಟ್ ಲ್ಯಾಂಡ್ಸ್‌ಗೆ ನೀರಾವರಿಯಾಗುತ್ತಿತ್ತು. ಒಳ್ಳೆಯ ಬತ್ತದ ಬೆಳೆ ಬರುತ್ತಿತ್ತು. ಜೂನ್ ೧೦ಕ್ಕೆ ನೀರು ಬಿಟ್ಟು ಜನವರಿ ೧೦ಕ್ಕೆ ನಿಲ್ಲಿಸುತ್ತಿದ್ದರು. ಈಗ ಪ್ರಜಾ ಸರ್ಕಾರ ಬಂದಮೇಲೆ ಅಲ್ಲಿನ ಇಂಜನಿಯರುಗಳು ಅದರ ಬಗ್ಗೆ ಏನೂ ನೋಡುವುದಿಲ್ಲ. ಈಗ ಆಗಸ್ಟ್ ಒಂದನೆ ತಾರೀಖಿನವರೆಗೆ ನೀರು ಬಿಡುವುದಿಲ್ಲ ಸಾಮಾನ್ಯವಾಗಿ ಜನವರಿ ೧೦ಕ್ಕೆ ನೀರು ನಿಲ್ಲಿಸುತ್ತಿದ್ದರು. ಅದು ವಾಡಿಕೆ. ಈ ಸಾರಿ ಡಿಸೆಂಬರ್ ೧೦ಕ್ಕೆ ನಿಲ್ಲಿಸಿದರು. ಇದರಿಂದ ಅನೇಕ ಕಾಲುವೆ ನೀರೇ ಇಲ್ಲ. ನಮ್ಮಲ್ಲಿ ಏನಾ ಗಿದೆ ಎಂದರೆ ಜನವರಿ ೧೦ಕ್ಕೆ ನೀರನ್ನು ನಿಲ್ಲಿಸುತ್ತಿದ್ದರು. ಜನರು ಸಾಮಾನ್ಯವಾಗಿ ಅಷ್ಟು ಹೊತ್ತಿಗೆ ಆ ನೀರನ್ನು ಗದ್ದೆಗಳಿಗೆ ಹಾಯಿಸಿ ಕಡಲೆಕಾಯಿ, ಜೋಳ ಬಿತ್ತುತ್ತಿದ್ದರು. ಮುಂದೆ ಒಂದು ತಿಂಗಳಲ್ಲಿ ಮಳೆಯ ನೀರನ್ನು ಆಶ್ರಯಿಸಿ ಬೆಳೆಯನ್ನು ಪಡೆಯುತ್ತಿದ್ದರು. ಈ ಸಾರಿ ಏನಾಗಿದೆಯೆಂದರೆ ಡಿಸೆಂಬರ್ ೧೦ಕ್ಕೆ ನೀರು ನಿಂತಿತು. ಅನೇಕ ರೈತರು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಬಿತ್ತನೆ ಬೀಜಗಳನ್ನು ತಂದು ಜನಸಾಮಾನ್ಯರು ನೀರು ಬರುತ್ತದೆಂದು ಕಾದಿದ್ದರು. ಆದರೂ ಕೂಡ ಅಲ್ಲಿರತಕ್ಕ ಇಂಜನಿಯರ್ಸ್ ನಾವು ಎಷ್ಟು ಸಾರಿ ಹೇಳಿದರೂ ಅವರು ತಮ್ಮ ಕಿವಿಗೆ ಹಾಕಿ ಕೊಳ್ಳುತ್ತಾ ಇರಲಿಲ್ಲ. ಹೊಳೆಯಲ್ಲಿ ನೀರು ಇಲ್ಲ, ಏನು ಮಾಡುವುದು ಎಂಬುದಾಗಿ ಆ ಒಂದು ಪಾಯಿಂಟನ್ನು ಹೇಳುತಿದ್ದರು. ಸುಮಾರು [illegible]೦ ವರ್ಷಗಳಿಂದ ಮಾಡಿದ ಪಿಕಪ್‌ಗಳಲ್ಲಿ ಇದ್ದಂಥ ನೀರು ಈ ವರ್ಷ ಮಾಯವಾಯಿತೇ ನಾನು ಹೇಳುವುದಿಷ್ಟೇ. ಅವರಲ್ಲಿ ಸಾಕಷ್ಟು ದಕ್ಷತೆ ಇಲ್ಲದೇ ಇದ್ದುದರಿಂದಲೇ ಅವುಗಳಿಂದ ಹೆಚ್ಚಿಗೆ ನೀರನ್ನು ಕೊಡುವುದಕ್ಕಾಗುವುದಿಲ್ಲ. ನೀರನ್ನು ಮುಂದೆ ಒದಗಿಸುತ್ತೇವೆಂದು ಹೇಳುತ್ತಾರೆ. ಸುಮಾರು ಒಂದುಸಾವಿರ ಎಕರೆಯಲ್ಲಿ ಈ ವರ್ಷ ಬೆಳೆ ಇಲ್ಲ. ಈ ವಿಚಾರವನ್ನು ನಾನು ಮಾನ್ಯ ಮುಖ್ಯ ಮಂತ್ರಿ ಗಳಿಗೆ ಹೇಳಿದೆ. ಅವರು ಹೇಳಿದರು, ನೀರನ್ನು ನಿಲ್ಲಿಸಬೇಡಿ, ಮಾಮೂಲಾಗಿ ಅವರಿಗೆ ನೀರನ್ನು ಕೊಡಿ

ಎಂದು. ಆದರೂ ಕೂಡ ಅವರು ಡಿಸೆಂಬರ್ ೧೦ಕ್ಕೆ ನೀರು ನಿಲ್ಲಿಸಿದರು. ಮಾನ್ಯ ಮುಖ್ಯ ಮಂತ್ರಿಗಳನ್ನು ಕೂಡ ಅವರು ಮರುಳುಮಾಡಿ ಇದ್ದರೆ ಜಾತ್ರೆಗೆ ನೀರನ್ನು ಹೇಗೆ ಕೊಟ್ಟರು ? ನೀರಿಲ್ಲ, ಏನು ಮಾಡುವುದು ಎಂಬುದಾಗಿ ಹೇಳಿದರು. ಆದರೆ ಸುತ್ತೂರು ಜಾತ್ರೆಯಲ್ಲಿ ಮಾತ್ರ ನೀರು ಕೊಟ್ಟಿದ್ದಾರೆ ನೀರು ಇಲ್ಲದೆ ಅನೇಕರಿಗೆ ಬಹಳ ತೊಂದರೆಯಾಗಿದೆ, ಸಾವಿರಾರು ಎಕರೆಯಲ್ಲಿ ಬೆಳೆಯಾಗುವುದು ಹೋಯಿತು. ಇದರಿಂದ ಲಕ್ಷಾಂತರ ರೂಪಾಯಿಗಳಷ್ಟು ಉತ್ಪನ್ನವಾಗುತ್ತಿತ್ತು. ಅದೆಲ್ಲವೂ ಹೋಯಿತು. ಇದಕ್ಕೆ ಯಾರು ಜವಾಬ್ದಾರರೋ ಆ ಅಧಿಕಾರಿ ಮೇಲೆ ಸೂಕ್ತ ಕ್ರಮವನ್ನು ತೆಗದುಕೊಳ್ಳದಿದ್ದರೆ ಸರ್ಕಾರ ಅಪಹಾಸ್ಯಕ್ಕೆ ಗುರಿಯಾಗಬೇಕಾಗುತ್ತದೇ.

ಇನ್ನು ಕಬಿನಿ ಪ್ರಾಜೆಕ್ಟ್ ವಿಷಯ. ಈ ಪ್ರಾಜೆಕ್ಟ್ ಹತ್ತಾರು ವರ್ಷಗಳಾದರೂ ಕೂಡ ಇನ್ನೂ ಕುಂಟುತ್ತಲೇ ಇದೆ. ಅಲ್ಲಿ ಬಹಳವಾಗಿ ಅಕ್ರಮವಾಗಿ ಕೆಲಸಕಾರ್ಯಗಳು ನಡೆಯುತ್ತಿವೆ. ಆದ್ದರಿಂದ ಸರ್ಕಾರದವರು ಈಗಲಾದರೂ ಅದಕ್ಕಾಗಿ ಒಂದು ಎನ್‌ಕ್ವೈರಿ ಕಮಿಟಿಯನ್ನು ರಚನೆಮಾಡಿ ಅಲ್ಲಿ ನಡೆಯುತಕ್ಕ ಅಕ್ರಮಗಳಿಗೆ ಜವಾಬ್ದಾರಿಯಾಗಿರುವವರ ಮೇಲೆ ಶಿಕ್ಷಿಸಿ ಈ ಪ್ರಾಜೆಕ್ಟನ್ನು ಬೇಗ ಮುಗಿಸಬೇಕು. ಇದರಿಂದ ೭½ಲಕ್ಷ ಎಕರೆ ನೀರಾವರಿಯಾಗುತ್ತದೆ. ಇಲ್ಲದಿದ್ದರೆ ಈರೀತಿ ನಿಧಾನಮಾಡಿದರೆ ನಿಜವಾಗಿ ಈ ಕಬಿನಿ ಪ್ರಾಜೆಕ್ಟ್ ಕೆಲಸಕಾರ್ಯಗಳು ಮುಗಿಯುವುದೇ ಇಲ್ಲವೆಂಬುದಾಗಿ ನಾನು ತಿಳಿದುಕೊಂಡಿದ್ದೇನೆ.

ಇನ್ನು ಮೈಸೂರು ಜಿಲ್ಲೆಯಲ್ಲಿ ಅನೇಕ ಪ್ರಾಜೆಕ್ಟ್‌ಗಳು ಇನ್ನೂ ಆಗಬೇಕಾಗಿವೆ. ಕೊಳ್ಳೇಗಾಲದಲ್ಲಿ ಈಗಾಗಲೇ ಒಂದು ಪ್ರಾಜೆಕ್ಟ್ ಆಗುತ್ತಿದೆ. ಒಟ್ಟಿನಲ್ಲಿ ಮೈಸೂರು ಜಿಲ್ಲೆಯಲ್ಲಿ ನೀವು ಎಷ್ಟರಷ್ಟು ನೀರಾವರಿ ಕೆಲಸಕಾರ್ಯಗಳನ್ನು ಕೈಗೊಳ್ಳುವುದರಿಂದ, ಅಲ್ಲಿನ ಆಹಾರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಅನುಕೂಲವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ.

ಪ್ರದೇಶದ ಅಭಿವೃದ್ಧಿಯ ವಿಚಾರವನ್ನು ತೆಗೆದುಕೊಂಡರೆ ನಮ್ಮಲ್ಲಿ ಖುಷ್ಕಿ ಜಮೀನು ಜಾಸ್ತಿ ಇದೆ. ಖುಷ್ಕಿಜಮೀನು ಬಂಜರಾಗಿರುವುದಕ್ಕೆ ಕಾರಣವೇನು ಎನ್ನುವುದನ್ನು ತಿಳಿದುಕೊಳ್ಳಬೇಕು. ಇಷ್ಟು ವರ್ಷಗಳಾದರೂ ಕೂಡ ಭೂಮಿಯಲ್ಲಿ ಎಲ್ಲಿ ನೀರು ಸಿಕ್ಕುತ್ತದೆ, ಎಲ್ಲಿ ಬಾವಿಯನ್ನು ತೆಗೆಯಬೇಕು, ನೀರಾವರಿ ಮಾಡುವುದಕ್ಕೆ ಯಾವರೀತಿ ಸಹಾಯ ಮಾಡಬೇಕು ಏನು ವುದಿಲ್ಲ. ರೈತನಾದವನು ಸಾಲ ತೆಗೆದುಕೊಂಡು ಬಾವಿ ತೆಗೆಸಿ ನೀರಿಲ್ಲದೆ ಒದ್ದಾಡುತಿದ್ದಾನೆ. ಪ್ರದೇಶದ ಅಭಿವೃದ್ಧಿಗೆ ಪ್ರಧಾನ್ಯತೆಯನ್ನು ಕೊಟ್ಟರೆ ಅನೇಕ ಜನ ಬಡವರು ಉಳಿದುಕೊಳ್ಳುತ್ತಾರೆ.

ವಿದ್ಯುಚ್ಛಕ್ತಿ ಅಭಿವೃದ್ಧಿಯ ವಿಚಾರವನ್ನು ತೆಗೆದುಕೊಂಡರೆ ಅದಕ್ಕೆ ದೇವರೇ ಗತಿ. ರೈತ ಪಂಪ್‌ಸೆಟ್ ಹಾಕಿಕೊಳ್ಳಬೇಕು ಎಂದು ಎಲೆಕ್ಟ್ರಿಸಿಟಿ ಬೋರ್ಡಿಗೆ ಅರ್ಜಿಯನ್ನು ಹಾಕಿಕೊಂಡು ಹೊಳೆ ದಂಡೆಯಲ್ಲಿ ಬೇಸಿಗೆಯನ್ನು ತೆಗೆಯುತ್ತೇವೆ ವಿದ್ಯುಚ್ಛಕ್ತಿಯನ್ನು ಕೊಡಿ ಎಂದು ಕೇಳಿದರೆ ಖುಷ್ಕಿ ಜಮೀನಿಗೆ ಮೊದಲು ಕೊಡುತ್ತೇವೆ ಅನಂತರ ಹೊಳೆ ಪಕ್ಕದಲ್ಲಿರುವವರಿಗೆ ಕೊಡುತ್ತೇವೆಂದು ಹೇಳುತ್ತಾರೆ. ಹೊಳೆಯಲ್ಲಿ ಪ್ರವಾಹ ಬಂದರೆ ಬೆಳೆ ನಷ್ಟವಾಗುವ ಪರಿಸ್ಥಿತಿ ಇದೆ, ಆದ್ದರಿಂದ ಲಕ್ಷಾಂತರ ರೂಪಾಯಿ ನಷ್ಟವಾಗುತ್ತದೆ ಎಂದು ಹೇಳಿದರೂ ಸಹ ಖುಷ್ಕಿ ಜಮೀನಿಗೆ ಆದ್ಯತೆಯನ್ನು ಕೊಡಬೇಕಾಗಿದೆ, ಅಲ್ಲಿಗೆ ಕೊಟ್ಟ ನಂತರ ನಿಮಗೆ ಕೊಡುತ್ತೇವೆ ಎಂದು ಹೇಳುತ್ತಾರೆ. ಕಬಿನಿ ನದಿಯ ಎರಡೂ ಪಕ್ಕಗಳಲ್ಲಿ ಪಂಪ್‌ಸೆಟ್‌ಗಳನ್ನು ಹಾಕಿಕೊಂಡು ನೀರಾವರಿ ವ್ಯವಸಾಯ ಮಾಡುವುದಕ್ಕೆ ಮತ್ತು ಅದರಿಂದ ಆಹಾರದ ಸಮಸ್ಯೆಯನ್ನು ಬಗೆಹರಿಸಲು ಅವಕಾಶವಿದೆ. ಆದ್ದರಿಂದ ಇವರಿಗೆ ವಿದ್ಯುಚ್ಛಕ್ತಿಯನ್ನು ಕೊಡುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಡ್ರೇನೇಜ್ ಕಾಲದಲ್ಲಿ ನಿಸರ್ಗ ಬಹಳ ಮುಖ್ಯವಾದುದು. ಮಳೆ ಹೆಚ್ಚಾಗಿ ಬಂದ ಕಾಲದಲ್ಲಿ ಜಮೀನುಗಳಲ್ಲಿ ನೀರು ನಿಂತು ಪೈರುಕೊಳೆತು ಹೋಗುವ ಪರಿಸ್ಥಿತಿ ಉಂಟು. ಅಂಥ ಕಾಲದಲ್ಲಿ ಡ್ರೈನೇಜ್ ಮಾಡುವುದಕ್ಕೆ ಸಾಕಾದಷ್ಟು ಸಹಾಯವನ್ನು ಸರ್ಕಾರ ಮಾಡಿದರೆ ಅನುಕೂಲವಾಗುತ್ತದೆ ಎಂದು ತಿಳಿದುಕೊಂಡಿದ್ದೇನೆ.

ಮೈಸೂರು ಜಿಲ್ಲೆಯಲ್ಲಿ ಆಗಬೇಕಾಗಿರುವ ಎಲ್ಲ ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡು ಜಾಗ್ರತೆಯಾಗಿ ಪೂರೈಸಿ ಆಹಾರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಪಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಜಿ. ಬಣಕಾರ (ಹಿರೇಕೆರೂರ) : ಸನ್ಮಾನ್ಯ ಅಧ್ಯಕ್ಷಿಣಿಯವರೇ, ಈ ದಿವಸ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ಮಂಡಿಸಿರುವಂಥ ಬೇಡಿಕೆಗಳನ್ನು ಸಮರ್ಥಿಸಿ ಬೆಂಬಲಿಸುತ್ತ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ನಮ್ಮ ರಾಜ್ಯದ ಅಭಿವೃದ್ಧಿ ಸರಿಯಾಗಿ ಆಗಬೇಕಾದರೆ ನೀರಾವರಿ ಯೋಜನೆಗಳ ಕಾರ್ಯಪ್ರಗತಿ ಅತವಶ್ಯ. ಈ ಹೊತ್ತಿನ ದಿವಸ ನಾವು ನೀರಾವರಿ, ಜಲಸಂಚಾರ, ಚರಂಡಿ ಹಾಗು ಪ್ರವಾಹ ನಿಯಂತ್ರಣದ ಬಗ್ಗೆ ೭೪, ೩೪, ೯೩, ೦೦೦ ರೂಪಾಯಿಗಳ ಬೇಡಿಕೆ ಮೂಲಕ ನಮ

(ಶ್ರೀ ಬಿ. ಜಿ. ಬಣಕಾರ)

ಬಜೆಟ್ಟಿನ ಸಿಂಹಪಾಲಿನ ಹಣವನ್ನು ಈ ಖಾತೆಗೆ ಕೊಡುತ್ತಿದ್ದೇವೆ. ಈ ಖಾತೆ ಸರಿಯಾಗಿ ಸಮರ್ಪಕವಾದ ರೀತಿಯಲ್ಲಿ ಕೆಲಸ ಮಾಡಿದ್ದೆ ಆದರೆ ನಾವು ಹಾಕಿಕೊಂಡಿರತಕ್ಕ ಯೋಜನೆಗಳು ಕಾರ್ಯರೂಪಕ್ಕೆ ಬಂದದ್ದೇ ಆದರೆ ನಿಜವಾಗಿ ನಮ್ಮ ರಾಜ್ಯ ಅಭಿವೃದ್ಧಿಯಾಗುತ್ತದೆನ್ನುವುದರಲ್ಲಿ ಸಂಶಯವಿಲ್ಲ. ಯಾವುದೇ ಯೋಜನೆಗಳು ಕಾರ್ಯಗತವಾಗಬೇಕಾದರೆ, ಅದರ ಪ್ರತಿಫಲ ಜನತೆಗೆ ಸಿಕ್ಕಬೇಕಾದರೆ ಅವು ಪ್ರಾಮಾಣಿಕ ರೀತಿಯಲ್ಲಿ ಕಾರ್ಯಗತವಾಗಬೇಕಾದ್ದು ಅತ್ಯವಶ್ಯ. ಈ ದಿಸೆಯಲ್ಲಿ ರಾಜ್ಯದಲ್ಲಿರುವ ಹೊಣೆಗಾರಿಕೆಯ ಅಧಿಕಾರಿಗಳ ಪಾತ್ರ ಬಹಳ ಹಿರಿದಾಗಿದೆ. ನಮ್ಮ ರಾಜ್ಯದಲ್ಲಿರುವ ನೀರಾವರಿ ಉದ್ಯಮಗಳಲ್ಲಿ ಕೆಲವೊಂದು ಲೋಪದೋಷಗಳು ಕಂಡುಬರುವುದಕ್ಕೆ ಅನೇಕ ರೀತಿಯಲ್ಲಿ ಅಧಿಕಾರಿಗಳು ಕಾರಣರಾಗಿದ್ದಾರೆ. ಇಂಥ ಅಧಿಕಾರಿಗಳ ಮೇಲೆ ನಾವು ಹಿಡಿತವನಿಟ್ಟುಕೊಳ್ಳಬೇಕು. ಅವರ ಮೇಲೆ ಉತ್ತಮವಾದ ಹಿಡಿತವನ್ನು ಇಟ್ಟರೆ ಮಾತ್ರ ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡುತ್ತಾರೆ ಮತ್ತು ಅವರ ಮೇಲೆ ಇರುವಂಥ ಹೊಣೆಯನ್ನು ಜವಾಬ್ದಾರಿ ರೀತಿಯಿಂದ ತೆಗೆದುಕೊಳ್ಳಲೇ ಬೇಕು. ಅಧಿಕಾರಿಗಳೂ ಸರಿಯಾಗಿ ಕೆಲಸ ಮಾಡದಿದ್ದರೆ ಅಂಥವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಲೇಬೇಕು. ಹಿಂದಿನ ಸರಕಾರ ಮತ್ತು ಮಂತ್ರಿಮಂಡಲ ಬುಡಮೇಲಾಗುವುದಕ್ಕೆ ಅನೇಕ ಅಧಿಕಾರಿಗಳು ಜವಾಬ್ದಾರರು. ಆ ಸರಕಾರವನ್ನು ಬುಡಮೇಲು ಮಾಡಿದಂಥ ಅಧಿಕಾರಿಗಳು ಈ ಹೊತ್ತಿನ ದಿವಸ ಕೂಡ ನಮ್ಮಲ್ಲಿದ್ದಾರೆ. ಅವರ ಬಗ್ಗೆ ನಾವು ಸರಿಯಾದ ನಿಗಾ ವಹಿಸದೆ ಹೋದರೆ ಬಹಳ ತಪ್ಪಾದೀತು ಎನ್ನುವುದನ್ನು ಯಾರೂ ಮರೆಯುವಂಥದಲ್ಲ. ಯಾವುದಾದರೂ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದರೆ ಅವರ ಮೇಲಿನ ಅಧಿಕಾರಿಗಳ ಕಡೆಗೆ ಎನ್‌ಕ್ವೈರಿ ಮಾಡಲಿಕ್ಕೆ ಹಾಕಿದರೆ ಕೆಳದರ್ಜೆ ಅಧಿಕಾರಿಗಳನ್ನು ಅವರು ಶೀಲ್ಡ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಅವರನ್ನು ಶಿಕ್ಷೆ ಮಾಡುವುದಕ್ಕೆ ಯಾವರೀತಿಯಿಂದಲೂ ರಿಪೋರ್ಟನ್ನು ಮಾಡುವುದಿಲ್ಲ. ತಪ್ಪು ಮಾಡುವ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲವೆಂದರೆ ಈಗ ಕೆಟ್ಟ ಹೆಸರು ನಮ್ಮ ಸರ್ಕಾರಕ್ಕೆ ಬರುತ್ತದೆ. ಇಂಥ ಪ್ರಸಂಗದಲ್ಲಿ ನಾವು ನಿರ್ದಾಕ್ಷಿಣ್ಯವಾಗಿ ಯಾವುದೇ ಅಧಿಕಾರಿ ಇರಲಿ ಯೋಜನೆಗಳನ್ನು ಕಾರ್ಯಗತ ಮಾಡುವಲ್ಲಿ ಸರಿಯಾಗಿ ಕೆಲಸ ಮಾಡದೆ ಇದ್ದರೆ ಅವರು ನಿರ್ದಾಕ್ಷಿಣ್ಯವಾಗಿ ದಂಡಿಸಲ್ಪಡಬೇಕು. ಹಾಗೆ ಮಾಡಿದರೆ ನಾವು ಹಾಕಿಕೊಂಡಂಥ ಕಾರ್ಯಕ್ರಮಗಳು ನಿಜವಾಗಿ ಕಾರ್ಯರೂಪದಲ್ಲಿ ಬರುತ್ತವೆ.

ಅನೇಕ ಯೋಜನೆಗಳು ಅನೇಕ ವರ್ಷಗಳಿಂದ ಸಂಪೂರ್ಣವಾಗದೇ ಉಳಿದಿವೆ. ಹೀಗೆ ಸಂಪೂರ್ಣವಾಗದೆ ಇರುವ ಯೋಜನೆಗಳೇನಿವೆ ಅವುಗಳನ್ನು ಆದಷ್ಟು ತೀವ್ರ ಮುಗಿಸಲೇಬೇಕು, ಅವುಗಳನ್ನು ಮುಗಿಸಿ ಆದಷ್ಟು ಉಪಯೋಗವನ್ನು ಅವುಗಳಿಂದ ತೆಗೆದುಕೊಳ್ಳಲೇ ಬೇಕು. ಅನೇಕ ನೀರಾವರಿ ಯೋಜನೆಗಳ ಮುಖಾಂತರ ನೀರನ್ನು ತೆಗೆದುಕೊಂಡಂಥ ರೈತರೇನಿದ್ದಾರೆ ಅವರು ಮಾಡುವಂಥ ಜಮೀನುಗಳೇನಿವೆ ಅವುಗಳ ಮೇಲೆ ಈ ಹೊತ್ತಿನವರೆಗೂ ನೀರಾವರಿ ಕರವನ್ನು ವಸೂಲ್ಮಾಡುತ್ತಿಲ್ಲ. ಇದು ನಮ್ಮ ಸರ್ಕಾರಕ್ಕೆ ಬರುವಂಥ ಉತ್ಪನ್ನ. ಈ ಉತ್ಪನ್ನ ಕುಂಠಿತವಾಗದಂತೆ ಎಲ್ಲೆಲ್ಲಿ ನೀರಾವರಿ ಯೋಜನೆಗಳಿಂದ ಜಮೀನುಗಳಿಗೆ ನೀರುಕೊಡುತ್ತಿದ್ದೇವೆ ಅಲ್ಲಿ ಕರ ವಸೂಲಿಯನ್ನು ಉತ್ತಮ ರೀತಿಯಿಂದ ನಿರ್ದಾಕ್ಷಿಣ್ಯವಾಗಿ ಮಾಡಲೇಬೇಕು. ಹಾಗೆ ಮಾಡಿದರೆ ಮಾತ್ರ ನಮ್ಮ ಉತ್ಪನ್ನದ ಬಾಬು ಹೆಚ್ಚಾಗುತ್ತದೆ.

ಕೃಷ್ಣಾ ಜಲವಿವಾದದಲ್ಲಿ ನಮಗೆ ಅನ್ಯಾಯವಾಗಿರುತ್ತದೆ. ನಮ್ಮ ರಾಜ್ಯದಲ್ಲಿ ಅನೇಕ ಯೋಜನೆಗಳನ್ನು ನಾವು ಕಾರ್ಯಗತ ಮಾಡುವುದು ಹಾಗೆಯೇ ಉಳಿದಿದೆ. ಉದಾಹರಣೆಗೆ ಕೃಷ್ಣಾ ಜಲವಿವಾದದ ಪಂಚಾಯಿತಿ ತೀರ್ಪಿನ ಪ್ರಕಾರ ಧಾರವಾಡ, ಶಿವಮೊಗ್ಗ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಕೈಕೊಳ್ಳಬೇಕಾಗಿದ್ದ ಯೋಜನೆಗಳು ಹಾಗೆಯೇ ಉಳಿದಿವೆ. ಗಾಗನೂರು ಯೋಜನೆಯನ್ನು ಕೈಬಿಡುವಂಥ ಪ್ರಸಂಗ ಬಂದಿದೆ. ನಮಗೆ ನೀರು ಕಡಿಮೆಯಾದುದರಿಂದ ಅನೇಕ ಯೋಜನೆಗಳನ್ನು ಹಾಕಿಕೊಳ್ಳುವುದು ದುಸ್ತರವಾಗಿದೆ. ಆದ್ದರಿಂದ ಕೃಷ್ಣಾ ವಿವಾದದ ತೀರ್ಪಿನ ಮೇಲೆ ಸುಪ್ರಿಂ ಕೋರ್ಟಿಗೆ ನಮ್ಮ ರಾಜ್ಯ ಸರ್ಕಾರ ಹೋಗಿ ಅಲ್ಲಿ ನಮಗೆ ನ್ಯಾಯ ಸಿಕ್ಕುವಂತೆ ಪ್ರಯತ್ನ ಮಾಡಲೇಬೇಕು ಎಂದು ಹೇಳುತ್ತೇನೆ. ಹಿಂದೆ ಜಲ ವಿವಾದ ನಡೆದಾಗ ನಮ್ಮ ರಾಜ್ಯದ ಪರವಾಗಿ ನಮ್ಮ ಲಾಯರುಗಳು ಸರಿಯಾಗಿ ಕೆಲಸ ಮಾಡಲಿಲ್ಲವೆನ್ನುವ ಅಪವಾದವಿದೆ. ಈಗಲಾದರೂ ಕೂಡ ಸುಪ್ರಿಂ ಕೋರ್ಟಿಗೆ ನ್ಯಾಯವನ್ನು ಒಯ್ಯುವಾಗ ಉತ್ತಮವಾದ, ಹೆಸರಾಂತ ಅಡ್ವೋಕೇಟರನ್ನು ಇಟ್ಟು ನಮ್ಮ ರಾಜ್ಯದ ಪರವಾಗಿ ನ್ಯಾಯ ದೊರಕುವಂತೆ ಸಮರ್ಥ ರೀತಿಯಲ್ಲಿ ನಮ್ಮ ರಾಜ್ಯ ಸರ್ಕಾರ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ.

ವಿದ್ಯುಚ್ಛಕ್ತಿ ನಮ್ಮ ರಾಜ್ಯಕ್ಕೆ ಉತ್ಪನ್ನವನ್ನು ತರುಕೊಡುವಂಥ ಒಂದು ಸಾಧನ. ವಿದ್ಯುಚ್ಛಕ್ತಿ ಮಂಡಲಿಯಲ್ಲಿನ ಕಾರ್ಯ ನೋಡಿದರೆ ಅದು ಕೂಡ ಅಸಮರ್ಪಕವಾಗಿದೆ. ಅನೇಕ ಕಡೆ ಕೈಗಾರಿಕ ಕಡೆ ಇರಲಿ, ರೈಸ್ ಮಿಲ್ಸ್ ಇರಲಿ ಅಥವಾ ಯಾವುದೇ ಬೇರೆ ಕೈಗಾರಿಕೆ ಇರಲಿ ಅಲ್ಲಿ ಕೆಲವು ಅಧಿಕಾರಿಗಳು ೫೦ ಎಚ್. ಪಿ. ಮೋಟಾರ್ ಕೆಲಸ ಮಾಡುತ್ತಿದ್ದರೂ ಕೂಡ 10 ಎಚ್. ಪಿ. ಇದೆ ಎಂದು ಲೆಕ್ಕ ಬರೆದಿರುತ್ತಾರೆ.

ಅನೇಕ ಕಡೆ ಮೋಟಾರುಗಳಿಗೆ ಮೀಟರನ್ನು ತಪ್ಪಿಸಿ ಡೈರೆಕ್ಟಾಗಿ ಕರೆಂಟನ್ನು ಕೊಟ್ಟು ರೈಸ್ ಮಿಲ್ಸ್, ಫ್ಯಾಕ್ಟರಿ ಮುಂತಾದುವನ್ನು ನಡೆಸುತಿದ್ದಾರೆ ಇಂಥ ವಿಚಾರಗಳ ಮೇಲೆ ಕಣ್ಣು ಇಡಬೇಕು. ಇದರಿಂದಾಗಿ ನಮ್ಮ ರಾಜ್ಯದಲ್ಲಿ ಎಲೆಕ್ಟ್ರಿಸಿಟಿ ಬೋರ್ಡಿನಿಂದ 25 ಪರ್ಸೆಂಟ್ ಉತ್ಪನ್ನ ಕಡಮೆಯಾಗುತ್ತಿದೆ. ಈ ಬೋರ್ಡಿನಲ್ಲಿರು ಅಧಿಕಾರಿಗಳ ಮೇಲೆ ಸಹ ಹತೋಟಿಯನ್ನು ಇಟ್ಟುಕೊಳ್ಳದೆ ಹೋದರೆ ಅದ್ದರಿಂದ ಒರುವಂಥ ಉತ್ಪನ್ನವೇನಿದೆ ಅದು ಕೂಡ ಕಡಿಮೆಯಾಗುತ್ತ ಹೋಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ,

ಈಹೊತ್ತು ಅನೇಕ ಕಡೆಗೆ ಎಲೆಕ್ಟ್ರಿಸಿಟಿ ಬೋರ್ಡಿನವರುಸರಿಯಾಗಿ ತಮ್ಮ ಕೆಲಸವನ್ನು ಮಾಡುತ್ತಿಲ್ಲ. ಈ ಬಗ್ಗೆ ಕೂಡ ಸರ್ಕಾರ ಅವರ ಮೇಲೆ ನಿಗಾ ಇಡಬೇಕೆಂದು ಹೇಳುತ್ತೇನೆ

ನೀರಾವರಿ ಯೋಜನೆಯಲ್ಲಿ ಭೂ ಪರಿಹಾರ ಕೊಡುವಲ್ಲಿ ಅಲ್ಲಲ್ಲಿ ಅಲಕ್ಷ್ಯವಾಗಿದೆ. ಅನೇಕರಿಗೆ ಭೂ ಪರಿಹಾರ ಸಿಕ್ಕಿಲ್ಲವೆನ್ನುವ ಕೂಗು ಸರ್ಕಾರದ ಕಡೆಗೂ ಬರುತ್ತಿದೆ ಅಧಿಕಾರಿಗಳ ಕಡೆಗೂ ಬರುತ್ತಿದೆ. ಆದರೂ ಬೇಗ ತೀರ್ಮಾನವಾಗುತ್ತಿಲ್ಲ. ಭೂ ಪರಿಹಾರ ತೀರ್ಮಾನವನ್ನು ರಾಜ್ಯದಲ್ಲಿ ಆದಷ್ಟು ತೀವ್ರವಾಗಿ ಮಾಡಿ ರೈತರಿಗೆ ಪರಿಹಾರ ತೀವ್ರವಾಗಿ ಸಿಕ್ಕುವಂತೆ ಸರ್ಕಾರ ಮಾಡಬೇಕೆನ್ನುವ ಸಲಹೆಯನ್ನು ಕೂಡ ನಾನು ಇಲ್ಲಿ ಕೊಡುತ್ತಿದ್ದೇನೆ.

ಆಮೇಲೆ ಈ ಭೂಸಂಗ್ರಹಣ ಅಧಿಕಾರಿಗಳೇನಿದ್ದಾರೆ ಅಂದರೆ ಅಕ್ವಿಜಿಷನ್ ಅಧಿಕಾರಿಗಳಲ್ಲಿ ಅನೇಕರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಭೂಮಿಯನ್ನು ಅಕ್ವಯರ್‌ಮಾಡತಕ್ಕ ಕೆಲವು ಸಂದರ್ಭಗಳಲ್ಲಿ ಕೊಡ ಬೇಕಾದುದಕ್ಕಿಂತ ಹೆಚ್ಚು ಹಣವನ್ನು ಕೊಟ್ಟಿದ್ದಾರೆ. ಈ ಅಂಶ ಸರ್ಕಾರದವರ ನದರಿಗೂ ಬಂದಿವೆ. ಹೀಗೆ ಸಿಕ್ಕಾಬಟ್ಟೆ ಹಣವನ್ನು ಕೊಟ್ಟಿರತಕ್ಕ ಭೂಸಂಗ್ರಹಣ ಅಧಿಕಾರಿಗಳಲ್ಲಿ ಕೆಲವರು ಈಗಾಗಲೇ ನಿವೃತ್ತ ರಾಗಿದ್ದಾರೆ. ಆದಾಗ್ಯೂ ಇವರ ಬಗ್ಗೆ ಸರ್ಕಾರ ಯಾವರೀತಿ ಕ್ರಮಕೈಗೊಳ್ಳಬೇಕೋ ಅದಕ್ಕೆ ಅವಕಾಶವಿದೆ. ಅವರ ಪ್ರಕಾರ ಸರ್ಕಾರದವರು ಕ್ರಮ ಕೈಗೊಳ್ಳಬೇಕೆಂದು ನಾನು ಒತ್ತಾಯಮಾಡುತ್ತೇನೆ. ಇನ್ನು ಕೆಲವು ಅಧಿಕಾರಿಗಳು ಈ ದುರ್ವ್ಯವಹಾರದಲ್ಲಿ ತೊಡಗಿದ್ದವರು ಸರ್ವಿಸಿನಲ್ಲಿದ್ದಾರೆ. ಅಂಥವರ ಬಗ್ಗೆ ಸರ್ಕಾರ ದಂಡಿಸುವುದಕ್ಕೆ ಸಾಕಷ್ಟು ಅವಕಾಶವಿದೆ ಇಂಥವರ ವಿಚಾರದಲ್ಲಿ ಸರ್ಕಾರದವರು ಯಾವ ಕನಿಕರ ಅಥವಾ ರಿಯಾಯಿತಿಗಳನ್ನು ತೋರಿಸಬಾರದು. ಉದಾಹರಣೆಗೆ ಆ ಚಿಕ್ಕಹೊಳೆ ಪ್ರಾಜೆಕ್ಟನ್ನು ತೆಗೆದುಕೊಳ್ಳೋಣ ಅದರ ಅನಾಹುತಕ್ಕೆ ಒಬ್ಬ ಅಧಿಕಾರಿ ಕಾರಣವೆಂದು ನಿರ್ಧರಿಸಲಾಗಿದೆ ಅಂದಾಗ ಅಂತ ತಪಿತಸ್ಥ ಅಧಿಕಾರಿಯ ಬಗ್ಗೆ ಸರ್ಕಾರ ಇನ್ನು ಕ್ರಮಕೈಗೊಂಡಿಲ್ಲ ಎಂದರೆ ಅದಕ್ಕೇನು ಹೇಳಬೇಕು ? ಈ ವಿಚಾರದಲ್ಲಿ ಕೆಲವು ರಾಜಕೀಯ ವ್ಯಕ್ತಿಗಳು ತಮ್ಮ ಪ್ರಭಾವವನ್ನು ಬೀರಿದ್ದಾರೆಂದು ಕೇಳುತ್ತೇನೆ. ಅದಕ್ಕಾಗಿ ಅತನನ್ನು ಸರ್ಕಾರ ಇಂದಿಗೂ ದಂಡಿಸದೇ ಸುಮ್ಮನಿದೆ. ಹೀಗೆ ತಪ್ಪಿತಸ್ಥರನ್ನು ಸರ್ಕಾರ ದಂಡಿಸದೇ ಕೈಬಿಡುವುಧಾದರೆ ಮುಂದೆ ಅನೇಕ ಅಣೆಕಟ್ಟುಗಳಿಗೆ ಇಂಥದೇ ದುಷ್ಪರಿಣಾಮಗಳಾಗಲು ಅವಕಾಶವಾಗುತ್ತೆ ಆದುದರಿಂದ ಅಷ್ಟಕ್ಕೆ ಸರ್ಕಾರದವರು ಅವಕಾಶ ಕೊಡಬಾರದು. ಇಂಥವರನ್ನು ಕಡ್ಡಾಯವಾಗಿ ದಂಡಿಸಲೇಬೇಕೆಂದು ಒತ್ತಾಯ ಮಾಡುತ್ತೇನೆ

ಇನ್ನು ಆ ಶಿವಮೊಗ್ಗ ಜಿಲ್ಲೆಯಲ್ಲಿ ಅಂಬಲಗೊಳ ಪ್ರಾಜೆಕ್ಟ್ ಇರುವುದು ಅಲ್ಲಿನ ರೈತರಿಗೆ ಬಹಳ ಅನುಕೂಲವಾಗಿದೆ. ಅದೇ ರೀತಿ ಎಲ್ಲೆಲ್ಲಿ ನೀರಾವರಿ ಪ್ರಾಜೆಕ್ಟುಗಳನ್ನು ಮಾಡುವುದಕ್ಕೆ ಸಾಧ್ಯವುಂಟೋ ಅಲ್ಲೆಲ್ಲಾ ಅವುಗಳನ್ನು ತ್ವರಿತವಾಗಿ ಮಾಡಬೇಕೆಂದು ಒತ್ತಾಯಿಸುತ್ತೇನೆ ಅನೇಕ ಜಿಲ್ಲೆಗಳಲ್ಲಿ ದೊಡ್ಡ ನೀರಾವರಿಗಳನ್ನು ಮಾಡುವುದಕ್ಕೆ ಯಾವ ನದಿಗಳೂ ಇಲ್ಲ. ಅಂಥ ಕಡೆಗಳಲ್ಲಿ ಚಿಕ್ಕ ನೀರಾವರಿ ಯೋಜನೆ ಗಳನ್ನು ಸರ್ಕಾರ ದವರು ಮಾಡಲೇಬೇಕೆಂದು ನಾನು ಒತ್ತಾಯಮಾಡುತ್ತೇನೆ. ಇಲ್ಲವಾದರೆ ರಾಜ್ಯದಲ್ಲಿ ಕೆಲವೇ ಭಾಗಗಳು ಅಭಿವೃದ್ಧಿಯಾಗಿ ಇನ್ನ ಉಳಿದಭಾಗಗಳು ಹಿಂದುಳಿಯಲು ಅವಕಾಶವಾಗಿ ಅದರಿಂದ ಅನೇಕ ಸಮಸ್ಯೆಗಳು ಉದ್ಭವಿಸುತ್ತವೆ. ಅದಕ್ಕೆ ಸರ್ಕಾರದವರು ಅವಕಾಶ ಕೊಡಬಾರದು. ನಮ್ಮ ಬಡ್ಜೆಟಿನಲ್ಲಿ ನೂರಕ್ಕೆ ಐವತ್ತರಷ್ಟು ಹಣ ಅಧಿಕಾರಿಗಳ ಸಂಬಳಕ್ಕೂ ಮತ್ತು ನೂರಕ್ಕೆ ಅರವತ್ತರಷ್ಟು ಅವರಿಗೆ ನುಂಗುವುದಕ್ಕೆ ಹೋಗುತ್ತಿದೆ. ಇವನ್ನು ಕಡ್ಡಾಯವಾಗಿ ತಪ್ಪಿಸಲು ಅವರನು ದಂಡಿಸಲೇ ಬೇಕೆಂದು ಒತ್ತಾಯಮಾಡಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ,

† ಶ್ರೀ ಎಚ್.ಟಿ. ಕೃಷ್ಣಪ್ಪ (ನಾಗಮಂಗಲ).—ಮಾನ್ಯ ಅಧ್ಯಕ್ಷರೇ: ಮೈಸೂರು ರಾಜ್ಯದಲ್ಲಿ ನಾಗ ಮಂಗಲ ಎಂಬ ಒಂದು ತಾಲ್ಲೂಕ್ ಇದೆ ಅನ್ನುವುದನ್ನು ಸರ್ಕಾರಕ್ಕೆ ಗೊತ್ತುಮಾಡಿಕೊಡಲು. ಅರಿವು ಮಾಡಿಕೊಡಲು ಒಂದು ಅಗತ್ಯವುಂಟಾಗಿದೆ ಎಂಬುದನ್ನು ತಿಳಿದುಕೊಂಡು ನಾನು ಈಗ ಎದ್ದುನಿಂತಿದ್ದೇನೆ.

ನಮ್ಮ ಜಿಲ್ಲೆಗೇ ಸೇರಿದಂಥವರಾದ ಒಬ್ಬ ಪ್ರಭಾವಶಾಲಿಗಳಾದ ವ್ಯಕ್ತಿಗಳು ಇಂದಿನ ಮಂತ್ರಿ ಮಂಡಲ ದಲ್ಲಿದ್ದಾರೆ: ಅವರು ಯಾರೆಂದರೆ ಮಾನ್ಯ ಶ್ರೀ ಕೃಷ್ಣ ಅವರು ಇವರಿಗೆ ನಮ್ಮ ತಾಲ್ಲೂಕಿನ ವಿಚಾರ ಸಂಪೂರ್ಣವಾಗಿ ಗೊತ್ತಿದೆ. ಒಂದು ಕಾಲದಲ್ಲಿ ಇವರು ನಮ್ಮ ತಾಲ್ಲೂಕನ್ನು ಪ್ರತಿನಿಧಿಸಿ ಈ ಸಭೆಯ

(ಶ್ರೀ ಹೆಚ್.ಟಿ ಕೃಷ್ಣಪ್ಪ)

ಶಾಸಕರಾಗಿದ್ದರು. ಆದುದರಿಂದ ನಾನೀಗ ಈ ಮಾನ್ಯ ಮಂತ್ರಿಗಳಿಗೆ ಆ ತಾಲ್ಲೂಕಿನ ಜನರ ಕಷ್ಟಕಾರ್ಪಣ್ಯಗಳೇನೆಂಬುದನ್ನು ಹೆಚ್ಚು ಪ್ರಸ್ತಾಪಿಸಿ ಅವರಿಗೆ ಅರಿವುಮಾಡಿಕೊಡಬೇಕಾಗಿದ್ದಿಲ್ಲ. ಆದರೆ ಆ ಭಾಗದ ಜನರು ಕಳೆದ ೨೫ ವರ್ಷಗಳಿಂದಲೂ ಬಹಳ ತೊಂದರೆಗೀಡಾಗಿದ್ದಾರೆ. ಸರ್ಕಾರ ಆ ಪ್ರದೇಶಕ್ಕೆ ಯಾವ ಪ್ರಮಾಣದಲ್ಲಿ ಎಷ್ಟು ಮಟ್ಟಿಗೆ ತನ್ನ ಲಕ್ಷ್ಯವನ್ನು ಮತ್ತು ಗಮನವನ್ನು ಹರಿಯಬೇಕಾಗಿತ್ತೋ ಅಷ್ಟನ್ನು ಹರಿಸಿಲ್ಲ ಎಂಬುದನ್ನು ನಾನು ಸ್ಪಷ್ಟವಾದ ಮಾತುಗಳಲ್ಲಿ ಹೇಳ ಬಯಸುತ್ತೇನೆ. ನಾಗಮಂಗಲ ತಾಲ್ಲೂಕ್ ಆ ಮಂಡ್ಯ ಜಿಲ್ಲೆಯಲ್ಲಿ ಒಂದು ತಾಲ್ಲೂಕ್ ಆ ಮಂಡ್ಯ ಜಿಲ್ಲೆಯ ಜನರು ಯಾವತ್ತೂ ಸುಖಸಂಪತ್ತಿಗಳಿಂದ ಕೂಡಿದವರಾಗಿದ್ದಾರೆಂಬ ಮಾತು ಅನೇಕರಿಂದ ಕೇಳಿಬರುತ್ತದೆ. ಆದರೆ ಇರತಕ್ಕ ವಾಸ್ತವಾಂಶಗಳೇ ಬೇರೆ. ಆ ಮಂಡ್ಯಾ ಜಿಲ್ಲೆಯಲ್ಲಿ ಯಾವ ಭಾಗ ಸುಖ ಸಂಪತ್ತಿಗಳಿಂದ ಕೂಡಿದೆಯೋ ಅದಕ್ಕೆ ನಾಗಮಂಗಲ ತಾಲ್ಲೂಕಿನ ಜನರು ಹೊರತಾಗಿದ್ದಾರೆ. ಅದೊಂದು ದೊಡ್ಡ ಬೆಂಗಾಡು ಪ್ರದೇಶ. ಈ ಅಂಶ ಅನೇಕ ಮಂತ್ರಿಗಳಿಗೂ ಮತ್ತು ಶಾಸಕರಿಗೂ ಗೊತ್ತಿದೆ. ಆದರೆ ಸಾಮಾನ್ಯವಾಗಿ ಬೆಂಗಳೂರಿಂದ ಮೈಸೂರಿಗೆ ಪ್ರಯಾಣಮಾಡತಕ್ಕ ಜನರು ದಾರಿ ಉದ್ದಕ್ಕೂ ಹಸಿರಾದ ಪಚ್ಚೆ ಪೈರುಗಳಿರುವುದನ್ನು ನೋಡುತ್ತಿರುವುದರಿಂದ ಇಡೀ ಮಂಡ್ಯಾ ಜಿಲ್ಲೆಯಲ್ಲೆಲ್ಲಾ ಪರಿಸ್ಥಿತಿ ಹಾಗೇ ಇರಬಹುದೆಂದು ಭಾವಿಸುವುದು ಸ್ವಾಭಾವಿಕ. ಆದರೆ ಈ ದಿವಸ ಬೇಕಾಗಿದ್ದರೂ ಯಾವ ಶಾಸಕರಾಗಲಿ ಅಥವಾ ಮಂತ್ರಿಗಳಾಗಲಿ ಆ ನಾಗಮಂಗಲ ತಾಲ್ಲೂಕಿನಲ್ಲಿ ಹೋಗಿ ಸಂಚಾರ ಮಾಡಿ ನೋಡಿದಲ್ಲಿ ಅಲ್ಲಿ ಯಾವ ಹಳ್ಳಿಗೂ ಯಾವ ವಿಧವಾದ ನೀರಾವರಿ ಸೌಲಭ್ಯಗಳೂ ಇರುವುದಿಲ್ಲ ಎಂಬುದು ಕಂಡುಬರುತ್ತದೆ. ಅನೇಕ ಗ್ರಾಮಗಳಲ್ಲಿ ಈ ದಿವಸ ಕುಡಿಯುವುದಕ್ಕೆ ನೀರು ಕೂಡ ಸಿಕ್ಕುತ್ತಿಲ್ಲ. ಅಲ್ಲಿ ವರ್ಷಕ್ಕೆಲ್ಲಾ ಬಿದ್ದರೆ ೧೮ ಇಂಚು ಮಳೆಯಾದರೆ ಹೆಚ್ಚು. ಆದರೆ ಕಳೆದ ಸಾಲಿನಲ್ಲಿ ಅಲ್ಲಿ ಅಷ್ಟೂ ಬರಲಿಲ್ಲ—ಅಲ್ಲಿ ಕೇವಲ ೧೦ ಇಂಚು ಮಾತ್ರ ಮಳೆಯಾಯಿತು. ಹೀಗಾಗಿ ಆ ತಾಲ್ಲೂಕಿನಲ್ಲಿ ಭೂಗರ್ಭದ ಪರಿಶೀಲನೆಯಿಂದ ಅಲ್ಲಿ ನೀರಾವರಿ ಸೌಲಭ್ಯಗಳನ್ನು ಒದಗಿಸುವುದಕ್ಕೆ ಸಾಧ್ಯವಿದೆ ಎಂಬ ಅಂಶವನ್ನು ತಾಂತ್ರಿಜ್ಞರು ಹೇಳುತ್ತಿದ್ದಾರೆ. ನ್ಯಾಯಪ್ರಕಾರ ನಾಗಮಂಗಲ ತಾಲ್ಲೂಕಿಗೆ ಅಲ್ಲಿನ ನಾಗರೀಕರಿಗೆ ಎಷ್ಟು ಸೌಲಭ್ಯಗಳು ಲಭಿಸಬೇಕಾಗಿತ್ತೋ ಮತ್ತು ಆ ಪ್ರದೇಶಕ್ಕೆ ಸರ್ಕಾರ ನ್ಯಾಯವಾಗಿ ಎಷ್ಟು ಹಣವನ್ನು ಖರ್ಚು ಮಾಡಬೇಕಾಗಿತ್ತೋ ಅಷ್ಟನ್ನು ಮಾಡದಿರುವುದರಿಂದ ಸರ್ಕಾರ ತನ್ನ ಹೊಣೆಗಾರಿಕೆಯನ್ನು ಈಡೇರಿಸುವುದರಲ್ಲಿ ವಿಫಲವಾಗಿದೆ. ಈ ಒಂದು ತಾತ್ಸಾರಭಾವನೆಯಿಂದಲೇ ಆ ಪ್ರದೇಶದ ಇರತಕ್ಕ ಜನರ ಜೀವನ ಬಹಳ ದುರ್ಭರವಾಗಿದೆ. ಅಲ್ಲಿ ಇಲ್ಲಿಯವರೆಗೂ ಯಾವ ಒಂದು ನೀರಾವರಿ ಸೌಲಭ್ಯಗಳನ್ನೂ ಸರ್ಕಾರ ಒದಗಿಸಿಲ್ಲ. ಆ ಪ್ರದೇಶದ ಜನರ ಕ್ಷೇಮ ಚಿಂತನೆಯ ಬಗ್ಗೆ ಸರ್ಕಾರದವರ ಅಭಿಪ್ರಾಯ ಮತ್ತು ಅವರ ದೃಷ್ಟಿ ಹೀಗೇ ಮುಂದುವರಿದಲ್ಲಿ ಆ ಜನರಿಗೆ ಆ ಹೇಮಾವತಿ ನೀರನ್ನು ಪಡೆಯುವ ಕನಸು ಕನಸಾಗಿಯೇ ಉಳಿಯುವುದು ಅದು ನನಸಾಗುವ ಚಿಹ್ನೆಗಳೇ ಕಾಣುವುದಿಲ್ಲ. ಅಲ್ಲಿ ಕಾವೇರಿ ಜಲಾನಯನ ಯೋಜನೆಗಳಿಗೆ ಕನಿಷ್ಟ ಹತ್ತು ಹನ್ನೆರಡು ಕೋಟಿ ಹಣಬೇಕಾಗಿದ್ದರೆ ಸರ್ಕಾರದವರು ವರ್ಷಕ್ಕೆ ೧-೨ ಕೋಟಿ ರೂಪಾಯಿಗಳನ್ನು ಒದಗಿಸುತ್ತಿದ್ದಾರೆ. ಈ ಕೆಲಸಕಾರ್ಯಗಳ ವೇಗ ಹಿಂದಿನ ವರ್ಷಗಳಲ್ಲಿ ಹೇಗೆ ಸಾಗುತ್ತಿತ್ತೋ ಹಾಗೇ ಈಗ ಸಾಗುತ್ತಿಲ್ಲ. ಅಲ್ಲಿ ನೂರಾರು ಜನರು ಕೆಲಸಮಾಡಬೇಕಾದ ಕಡೆ ಹತ್ತು ಜನರು ಕೂಡ ಕಾಣುವುದಿಲ್ಲ. ಅಂದಾಗ ಆ ಕೆಲಸಗಳು ಮುಗಿಯಬೇಕಾದರೆ ಎಷ್ಟು ವರ್ಷಗಳು ಬೇಕೋ ತಿಳಿಯದಾಗಿದೆ. ಇದರಿಂದ ಅಲ್ಲಿನ ಜನ ಬಹಳ ನಿರಾಶರಾಗಿದ್ದಾರೆ. ಹೇಮಾವತಿ ನದೀ ನೀರನ್ನು ನಾಗಮಂಗಲ ತಾಲ್ಲೂಕಿಗೆ ಒದಗಿಸುವುದಾಗಿ ಸರ್ಕಾರದವರು ಅನೇಕಾವರ್ತಿ ಭರವಸೆಗಳನ್ನು ಕೊಟ್ಟಿದ್ದಾರೆ. ಆ ಭಾಗದಲ್ಲಿ ಸಂಚಾರ ಮಾಡಿದ ಇಂದಿನ ಅನೇಕ ಮಂತ್ರಿಗಳು ಅವರ ಕಷ್ಟಕಾರ್ಪಣ್ಯಗಳನ್ನು ನೋಡಿ ಅವರ ಬಗ್ಗೆ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿ ಹೇಮಾವತಿ ನೀರನ್ನು ನಾಗಮಂಗಲ ತಾಲ್ಲೂಕಿಗೆ ಒದಗಿಸುವುದಾಗಿ ವಾಗ್ದಾನಕೂಡ ಮಾಡಿದ್ದಾರೆ. ಬರೀ ಒಂದು ಭರವಸೆಯಷ್ಟೇ ಅಲ್ಲ. ವಾಗ್ದಾನ ಮಾಡಿರುವುದು ಮಾತ್ರವಲ್ಲ ೧೯೭೭ರ ಒಳಗೆ ನಾಗಮಂಗಲ ತಾಲ್ಲೂಕಿನ ಜನ ಹೇಮಾವತಿ ಯೋಜನೆಯಿಂದ ನೀರನ್ನು ಪಡೆಯಬಹುದು; ನೀರಾವರಿ ಸೌಲಭ್ಯವನ್ನು ಹೊಂದುತ್ತಾರೆ. ಅವರ ಪರಿಸ್ಥಿತಿ ಉತ್ತಮವಾಗುತ್ತದೆ ಎನ್ನುವ ಮಾತನ್ನು ಹೇಳಿದ್ದಾರೆ. ಈ ಮಾತುಗಳನ್ನು ನೋಡಿದರೆ, ನೀವು ಕಾರ್ಯತತ್ಪರರಾಗದೆ ಹೋಗುತ್ತೀರಿ. ಜನಗಳಿಗೆ ಮಾತಿನ ಮಾತ್ರ ಪುಂಖ ಮಾತುಗಳನ್ನು ಹೇಳಿದ್ದೀರೋ ಏನೋ ಎಂದನಿಸುತ್ತದೆ. ಇದುವರೆಗೂ ನಾಗಮಂಗಲಕ್ಕೆ ಎರಡನೆಯ ಹಂತದಿಂದ ನೀರನ್ನು ಒದಗಿಸುತ್ತೇವೆಂದು ಹೇಳುವುದು, ಈ ಪ್ರಮಾಣದಲ್ಲಿ ಅಲ್ಲಿಯ ಕೆಲಸಗಳು ನಡೆಯುತ್ತಾ ಹೋದರೆ, ಮೊದಲನೆಯ ಹಂತದಿಂದಲೂ ನಾಗಮಂಗಲ ತಾಲ್ಲೂಕಿನ ಜನರಿಗೆ ನೀರು ಸಿಕ್ಕುವುದಿಲ್ಲ. ಕನ್ನಂಬಾಡಿ ಅಣೇಕಟ್ಟಿನಲ್ಲಿ ಅಸ್‌ಅಥರೈಸ್ಡ್ ಅಚ್ಚುಕಟ್ಟು ದಾರರು ಹೆಚ್ಚು ಆಗಿದ್ದಾರೆ. ಏನು ನೀವು ನಾಗಮಂಗಲದ ಜನಕ್ಕೆ ಸಮಾಧಾನವನ್ನು ಹೇಳಬಹುದು ತಮ್ಮಲ್ಲಿ ನಾನು ಕೇಳಿಕೊಳ್ಳುತ್ತೇನೆ, ನೀರಿನ

ಪ್ರಮಾಣ ಎಷ್ಟೇ ಇರಲೀ, ರಿಸರ್ವಾಯರ್‌ನಲ್ಲಿ ಶೇಖರಣೆಯಾಗಿರತಕ್ಕ ನೀರು ಎಷ್ಟೇ ಇರಲಿ, ಅದನ್ನು ಎಲ್ಲಾ ಭಾಗಗಳಿಗೂ ಸಮನಾಗಿ ಹಂಚುತ್ತೇವೆಂದು ಅವರಿಗೆ ಸಹಾಯ ಮಾಡಲೇಬೇಕು. ಇದೇ ಮಾತನ್ನು ನೀವು ಚುನಾವಣೆಯ ಕಾಲದಲ್ಲಿ ಹೇಳಿದ್ದೀರಿ. ಬೇರೆ ಪಕ್ಷದವರು ಅಲ್ಲಿ ಗೆದ್ದು ಬಂದಿದ್ದಾರೆ ಎಂದು ಒಂದ ಹಿನ್ನಲೆಯನ್ನು ಇಟ್ಟುಕೊಂಡು ಮತ್ಸರದಿಂದ, ದ್ವೇಷದಿಂದ ಪ್ರೇರೇಪಿತರಾಗಿ ಆ ಜನಕ್ಕೆ ಅನ್ಯಾಯ ಮಾಡಿದರೆ ಭಗವಂತನು ನಿಮಗೆ ಒಳ್ಳೆಯದನ್ನು ಮಾಡುವುದಿಲ್ಲ. ಇದರ ಮೇಲೆ ನಾನು ಹೆಚ್ಚಾಗಿ ಹೇಳುವುದಕ್ಕೆ ಹೋಗುವುದಿಲ್ಲ.

5-30 P.M.

ಈ ಸಮಯದಲ್ಲಿ ಈ ಬೊಳ್ಳಾರೆ ಅಣೆಕಟ್ಟಿನ ಕೆಲಸ ಜರೂರಾಗಿ ನಡೆದಿದೆ ಅದು ಸಂತೋಷದ ವಿಚಾರ. ನಾಗಮಂಗಲ ತಾಲ್ಲೂಕಿನ ೭೫೦ ಎಕರೆ ಭೂಮಿ ಇದರಿಂದ ನೀರಾವರಿಯಾಗುತ್ತದೆ. ಇದರ ಒಂದು ವಿಚಾರವನ್ನು ನಾನು ಇಲ್ಲಿ ಪ್ರಸ್ತಾಪಮಾಡಬೇಕಾಗುತ್ತದೆ. ಇದಕ್ಕೆ ೧೯೬೨ರಲ್ಲಿ ಮಂಜೂರಾತಿಯಾಗಿ, ಆಗ ಶ್ರೀಮಾನ್ ಎಚ್.ಕೆ. ವೀರಣ್ಣಗೌಡರು ಲೋಕೋಪಯೋಗಿ ಮಂತ್ರಿಗಳಾಗಿದ್ದರು, ಆಗ ಒಂದು ಪ್ರಾರಂಭೋತ್ಸವ ನಡೆದು ಹೋಯಿತು. ನಾನು ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಕಾಗದವನ್ನು ಬರೆದಿದ್ದೇನೆ. ಈ ಯೋಜನೆ ಪ್ರಾರಂಭವಾಗಿ ಸ್ವಲ್ಪ ದುಡ್ಡು ಖರ್ಚಾಗಿದೆ; ಆದರೆ ಎರಡನೆಯ ಸಾರಿ ಇದಕ್ಕೆ ಪುನಃ ಪ್ರಾರಂಭೋತ್ಸವ ಮಾಡಿದ್ದಾರೆ, ಇದು ಅಭಾಸವಾಗುತ್ತದೆ.

ಶ್ರೀ ಎಸ್.ಎಂ. ಕೃಷ್ಣ :—೧೯೬೨ರಲ್ಲಿ ನಾನು ಮಾನ್ಯ ಸದಸ್ಯರಾದ ಕೃಷ್ಣಪ್ಪನವರ ಸ್ಥಾನಕ್ಕೆ ಬಂದು ಸ್ಥಾನ ಮುಂದೆ ಕೂತಿದ್ದೆ. ಆಗ ನಾನು ಚುನಾವಣೆಯಲ್ಲಿ ಗೆದ್ದು ಬಂದೆಯೆಂದು ಈ ಬೊಳ್ಳಾರೆ ಅಣೆಕಟ್ಟಿನ ಬಗ್ಗೆ ತಲೆಯ ಮೇಲೆ ಕಲ್ಲು ಹಾಕಿದರು,

ಶ್ರೀ ಬಿ. ಪುಟ್ಟಸ್ವಾಮಯ್ಯ :—ಮಾನ್ಯ ಚೆನ್ನಬಸಪ್ಪನವರ ಮೇಲೆ ಕೆಲವು ಅಪಾದನೆಗಳು ಇವೆಯೆಂದು ಮಾನ್ಯ ಕೃಷ್ಣ ಅವರನ್ನು ಉಪನಾಯಕರನ್ನಾಗಿ ಮಾಡಿದ್ದೀರಾ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಡಿ. ದೇವರಾಜ ಅರಸ್ :—ನಿಮ್ಮ ಇಷ್ಟ ಏನು ಮಾಡಬೇಕು ಎಂದು ಇದ್ದೀರ?

ಶ್ರೀ ಬಿ. ಪುಟ್ಟಸ್ವಾಮಯ್ಯ :—ತಪ್ಪಿತಸ್ಥರಿಗೆ ಶಿಕ್ಷೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ, ಡಿ. ದೇವರಾಜ ಅರಸ್.—ಅಪರಾಧ ಮಾಡಿದವರು ಯಾರು?

ಶ್ರೀ ಎಚ್.ಎಸ್. ಸಿದ್ದಪ್ಪ.—ನಿಮಗೆ ಗೊತ್ತಿದೆ, ಹೇಳುವುದಕ್ಕೆ ಸಂಕೋಚ ಪಡುತ್ತೀರಿ.

ಶ್ರೀ ಎಚ್.ಟಿ. ಕೃಷ್ಣಪ್ಪ —ಈಗ ಈ ಒಂದು ವಿವಾದವನ್ನು ಕೊನೆಗಾಣಿಸಬೇಕು ಎನ್ನುವ ದೃಷ್ಟಿಯಿಂದ ಒಂದು ಮಾತನ್ನು ಹೇಳುತ್ತೇನೆ. ೧೯೬೨ನೇ ಇಸವಿಯಲ್ಲಿ ಇದಕ್ಕೆ ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಕೊಟ್ಟಿದ್ದು.

ಶ್ರೀ ಎಸ್ ಎಂ. ಕೃಷ್ಣ. ನಾನು ಚುನಾವಣೆಯಲ್ಲಿ ಗೆದ್ದು ಬಂದ ಮೇಲೆ ಶ್ರೀಮಾನ್ [illegible] ಲಿಂಗಪ್ಪನವರಿಗೆ ಈ ಪ್ರಶ್ನೆಯನ್ನು [illegible] ಅದಕ್ಕೆ [illegible] ಬಜೆಟ್‌ [illegible] ನಲ್ಲಿ ಬೊಳ್ಳಾರೆ ಅಣೆಕಟ್ಟನ್ನು ಸ್ಯಾಂಕ್ಷನ್ ಮಾಡಿದ್ದೇವೆ ಎಂದು ಹೇಳಿದರು. ಅವೇ [illegible] ಆ ಪ್ರಶ್ನೆಯ ಉತ್ತರ [illegible] ಯಾಗಿದೆ, [illegible] ಈ ಒಂದು ಸ್ಕೀಂ ಇಲ್ಲ ಎಂದು ಹೇಳಿದರು [illegible] ತೆಗೆದು ಕೊಳ್ಳುವುದಕ್ಕೆ ಆಗುವುದಿಲ್ಲ ಎಂದೂ ಹೇಳಿದರು. [illegible] ಬಹಳ ರೋಷವುಳ್ಳ [illegible] ಮಾಡಿದ್ದೇನೆ; [illegible] ಮಾತನಾಡಿದ್ದೇನೆ. ಆದರೆ ಇವರ ಪ್ರಾರಂಭೋತ್ಸವ ನಡೆಯಿತು ಎಂದು ....

ಶ್ರೀ ಎಚ್.ಡಿ. ದೇವೇಗೌಡ.—ನಿಮ್ಮ ಕಷ್ಟ ಏನು ಎಂದು ನನಗೆ ಗೊತ್ತು, ಅಲ್ಲಿ ಒಂದು ಕಲ್ಲು ಬಿದ್ದಿರುವುದು, ಎರಡು ಕಲ್ಲು ಬಿದ್ದಿರುವುದು ಅಲ್ಲ ಎಂದು ತಾವು ಹೇಳುತ್ತಿರುವುದು.

ಶ್ರೀ ಎಚ್.ಟಿ. ಕೃಷ್ಣಪ್ಪ —ನಾನು ಖಾಸಗಿಯಾಗಿ ತನಿಖೆಮಾಡಿ ತಿಳಿದ ಕೊಂಡಿರತಕ್ಕ ವಿಚಾರ. ಆಗ ಇದಕ್ಕೆ ಪ್ರಾರಂಭೋತ್ಸವಕ್ಕಾಗಿ ಸುಮಾರು ಎರಡು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆಂದು

(ಶ್ರೀ ಎಚ್. ಟಿ. ಕೃಷ್ಣಪ್ಪ)

ಪ್ರಾರಂಭೋತ್ಸವವಾಗದೆ ಎರಡು ಸಾವಿರ ರೂಪಾಯಿಗಳನ್ನು ಖರ್ಚುಮಾಡುವುದಕ್ಕೆ ಸಾಧ್ಯವೇ? ಇಂಥ ಘಟನೆಗಳು ಏನಾದರೂ ನಡೆದಿವೆಯೇ? ಇದರ ಬಗ್ಗೆ ತಾವು ಸ್ವಲ್ಪ ತಿಳಿಸಬೇಕಾಗುತ್ತದೆ. ಪ್ರಾರಂಭೋತ್ಸವ ನಡೆಯದೆ ಹಣವನ್ನು ಹೇಗೆ ಖರ್ಚು ಮಾಡಿದರು?

ಶ್ರೀ ಎಚ್.ಡಿ. ದೇವೇಗೌಡ.—ಒಂದೊಂದು ಸಮಾರಂಭಕ್ಕೆ ಮೂರು ಕಲ್ಲು ಹಾಕಿ, ಇಬ್ಬರು ಅಧ್ಯಕ್ಷರಾಗಿದ್ದಂಥ ನಿದರ್ಶನಗಳು ಇವೆ. ಪಾರ್ಲಿಮೆಂಟ್ ಮೆಂಬರ್ ಒಂದು ಸಮಾರಂಭದಲ್ಲಿ ಪ್ರಿಸೈಡ್ ಮಾಡಿದರೆ. ಎಂ.ಎಲ್.ಎ. ಅವರು ಪ್ರಿಸೈಡ್ ಮಾಡಿದ್ದಾರೆ ಮತ್ತೆ ಯಾರು ಯಾರು ಪ್ರಿಸೈಡ್ ಮಾಡಿದ್ದಾರೋ ಗೊತ್ತಿಲ್ಲ. ನನ್ನ ಹತ್ತಿರ ಇದರ ಒಂದು ಫೋಟೋ ಇದೆ.

ಎಸ್.ಎಂ. ಕೃಷ್ಣ.—ಇದಕ್ಕೆ ಸಂಬಂಧಪಟ್ಟ ವಿವರಗಳನ್ನು ನಾನು ಸಭಾಧ್ಯಕ್ಷರಿಗೆ ಕೊಡುತ್ತೇನೆ. ಅವರು ಅದನ್ನು ಓದಿದರೆ, ಸ್ಪಷ್ಟವಾಗಿ ಎಲ್ಲಾ ವಿಚಾರಗಳೂ ಗೊತ್ತಾಗುತ್ತವೆ. ಒಂದು ಸಾರಿ ಶಂಕು ಸ್ಥಾಪನೆ ಇದಕ್ಕೆ ನಡೆದಿದೆ ಅವರು ಹೇಳಿದ ರೀತಿ ನಡೆದಿಲ್ಲ ಮತ್ತು ಇದರಿಂದ ನಾಗಮಂಗಲ ತಾಲ್ಲೂಕಿನ ಜನತೆಗೆ ಅನುಕೂಲವಾಗುತ್ತದೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ.

ಶ್ರೀ ಎಚ್.ಟಿ. ಕೃಷ್ಣಪ್ಪ.—ಈಗ ವಿವಾದಕ್ಕೆ ಕೊನೆ ಮಾಡೋಣ ಸಂಬಂಧಪಟ್ಟ ಕಾಗದ ಪತ್ರಗಳನ್ನು ಅವರು ಒದಗಿಸುತ್ತೇವೆಂದು ಹೇಳಿದ್ದಾರೆ, ಅವುಗಳನ್ನು ದಯವಿಟ್ಟು ನನ್ನ ಕಡೆಗೆ ಕೊಡಿ, ನಾನು ವೆರಿಫೈ ಮಾಡುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ.—ನೀವೂ ವೆರಿಫೈ ಮಾಡಬಹುದು.

ಶ್ರೀ ಎಚ್. ಟಿ. ಕೃಷ್ಣಪ್ಪ.—ಇನ್ನೂ ಮಂಗಳ ಅಣೆಕಟ್ಟಿಗೆ ನೀರನ್ನು ಕೊಟ್ಟಿಲ್ಲ, ಕೊಡುತ್ತಾರೆ ಎನ್ನುವ ನಂಬಿಕೆ ಬಂದಿದೆ. ನಾವು ಯಾವಾಗಲೂ ಸತ್ಯವನ್ನು ಮರೆಮಾಚುವಂಥ ಕೆಲಸಗಳನ್ನು ಮಾಡುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಎಷ್ಟು ವರ್ಷದಿಂದ ಇದು ಆಯಿತು ತಾವೇ ಹೇಳಿ, ಎಷ್ಟು ವರ್ಷದಿಂದ ಇದು ನಿಂತು ಹೋಗಿತ್ತು, ತಮಗೆ ಗೊತ್ತಿದೆ, ನಾವು ನಮ್ಮ ಕೈಯ್ಯಲ್ಲಾದ ಪ್ರಯತ್ನವನ್ನು ಮಾಡಿ ಈಗ ಮುಂದಿನ ಸೀಸನ್ ಅಷ್ಟೊತ್ತಿಗೆ ನೀರನ್ನು ಕೊಡಬೇಕು ಎಂದು ಇದ್ದೇವೆ. ಬರಬಹುದು ಎಂದು ಕಾಣುತ್ತದೆ.

ಶ್ರೀ ಎಚ್.ಟಿ. ಕೃಷ್ಣಪ್ಪ.—ಇದಕ್ಕೆ ಮಂಜೂರಾತಿ, ನಮ್ಮ ಪಕ್ಷದವರು ಅಧಿಕಾರದಲ್ಲಿದ್ದಾಗ ಆಯಿತು. ಇದನ್ನು ಪ್ರಾರಂಭೋತ್ಸವ ಮಾಡುವ ಕಾಲಕ್ಕೆ........

ಶ್ರೀ ಎಚ್.ಡಿ. ದೇವೇಗೌಡ.—ಮಾನ್ಯ ಸದಸ್ಯರ ತಲೆ ಒಳಗೆ ಇರುವುದು, ಎರಡು ಕಲ್ಲು ಹಾಕಿದರು ಎಂದು.

ಶ್ರೀ. ಡಿ. ದೇವರಾಜ ಅರಸ್.—ಒಂದೇ ಕಲ್ಲು ಹಾಕಿರುವುದರಿಂದ, ಇದು ಆಗಬಾರದು ಎಂದು ಒಂದು ಗುಂಪು ಕಟ್ಟಿಕೊಂಡು ಕೆಲವರು ಇದನ್ನು ನಿಲ್ಲಿಸಿಕೊಂಡು ಬಂದಿದ್ದಾರೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಹೇಮಾವತಿ ಯೋಜನೆಯಿಂದ ನಾಗಮಂಗಲ ತಾಲ್ಲೂಕಿಗೆ ನೀರನ್ನು ಒದಗಿಸಿ ಎಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ. ಬೆಳ್ಳಾರೆ ಅಣೆಕಟ್ಟಿನಿಂದ ನಮ್ಮ ತಾಲ್ಲೂಕಿನ ೭೫೦ ಎಕರೆ ನೀರಾವರಿಯಾಗುತ್ತದೆ. ಮಂಗಳ ಮತ್ತು ಮಾರ್ಕೋನಹಳ್ಳಿ ಜಲಾಶಯಗಳು, ಕುಣಿಗಲ್ ತಾಲ್ಲೂಕಿನಲ್ಲಿ ದೊಡ್ಡ ಜಲಾಶಯಗಳು. ಅಲ್ಲಿ ನೀರಿನ ಅನುಕೂಲ ತುಂಬಾ ಇದೆ. ಅದರಲ್ಲೂ ಮಂಗಳ ಅಣೆಕಟ್ಟು ತುಂಬಿದ ನಂತರ ಕ್ಯಾಚ್‌ಮೆಂಟ್ ವರ್ಷವೇ ಇ[illegible]. ಅಲ್ಲಿ ನೀರಿನ ಆಶ್ರಯ ಬಹಳ ಇದೆ. ಮಂಗಳ ಅಣೆಕಟ್ಟಿನಿಂದ ಮಾರ್ಕೋನಹಳ್ಳಿ ಅಣೆಕಟ್ಟಿಗೆ ನೀರನ್ನು ಹಾಯಿಸಿದರೆ, ನಾಗಮಂಗಲ ತಾಲ್ಲೂಕಿನ ಕೆಲವು ಜಮೀನುಗಳಿಗೆ ನೀರಾವರಿಯಾಗುವ ಸಂಭವ ಇದೆ. ಮಂಗಳ ಜಲಾಶಯದಿಂದ ಮಾರ್ಕೋನಹಳ್ಳಿ ಜಲಾಶಯಕ್ಕೆ ಎರಡು ಮೂರು ಫರ್ಲಾಂಗ್ ಕಟಿಂಗ್ ಮಾಡಿ ನೀರನ್ನು ಲಿಫ್ಟ್ ಮಾಡಬಹುದು. ಮಾರ್ಕೋನಹಳ್ಳಿ ಜಲಾಶಯದಿಂದ ನಾಗಮಂಗಲ ತಾಲ್ಲೂಕಿಗೆ ನೀರನ್ನು ಹಾಯಿಸಬಹುದು. ಈ ರೀತಿ ಮಾಡಿದರೆ, ನಾಗಮಂಗಲ ತಾಲ್ಲೂಕಿನ ಇನ್ನೂ ಎರಡು ಮೂರು ಸಾವಿರ ಎಕರೆ ಜಮೀನಿಗೆ ನೀರು

ಒದಗಿಸುವುದಕ್ಕೆ ಸಾಧ್ಯವಾಗುತ್ತದೆ, ಯಾವ ರಾಜಕಾರಣದಿಂದಲೋ ಏನೋ ನಮಗೆ ಅನುಕೂಲವಾಗಲಿಲ್ಲ ಮಾನ್ಯ ಕಂದಾಯ ಮಂತ್ರಿಗಳು ಆಗ ಪ್ರಭಾವಶಾಲಿಗಳಾಗಿದ್ದರು, ಮಾರ್ಕೋನಹಳ್ಳಿ ಜಲಾಶಯ ಕಟ್ಟಿಸಿದಾಗ ಅವರಿಗೆ ಬೇಕಾದ ಅನುಕೂಲ ಮಾಡಿಕೊಂಡರು, ನಮಗೆ ಅಭಾವ ಬರುವುದಕ್ಕೆ ಅವರೂ ಕಾರಣರು. ಇದನ್ನು ಬಹಳ ಲಘುವಾಗಿ ಅಥವಾ ಹಾಸ್ಯಕ್ಕೆ ಹೇಳುತ್ತಿಲ್ಲ ನಾಗಮಂಗಲ ತಾಲ್ಲೂಕಿಗೆ ಹೇಮಾವತಿ ಯೋಜನೆಯ ಎರಡನೆಯ ಹಂತದಲ್ಲಿ ನೀರು ಕೊಡಲು ಸಾಧ್ಯವಿತ್ತು.

ಶ್ರೀ ಡಿ. ದೇವರಾಜ ಅರಸ್.—ನೀವೂ ಅವರೂ ನೆಂಟರು.

ಶ್ರೀ ಎಚ್.ಟಿ. ಕೃಷ್ಣಪ್ಪ.—ಹೌದು, ಅವರ ಮನೆಗೆ ಹೋದಾಗ ಅವರು ನಮ್ಮನ್ನು ಚೆನ್ನಾಗಿ ನೋಡಿಕೊಳ್ಳುವರು. ಆ ವಿಚಾರ ಬೇರೆ, ನಾನು ನಮ್ಮ ಜಿಲ್ಲೆಯ ಪ್ರತಿನಿಧಿ. ಕುಣಿಗಲು ತಾಲ್ಲೂಕಿನ ಅಭಿವೃದ್ಧಿಗಾಗಿ ಪ್ರಯತ್ನ ಮಾಡಬೇಕಾದ್ದು ರೆವೆನ್ಯೂ ಸಚಿವರ ಕರ್ತವ್ಯ, ಅದರಿಂದ ಘರ್ಷಣೆ ಬಂತು. ಇದು ಹುಟ್ಟಿ ಉರಿಯುವ ಮಾತು. ನಾಗಮಂಗಲ ತಾಲ್ಲೂಕಿಗೆ ನೀರಾವರಿ ಸೌಕರ್ಯ ಮಾಡಿಕೊಡಬೇಕೆಂದು ನಾನು ಹೇಳುವಾಗ ಕುಣಿಗಲು, ಗುಬ್ಬಿ ಮುಂತಾದ ಬೇರೆ ತಾಲ್ಲೂಕುಗಳಿಗೆ ಸೌಕರ್ಯ ಮಾಡಿಕೊಡಬಾರದು ಎಂಬುದು ನನ್ನ ಅಭಿಪ್ರಾಯವಲ್ಲ. ಆದರೆ ಮೊದಲು ನಾಗಮಂಗಲ ತಾಲ್ಲೂಕಿಗೆ ಸೌಕರ್ಯಮಾಡಿಕೊಟ್ಟು ನಂತರ ಬೇರೆ ತಾಲ್ಲೂಕಿಗೆ ನೀರನ್ನು ತೆಗೆದುಕೊಂಡು ಹೋಗಲಿ ಎಂಬುದು ನನ್ನ ಉದ್ದೇಶ. ಮೊದಲು ನಾಗಮಂಗಲ ತಾಲ್ಲೂಕಿಗೆ ಮಾತ್ರ ನೀರು ಸರಬರಾಜು ಮಾಡಲು ಯೋಚಿಸಿದರು ನಾಗಮಂಗಲ ತಾಲ್ಲೂಕನ್ನು ಮರೆಯಬೇಡಿ, ಅಲ್ಲಿಗೆ ಹೇಮಾವತಿ ಯೋಜನೆಯಿಂದ ನೀರನ್ನೊದಗಿಸಿದ ನಂತರ ಇತರ ತಾಲ್ಲೂಕುಗಳ ವಿಚಾರಮಾಡಿ. ಮಂಡ್ಯ ಮತ್ತು ಮದ್ದೂರು ತಾಲ್ಲೂಕುಗಳಲ್ಲೂ ಕೆಲವು ಬರಡು ಭೂಮಿಗಳಿವೆ. ದುದ್ದ ಹೋಬಳಿ ನೋಡಿ. ಕುಣಿಗಲು ತಾಲ್ಲೂಕಿನಲ್ಲಿ ಎಲ್ಲಾ ಕಡೆ ನೀರಾವರಿ ಸೌಲಭ್ಯ ಇದೆ.

ಶ್ರೀ ಎಸ್ ಹುಚ್ಚಮಾಸ್ತಿಗೌಡ.—ನೀವು ಒಂದು ಪ್ರಶ್ನೆ ಹಾಕಿದರೆ ನನ್ನ ಇಲಾಖೆಯಿಂದ ಅಂಕಿ ಅಂಶ ಕೊಡುತ್ತೇನೆ.—

ಶ್ರೀ ಎಚ್.ಟಿ. ಕೃಷ್ಣಪ್ಪ.—ನಾಗಮಂಗಲ ತಾಲ್ಲೂಕನ್ನು ಮರೆಯಬೇಡಿ. ಅಲ್ಲಿಗೆ ಹೇಮಾವತಿ ಯೋಜನೆಯಿಂದ ಮೊದಲು ನೀರನ್ನೊದಗಿಸಿ ನಂತರ ಬೇರೆ ಎಲ್ಲಿಗಾದರೂ ತೆಗೆದುಕೊಂಡು ಹೋಗಿ. ಹೇಮಾವತಿ ಯೋಜನೆಯ ನಕ್ಷೆ ಆಯಿತೆ, ವಗೈರೆ ಎಲ್ಲಾ ಮುಗಿದಮೇಲೆ ನಾಗಮಂಗಲ ತಾಲ್ಲೂಕಿಗೆ ನೀರು ಕೊಡುವ ವಿಚಾರ ಮಾತ್ರ ಚರ್ಚೆಯಾಯಿತು, ನಂತರ ಎರಡನೆಯ ಹಂತದಲ್ಲಿ ಕೊಡೋಣ ಎಂಬ ಅಭಿಪ್ರಾಯ ಬಂದು ಅಲ್ಲಿಗೆ ಅದು ನಿಂತಿತು. ತುಮಕೂರು ಜಿಲ್ಲೆಯವರು ಚೆನ್ನಾಗಿ ಬದುಕುತ್ತಿದ್ದಾರೆ. ಆದರೆ ನಮ್ಮಂಥ ಒಡವರ ಬಗ್ಗೆ ಏಕೆ ಹೊಟ್ಟೆಉರಿ? ನಾಗಮಂಗಲ ತಾಲ್ಲೂಕಿಗೆ ನೀರನ್ನು ಕೊಟ್ಟು ಎಷ್ಟು ಬೇಕಾದರೂ ಬೇರೆ ಕಡೆಗೆ ತೆಗೆದುಕೊಂಡು ಹೋಗಿ. ಮೊದಲು ಈ ರೀತಿ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಇನ್ನೊಂದು ವಿಚಾರ. ಮಂಗಳ ಜಲಾಶಯದಿಂದ ಮಾರ್ಕೋನಹಳ್ಳಿಗೆ ನೀರು ಕೊಡಲು ಅವಕಾಶವಿದೆ ಮಂಗಳ ಜಲಾಶಯದಿಂದ ಬೇಕಾದಷ್ಟು ಅವಕಾಶ ಇದೆ, ಜಲಾನಯನ ಭೂಮಿ ಹೆಚ್ಚಾಗಿದೆ. ಸುಲಭವಾಗಿ ನಾಗಮಂಗಲ ತಾಲೂಕಿಗೆ ಕೊಡಲು ಅವಕಾಶವಿದೆ ಇದನ್ನು ತೀವ್ರವಾಗಿ ಯೋಚನೆ ಮಾಡಿ, ಮಂಗಳಾ ನೀರು ಮಾರ್ಕೋನಹಳ್ಳಿಗೆ ಹೋಗುವುದು, ಅಲ್ಲಿಂದ ನಾಗಮಂಗಲಕ್ಕೆ ಹೋಗುವುದು ಒಂದೂವರೆ—ಎರಡು ಫರ್ಲಾಂಗ್ ದೂರ ಲಿಫ್ಟ್ ಮಾಡಿ. ಇಷ್ಟು ಹೇಳಿ ಬಹಳ ಕಾಲದಿಂದ ನೀರಾವರಿ ವಿಚಾರದಲ್ಲಿ ಉಪೇಕ್ಷಿಸಲ್ಪಟ್ಟಿರುವ ನಾಗಮಂಗಲ ತಾಲ್ಲೂಕಿನ ಕಡೆ ಸಂಪೂರ್ಣ ಲಕ್ಷ್ಯ ಕೊಡಬೇಕು ಹಾಗೆ ಕೊಡದೆ ಇದ್ದರೆ ಆ ಭಾಗದವರಿಗೆ ಬಹಳ ಅನ್ಯಾಯವಾಗುತ್ತದೆ ಎಂದು ತಿಳಿಸಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ).—ಸನ್ಮಾನ್ಯ ಅಧ್ಯಕ್ಷರೇ, ಸಭೆಯ ಮುಂದಿರುವ ಬೇಡಿಕೆಗಳನ್ನು ನಾನು ಅನುಮೋದಿಸುತ್ತೇನೆ. ಈ ಬಾರಿ ನೀರಾವರಿ ಕಾಮಗಾರಿಗಳಿಗೆ ಒದಗಿಸಿರುವ ಹಣ ಅದರಲ್ಲೂ ಮಲೆನಾಡಿಗೆ ಒದಗಿಸಿರುವ ಮೊಬಲಗು ಬಹಳ ಕಡಿಮೆ ಮಲೆನಾಡಿನಲ್ಲಿ ಸುಮಾರು ೪೦೦ ಇಂಚು ಮಳೆ ಬರುವುದು ಆದರೆ ಆ ನೀರಿನ ಸಹಾಯ ಮಲೆನಾಡಿಗೆ ಆಗುತ್ತಿಲ್ಲ. ಅದನ್ನು ಉಪಯೋಗಮಾಡಿಕೊಳ್ಳಲು ಅಣೆಕಟ್ಟು ಮತ್ತು ಪಿಕಪ್ಪುಗಳನ್ನು ಮಾಡಬೇಕು ಎಂದು ಹಿಂದೆಯೇ ಸರಕಾರಕ್ಕೆ ಅನೇಕ ಮನವಿಗಳನ್ನು ಸಲ್ಲಿಸಿದ್ದೇವೆ. ಕೆರೆ ನಾಲೆ ಪಿಕಪ್‌ಗಳ ಲಿಸ್ಟನ್ನು ಈಗಾಗಲೇ ಸರಕಾರಕ್ಕೆ ಕಳುಹಿಸಿರುತ್ತೇವೆ. ಆದರೂ ಕೂಡ ಆ ಬಗ್ಗೆ ಸಾಕಷ್ಟು ಲಕ್ಷ್ಯ ಕೊಡದೆ ಬಿದ್ದ ನೀರು ಅನ್ಯಾಯವಾಗುತ್ತದೆ. ಕೆರೆಕಟ್ಟೆಗಳಿಗೆ ಅದು ಹೋಗದೆ ಅದರಿಂದ ಪ್ರಯೋಜನವಾಗುತ್ತಿಲ್ಲ. ಹೆಚ್ಚಾಗಿ

(ಶ್ರೀ ಜಿ. ಪುಟ್ಟಸ್ವಾಮಿ)

ಅದು ಒಣಗಿಹೋಗುವುದರಿಂದ ಆಳವಾಗಿ ಬಾವಿ ತೋಡಿದರೂ ನೀರು ದೊರೆಯದು. ತೊಂದರೆಯಾಗಿದೆ ತೋಡಲು ಹೆಚ್ಚು ಖರ್ಚಾಗುತ್ತದೆ. ಇದರಿಂದ ಸರಕಾರಕ್ಕೂ ಹೊರೆಯಾಗುವುದು ಪಿಕಪ್ ಮತ್ತು ಅಣೆಕಟ್ಟೆಗಳನ್ನು ಕಟ್ಟಿಸಿದರೆ ಬಾವಿ ಆಳವಾಗಿ ತೆಗೆಯಬೇಕಾಗವುದಿಲ್ಲ. ನೀರು ಮೇಲೇ ದೊರೆಯುವುದು ಹೆಚ್ಚು ಹಣವು ಬಾವಿಗೆ ಬೇಕಾಗುವುದಿಲ್ಲ ಈ ಕಾರಣದಿಂದ ಹೆಚ್ಚು ನೀರಾವರಿ ಕಾರ್ಯಗಳಿಗೆ ಅದರಲ್ಲೂ ಸಣ್ಣ ನೀರಾವರಿಗೆ ಹೆಚ್ಚು ಹಣ ಒದಗಿಸಬೇಕೆಂದು ಒತ್ತಾಯಮಾಡುತ್ತೇನೆ ಮಳೆಯ ನೀರು ಪೋಲಾಗದಂತೆ ನೋಡಿಕೊಳ್ಳಬೇಕಾದುದ್ದು ಸರಕಾರದ ಕರ್ತವ್ಯ. ಸಣ್ಣಪುಟ್ಟ ಅಣೆಕಟ್ಟುಗಳನ್ನು ನಿರ್ಮಿಸಿದರೆ ಎರಡೂಮೂರು ಬೆಳೆ ತೆಗೆಯಬಹುದು. ಅನೇಕ ಕಡೆ ಕೋಟಿಗಟ್ಟಲೇ ಖರ್ಚಾದರೂ ೩೦ ವರ್ಷವಾದರೂ ಯೋಜನೆ ಪೂರ್ಣವಾಗದೆ ಹಣ ಒದಗಿಸಲು ತೊಂದರೆಯಾಗಿ ಮಧ್ಯ ಕೆಲಸ ನಿಲ್ಲುವ ಸಂಭವವಿರುವುದರಿಂದ ಅತ್ಯಲ್ಪ ಕಾಲದಲ್ಲಿ ಕಡಿಮೆ ಹಣದಿಂದ ದೈವದತ್ತವಾದ ನೀರನ್ನು ಉಪಯೋಗಿಸಿಕೊಂಡು ನೀರಾವರಿ ಕೆಲಸ ಮಾಡುವುದರಿಂದ ಆಹಾರ ಅಭಾವವೂ ನೀಗುವುದು ? ಅಲ್ಲದೆ ಇದರಿಂದ ೫—೧೦ ಎಕರೆ ಇರುವ ಸಣ್ಣ ಹಿಡುವಳಿದಾರರಿಗೂ ಅನುಕೂಲವಾಗುತ್ತದೆ ಈ ಕಾರಣದಿಂದ ಮಲೆನಾಡು ಭಾಗಕ್ಕೆ ಈ ಬಗ್ಗೆ ಹೆಚ್ಚು ಹಣ ಒದಗಿಸಬೇಕೆಂದು ಒತ್ತಾಯಮಾಡುತ್ತೇನೆ. ಈ ವಿಚಾರದಲ್ಲಿ ಶ್ರೀ ಕೆ. ಎಲ್. ರಾಯರವರಲ್ಲಿ ನಾನು ಚರ್ಚಿಸಿದ್ದೇನೆ ಮತ್ತು ತಜ್ಞರ ಅಭಿಪ್ರಾಯ ಕೂಡ ಸಹಾಯಕವಾಗಿದೆ ಪಿಕಪ್ ಮತ್ತು ಅಣೆಕಟ್ಟುಗಳನ್ನು ಕಟ್ಟಿದರೆ ಮಲೆನಾಡಿನಲ್ಲಿ ಬಾವಿಗಳನ್ನು ನೂರು ಅಡಿಗಳವರೆಗೆ ಅಂದರೆ ಬಹಳ ಆಳವಾಗಿ ತೆಗೆಯಬೇಕಾಗಿಲ್ಲ. ಪಿಕಪ್ ಮತ್ತು ಅಣೆಕಟ್ಟು ಕಟ್ಟಿದರೆ ಕಡಿಮೆ ಆಳದಲ್ಲಿ ನೀರು ದೊರೆಯುವುದು ಇರಿಗೇಷನ್ನಿಗೆ ಸಹಾಯವಾಗುವುದು. ಬೇಗ ನೀರು ಕಡಿಮೆ ಆಳದಲ್ಲಿ ದೊರೆತು ಕಡಿಮೆ ಖರ್ಚಿನಲ್ಲಿ ಕೆಲಸವಾಗುವುದರಿಂದ ಇದನ್ನು ವಿಚಾರ ಮಾಡಿ ಸರಕಾರ ಜಾತ್ರಿಗೆ ೧೯೬೪-೬೫ ನೆಯ ಸಾಲಿನ ಬಜೆಟ್ಟಿನಲ್ಲಿ ಹೆಚ್ಚು ಹಣ ಇದಕ್ಕೆ ಒದಗಿಸಿ ಆಹಾರದ ಅಭಾವ ನೀಗುವಂತೆ ಮಾಡಬೇಕು ಎಂದು ಒತ್ತಾಯಮಾಡುತ್ತೇನೆ. ಚಿಕ್ಕಮಗಳೂರು ತಾಲ್ಲೂಕು ಜಾಗರದ ಹತ್ತಿರವಿರುವ ಹೆಬ್ಬೆಹಳ್ಳದಿಂದ ನೀರನ್ನು ಚಿಕ್ಕಮಗಳೂರು ಟೌನ್‌ಗೂ ಮತ್ತು ವ್ಯವಸಾಯಕ್ಕೂ ಒದಗಿಸಬೇಕು. ಇಷ್ಟು ತಿಳಿಸಿ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣ ಮುಕ್ತಾಯಮಾಡುತ್ತೇನೆ.

[The Deputy Speaker in the Chair]

† ಶ್ರೀ ಎಚ್. ಜಿ ಚನ್ನಪ್ಪ (ಮಾಗಡಿ).—ಮಾನ್ಯ ಸಭಾಪತಿಗಳೇ ಈ ದಿವಸ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕಂಥ ನೀರಾವರಿ ಯೋಜನೆ ಏನಿದೆ, ಅದನ್ನು ನಾನು ಸ್ವಾಗತಿಸುತ್ತೇನೆ. ಈಗಾಗಲೇ ನಮ್ಮ ಮಾನ್ಯ ವಿರೋಧಪಕ್ಷದ ನಾಯಕರು ಕೂಡ ಈ ವಿಷಯದಲ್ಲಿ ಚೆನ್ನಾಗಿ ರೀತಿಯಲ್ಲಿ ಮಾತನಾಡಿದ್ದಾರೆ. ಈ ನೀರಾವರಿಗೆ ಕೊಟ್ಟಿರತಕ್ಕ ಹಣ ಏನಿದೆ ಅದು ನಿಜವಾಗಿಯೂ ಯಾವುದಕ್ಕೂ ಸಾಲತಕ್ಕದ್ದಲ್ಲ. ಇವತ್ತಿನ ದಿವಸ ದೇಶದಲ್ಲಿ ನಾವು ಏನಾದರೂ ಪ್ರಗತಿಯನ್ನು ಸಾಧಿಸ ಬೇಕು. ನಮ್ಮ ದೇಶವನ್ನು ಉನ್ನತ ಸ್ಥಿತಿಗೆ ಅಥವ ಉತ್ತಮ ಸ್ಥಿತಿಗೆ ತರಬೇಕಾದರೆ ನೀರಾವರಿ ಯೋಜನೆಯಲ್ಲದೆ ಬೇರೆ ಯಾವುದರಿಂದಲೂ ಸಾಧ್ಯವಿಲ್ಲ ಎಂದು ನಾನಾದರೂ ಭಾವಿಸಿಕೊಂಡಿದ್ದೇನೆ. ನೆರೆ ರಾಜ್ಯವಾದ ಮದರಾಸಿನಲ್ಲಿ ಆಹಾರದ ಕೊರತೆ ಇಲ್ಲ. ನಮಗಿಂತಲೂ ಉತ್ತಮವಾದ ರೀತಿಯಲ್ಲಿ ಆಹಾರದ ಅಭಾವವನ್ನು ಸಧಾರಿಸುತ್ತಾರೆ ಎಂದರೆ, ಅದು ಅಲ್ಲಿರತಕ್ಕ ನೀರಾವರಿ ಸೌಲಭ್ಯದಿಂದ ಆಗಿರತಕ್ಕದ್ದೇ ಹೊರತು ಬೇರೆ ಯಾವ ಕಾರಣವೂ ಇಲ್ಲ. ನಮ್ಮಲ್ಲಿ ಒಂದು ಕೆ. ಜಿ. ಅಕ್ಕಿಯನ್ನು ೨೬. ೩ ರೂಪಾಯಿಗೆ ಮಾರಾಟ ಮಾಡಿದರೆ ಅಲ್ಲಿ ೫ ಪಾವಿನ ಅಳತೆಗೆ ಒಂದೂವರೆ ರೂಪಾಯಿಗೆ ಮಾರಾಟ ಮಾಡುತ್ತಾರೆ. ಇದು ನಿಜವಾಗಿಯೂ ಶ್ಲಾಘನೀಯವಾದ ವಿಷಯ. ಅಲ್ಲಿ ಉತ್ಪತ್ತಿ ಜಾಸ್ತಿಯಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಸ್ವಾತಂತ್ರ್ಯ ಬಂದಮೇಲೆ ಹತ್ತಾರು ವರ್ಷಗಳಿಂದ ನಾವು ಅನೇಕ ಬೃಹದಾಕಾರ ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ಅನೇಕ ಕೆರೆಕಟ್ಟೆಗಳನ್ನು ಪ್ರಾಜೆಕ್ಟುಗಳನ್ನು ಕಟ್ಟಿದ್ದೇವೆ. ಶಂಕುಸ್ಥಾಪನೆ ಯಾಗಿದೆ, ಸಾಕಷ್ಟು ಹಣಕೊಟ್ಟು ಖರ್ಚುಮಾಡುತ್ತಿದ್ದೇವೆ ಆದರೆ ಪೂರ್ಣ ಯಶಸ್ವಿಯಾಗಿ ಕೆಲಸಮಾಡುವ ಸ್ಥಿತಿಗೆ ಇನ್ನೂ ಬಂದಿಲ್ಲ ಎಂದರೆ ನಿಜಕ್ಕೂ ಬಹಳ ಶೋಚನೀಯವಾದ ವಿಚಾರ ನಾವು ಹಾಕತಕ್ಕ ಕಾರ್ಯಕ್ರಮ ಯಶಸ್ವಿಯಾಗದೇ ಹೋದರೆ ನಿಜವಾಗಿಯೂ ಅದರ ಮೇಲೆ ಹಾಕಿರತಕ್ಕ ಹಣ ಕೂಡ ಎಷ್ಟೋ ದುರುಪಯೋಗವಾಗುತ್ತದೆ. ಆದರಿಂದ ಯಾವ ವಿಧವಾದ ಅನುಕೂಲ ಬಾರದೇ ಹೋದರೆ ದೇಶದ ಆರ್ಥಿಕ ಪರಿಸ್ಥಿತಿಗೆ ಧಕ್ಕೆ ಬರುತ್ತದೆ ಎಂದು ಹೇಳಿದರೆ ತಪ್ಪಾಗಲಾರದು, ನಾವು ಈಗಾಗಲೇ ೨–೩ ವರ್ಷಗಳಿಂದ ಅನೇಕ ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು

ಶುರುಮಾಡಿದ್ದೇವೆ. ಆದರೆ ಸಂಸ್ಥಾಪನೆ ಇನ್‌ವೆಸ್ಟಿಗೇಷನ್‌ನಲ್ಲೇ ಕಾಲ ಕಳೆಯುತ್ತಿದೆಯೋ ಹೊರತು ಕಾರ್ಯಗತವಾಗಿಲ್ಲ. ಇದು ಸಾಧ್ಯತೆ ಇದೆಯೋ ಇಲ್ಲವೇ ಎಂದು ಯಾವುದಾದರೂ ನಿರ್ಣಯಕ್ಕೆ ಬಂದು ಪ್ರಾಜೆಕ್ಟನ್ನು ಕೈಬಿಡಬೇಕು ಇಲ್ಲವೇ ಪೂರ್ಣಗೊಳಿಸಿ ಜನತೆಗೆ ಸಹಾಯವಾಗುವ ರೀತಿಯಲ್ಲಿ ಮಾಡಬೇಕು, ಕೇವಲ ಇನ್‌ವೆಸ್ಟಿಗೇಷನ್‌ಗೆ ಲಕ್ಷಾಂತರ ರೂಪಾಯಿ ಖರ್ಚುಮಾಡಿ, ಅದು ದುರುಪಯೋಗವಾಗುವುದಕ್ಕೆ ಅವಕಾಶ ಕೊಡಬಾರದು ಎಂದು ನಾನಾದರೂ ಈ ಸಂದರ್ಭದ ಕೇಳಿಕೊಳ್ಳುತ್ತೇನೆ. ಮತ್ತು ದೇಶದಲ್ಲಿರತಕ್ಕ ಮೇಜರ್ ಇರಿಗೇಷನ್ ಮತ್ತು ಮೀಡಿಯಂ ಇರಿಗೇಷನ್ನಿಗೆ ಎಷ್ಟು ಪ್ರಾಮುಖ್ಯತೆಯನ್ನು ಕೊಡಬೇಕು ಎಂದು ಅರ್ಥಮಾಡಿಕೊಂಡಿದ್ದೇವೋ ಅದಕ್ಕಿಂತಲೂ ಹೆಚ್ಚು ಪ್ರಾಮುಖ್ಯತೆಯನ್ನು ಮೈನರ್ ಇರಿಗೇಷನ್ನಿಗೆ ಕೊಡದೇ ಹೋದರೆ, ದೇಶದಲ್ಲಿರತಕ್ಕ ಆಹಾರದ ಕೊರತೆ ಏನಿದೆ ಅದನ್ನು ನೀಗುವುದಕ್ಕೆ ಸಾಧ್ಯವಾಗುವುದಿಲ್ಲ. ದೇಶದಲ್ಲಿ ಒಂದು ಕಡೆ ಮೇಜರ್ ಪ್ರಾಜೆಕ್ಟ್ ಕಟ್ಟಿದರೆ ಕೆಲವು ತಾಲ್ಲೂಕುಗಳಿಗೆ ಅನುಕೂಲವಾಗುತ್ತದೆ. ಮೇಜರ್ ಇರಿಗೇಷನ್‌ಗೆ ಹೆಚ್ಚಿನ ಆದ್ಯತೆ ಕೊಟ್ಟರೆ ದೇಶದಲ್ಲಿರುವ ಆಹಾರದ ಕೊರತೆಯನ್ನು ನೀಗುವುದಕ್ಕೆ ಸಹಾಯವಾಗುತ್ತದೆ ದೇಶದಲ್ಲಿ ಹೊರಟು ಹೋಗುವ ನೀರನ್ನು ಬಿಡುವ ಬದಲು ಅದಕ್ಕೆ ಒಂದು ಸರ್ವೆ ಡಿಪಾರ್ಟ್‌ಮೆಂಟನ್ನು ನಿರ್ಮಾಣ ಮಾಡಿ, ಸರ್ವೆಮಾಡಿ, ಅಲ್ಲಲ್ಲೇ ಅಣೆಗಳನ್ನು ಕಟ್ಟುವುದಕ್ಕೆ ಸಾಧ್ಯವಿದೆ, ಲಿಫ್ಟ್ ಇರಿಗೇಷನ್ ಪ್ರಾಜೆಕ್ಟ್ ಹಾಕುವುದಕ್ಕೆ ಸಾಧ್ಯವಿದೆ ಎಲ್ಲೆಲ್ಲಿ ಸಣ್ಣ ಸಣ್ಣ ಟ್ಯಾಪ್ ಮಾಡುವುದಕ್ಕೆ ಸಾಧ್ಯವಿದೆಯೋ ಅಲ್ಲಿ ಸರ್ವೆ ಮಾಡಿ ತಕ್ಷಣ ಕಾರ್ಯಗತಮಾಡಿದರೆ ಜನಗಳು ಸಂತೋಷಪಡುತ್ತಾರೆ ಇದರಿಂದ ದೇಶಕ್ಕೆ ಹೆಚ್ಚಿನ ಒಂದು ಸಂಪತ್ತು ದೊರೆತಂತಾಗುತ್ತದೆ. ಇದನ್ನು ಕಾರ್ಯಗತ ಮಾಡದೇ ಹೋದರೆ ನಿಜವಾಗಿಯೂ ನಮ್ಮ ಕಾರ್ಯಯೋಜನೆಗಳೆಲ್ಲಾ ಕಾರ್ಯಗತವಾಗದೆ ಬರೀ ಪೇಪರಿನಲ್ಲೇ ಉಳಿದು ಹೇಳಿಕೊಳ್ಳುವುದರಲ್ಲೇ ನಿವೃತ್ತಿಯಾಗುವ ಸ್ಥಿತಿಗೆ ಬರುತ್ತದೆ. ಇದು ಕಾರ್ಯಗತವಾಗಬೇಕು. ಎಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ. ಮತ್ತು ಕ್ಯಾಚ್‌ಮೆಂಟ್ ಏರಿಯಾ ಕೆಲವು ಪ್ರದೇಶದಲ್ಲಿ ಕೆರೆಕಟ್ಟೆಗಳನ್ನು ಕಟ್ಟಿ ಕ್ಯಾಚ್‌ಮೆಂಟ್ ನಿರ್ಮಾಣವಾಗಿರತಕ್ಕ ಪ್ರದೇಶದಲ್ಲಿ ಯಾವವಿಧವಾದ ನೀರಾವರಿ ಸೌಲಭ್ಯ ಒದಗಿಸದೇ ಅದು ಬರಡು ಭೂಮಿ, ಮರುಭೂಮಿಯಾಗಿ ಉಳಿದುಕೊಂಡಿದೆಯೆಂದು ಹೇಳಿದರೆ ತಪ್ಪಾಗಲಾರದು. ಉದಾಹರಣೆಗೆ ಮಾಗಡಿ ತಾಲ್ಲೂಕನ್ನು ತೆಗೆದುಕೊಳ್ಳುವುದಾದರೆ, ಅಲ್ಲಿ ಯಾವ ವಿಧವಾದ ನೀರಾವರಿ ಯೋಜನೆ ಮಾಡುವುದಕ್ಕೆ ಅವಕಾಶವಿಲ್ಲ. ಮುಳುಗಡೆಯಾಗಿದೆ. ತಿಪ್ಪಗೊಂಡನ ಹಳ್ಳಿ ಜಲಾಶಯ ಕಟ್ಟಿ ಬೆಂಗಳೂರಿಗೆ ನೀರು ಒದಗಿಸುತ್ತಾರೆ. ಕಾವೇರಿ ಮೇಲ್ದಂಡೆಯಲ್ಲಿ ಯಾವ ವಿಧವಾದ ಜಲಾಶಯ ಟ್ಯಾಪ್ ಮಾಡಕೂಡದು ನೀರನ್ನು ಎತ್ತ ಕೂಡದು ಎಂದು ನಿರ್ಬಂಧ ಇದೆ. ಕಣ್ವ ಜಲಾಶಯದ ಮೇಲ್ಭಾಗದಲ್ಲಿ ಕೂಡ ಯಾವ ಒಂದು ನೀರಾವರಿ ಸೌಲಭ್ಯ ಮಾಡಿಕೊಳ್ಳಕೂಡದು ಎನ್ನತಕ್ಕ ಕಟ್ಟಪ್ಪಣೆ ನಮ್ಮ ತಾಲ್ಲೂಕಿನಲ್ಲಿ ನಡೆದುಕೊಂಡು ಬಂದಿವೆ. ಸರ್ಕಾರದವರು ಇದನ್ನು ಹೋಗಲಾಡಿಸಿ ಜನತೆಗೆ ಮುಕ್ತಿ ದೊರೆಯಬೇಕು. ಅವರಿಗೆ ಸೌಲಭ್ಯವಾಗುವಂತೆ ದೊಡ್ಡ ದೊಡ್ಡ ಕೆರೆಕಟ್ಟೆಗಳನ್ನು ಕಟ್ಟುವುದಕ್ಕೆ ಸಾಧ್ಯತೆ ಇಲ್ಲದೇ ಇದ್ದರೂ ಕೂಡ ಎಲ್ಲಿ ಲಿಫ್ಟ್ ಇರಿಗೇಷನ್ ಹಾಕಿ ಹೆಚ್ಚಿನಮಟ್ಟದಷ್ಟು ನೀರಾವರಿ ಒದಗಿಸುವುದಕ್ಕೆ ಸಾಧ್ಯತೆ ಇದೆ ಎನ್ನುವುದನ್ನು ಆಲೋಚನೆ ಮಾಡಿ, ತಕ್ಷಣ ಸರ್ವೆ ಮಾಡಿಸಿ, ನೀರಾವರಿ ಒದಗಿಸದೇ ಹೋದರೆ, ಜನತೆ ನಿಜವಾಗಿಯೂ ಕಷ್ಟದಲ್ಲಿ ಕೋಲುತ್ತಾ ಇರುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಎಲ್ಲೆಲ್ಲಿ ಪ್ರಾಜೆಕ್ಟ್‌ಗಳನ್ನು ಕಟ್ಟುವುದಕ್ಕೆ ಸಾಧ್ಯತೆ ಇದೆ. ಎಂದು ಕಳುಹಿಸಿಕೊಟ್ಟಿದ್ದಾರೆ. ಅದರ ಬಗ್ಗೆ ತಜ್ಞ ಇಂಜನಿಯರುಗಳು ಜಾಗ್ರತೆಯಾಗಿ ಗಮನ ಹರಿಸಿ ಸರ್ವೆಮಾಡಿ, ಎಲ್ಲೆಲ್ಲಿ ಸಾಧ್ಯವಿದೆಯೋ ಅಂಥ ಕಡೆ ತಕ್ಷಣ ಲಿಫ್ಟ್ ಇರಿಗೇಷನ್ ಪ್ರಾಜೆಕ್ಟ್ ಹಾಕಿ ಜನತೆ ಕ್ಷಾಮದ ದವಡೆಯಿಂದ ನಿವೃತ್ತಿಯಾಗಿ ಅವರು ಕೂಡ ಬೆಳೆಯನ್ನು ಬೆಳೆದು ಜೀವನ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಈ ಸಂದರ್ಭದಲ್ಲಿ ನಾನಾದರೂ ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತು ಕಾವೇರಿ ವಾಟರ್ ಸಪ್ಲೈ ಕಂಪ್ಲೀಟ್ ಆಗಿ ಬೆಂಗಳೂರಿನಿಂದ ನೀರು ಸರಬರಾಯಿ ಯೋಜನೆ ಪೂರ್ಣವಾದ ಮೇಲೆ ತಿಪ್ಪಗೊಂಡನಹಳ್ಳಿ ಜಲಾಶಯದ ನೀರನ್ನು ವ್ಯವಸಾಯಕ್ಕೆ ಉಪಯೋಗ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ ಎಂದು ಹಿಂದೆ ಇದ್ದ ಮುಖ್ಯಮಂತ್ರಿಗಳು ವಾಗ್ದಾನ ಮಾಡಿದ್ದರು. ಈಗಿರತಕ್ಕ ಮಂತ್ರಿಗಳು ಇವನ್ನು ಯೋಚನೆ ಮಾಡಿ, ಆ ಒಂದು ಸೌಲಭ್ಯವನ್ನು ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಕಾವೇರಿ ಬಹಳ ದೊಡ್ಡ ಹೊಳೆ. ಅದರಿಂದ ಎಷ್ಟು ನೀರನ್ನು ಬೇಕಾದರೂ ಬೆಂಗಳೂರಿಗೆ ಸಪ್ಲೈ ಮಾಡಿಕೊಳ್ಳಬಹುದು, ಯಾವ ವಿಧವಾದ ಅಭಾವ ಬರುವುದಿಲ್ಲ. ಆದುದರಿಂದ ತಿಪ್ಪಗೊಂಡನಹಳ್ಳಿ ಜಲಾಶಯದ ನೀರನ್ನು ವ್ಯವಸಾಯಕ್ಕೆ ಉಪಯೋಗ ಮಾಡುವುದಕ್ಕೆ ಅವಕಾಶ ಮಾಡಿ ಕೊಟ್ಟರೆ ೨೫ ಸಾವಿರ ಎಕರೆಯಷ್ಟಕ್ಕೆ ನೀರಾವರಿ ಸೌಲಭ್ಯವಾಗುತ್ತದೆ. ಇದನ್ನು ಮಾಡಿಕೊಡುತ್ತೇವೆಂದು ಹಿಂದೆ ಇದ್ದ ಸರ್ಕಾರ ಆಶ್ವಾಸನೆ ಕೊಟ್ಟಿದ್ದನ್ನು ತಾವು ಈಡೇರಿಸಿ ಕೊಡಬೇಕು ಎಂದು ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಇನ್ನು ಕುಂಚನಬೆಲೆ ಜಲಾಶಯದ ಬಗ್ಗೆ ಹೇಳಬೇಕಾಗಿದೆ ನಮ್ಮ ತಾಲ್ಲೂಕಿನ

(ಶ್ರೀ ಹೆಚ್. ಜಿ. ಚನ್ನಪ್ಪ)

ದೌರ್ಭಾಗ್ಯ. ಯಾವ ಜಲಾಶಯ ಕಟ್ಟಲಿ ನಾವು ಮೇಲ್ದಂಡೆಗೆ ಸೇರಿಕೊಳ್ಳುತ್ತೇವೆ. ಜಮೀನು ಮುಳುಗಡೆ ಬರುತ್ತದೆ. ಯಾವ ವಿಧವಾದ ಪ್ರಯೋಜನ ಅದರಿಂದ ಆಗುತ್ತಾ ಇಲ್ಲ. ಹಿಂದೆ ಮಂಚನಬೆಲೆ ಯೋಜನೆಯನ್ನು ಸರ್ವೆ ಮಾಡುವ ಟೈಮಿನಲ್ಲಿ ಅದರ ಪಕ್ಕದಲ್ಲಿ ಒಂದು ಜಮೀನನ್ನು ಚುನಾಯಿಸಿ ಕೊಂಡಿದ್ದರು ಅದು ಸುಮಾರು ೧-೧½ ಮೈಲಿ ದೂರದಲ್ಲಿ ರಾಮನಗುಂಡು ಪ್ರದೇಶದಲ್ಲಿದೆ. ಅಲ್ಲಿ ಜಲಾಶಯ ಕಟ್ಟಿದರೆ ಒಂದು ಸಾವಿರ ಎಕರೆ ಅಚ್ಚುಕಟ್ಟು ಬರುತ್ತದೆ. ಮುಳುಗಡೆಯಾಗತಕ್ಕದ್ದು ಕೇವಲ ಸರ್ಕಾರಕ್ಕೆ ಸೇರಿದಂಥ ಫಾರೆಸ್ಟ್ ಮತ್ತು ಗೋಮಾಳಗಳ ಪ್ರದೇಶ, ಯಾವ ಹಳ್ಳಿಯೂ ಮುಳುಗಡೆಗೆಬರುವುದಿಲ್ಲ. ಈ ವಿಷಯದಲ್ಲಿ ರೆವಿನ್ಯೂ ಮಂತ್ರಿಗಳಾದ ಶ್ರೀಮಾನ್ ಹುಚ್ಚಮಾಸ್ತಿಗೌಡರು ಆಗ ಹೋರಾಟ ಮಾಡಿದ್ದರು. ಜಲಾಶಯವನ್ನು ರಾಮಗುಂಡು ಹತ್ತಿರ ಕಟ್ಟುವುದು ಸರಿ ಎಂದು ಈ ಸಂದರ್ಭದಲ್ಲಿ ಜ್ಞಾಪಕಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇವತ್ತೂ ಕೂಡ ಸೈಟಿಗೆ ಕಾಲಿ ಮೀಟಿ ಹೋಗಿಲ್ಲ. ಶ್ರೀ ಮುಗ್ದುಂ ಅವರ ಜೊತೆಯಲ್ಲಿ ಚೀಫ್ ಇಂಜಿನಿಯರ್ ಭಟ್ಟರು ಅಲ್ಲಿಗೆ ಬಂದು ಪರೀಕ್ಷೆಮಾಡಿ, ಫೀಸಿಬಿಲಿಟಿ ಇದೆ ಎಂದು ಹೇಳಿದ್ದು ನನಗೆ ಜ್ಞಾಪಕ ಇದೆ. ಆದುದರಿಂದ ಈ ಪುನರ್‌ಪರಿಶೀಲನೆಮಾಡಿ ಆ ಜಾಗದಲ್ಲಿ ಜಲಾಶಯ ನಿರ್ಮಾಣ ಮಾಡುವುದರಿಂದ ಅಲ್ಲಿನ ಜನರಿಗೆ ಅಲ್ಲಿ ಕೂಲತೆ ಮಾಡಿಕೊಟ್ಟ ಹಾಗಾಗುತ್ತದೆ. ಅಲ್ಲಿ ಜಲಾಶಯ ಕಟ್ಟುವುದಕ್ಕೆ ನಾವು ಅಡ್ಡಿಬರುತ್ತಾ ಇಲ್ಲ. ಈ ವಿಷಯವನ್ನು ಮಾನ್ಯ ಮಂತ್ರಿಗಳು ಗಮನಕ್ಕೆ ತೆಗೆದುಕೊಂಡು ಪುನರ್‌ಪರಿಶೀಲನೆಮಾಡಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

6-00 P. M.

ಮಾಗಡಿ ತಲ್ಲೋಕು ಕ್ಯಾಚ್‌ಮೆಂಟ್ ಏರಿಯದಲ್ಲೂ ಕೂಡ ನೀರಾವರಿ ಸೌಲಭ್ಯ ಆಗುವುದಕ್ಕೆ ಯಾವುದಾದರೂ ರೀತಿಯಲ್ಲಿ ಒಂದು ತಜ್ಞರ ಸಮಿತಿಯನ್ನು ಏರ್ಪಾಡು ಮಾಡಿ ಎಲೆಕ್ಟ್ರಿಕ್ ಲಿಫ್ಟ್ ಇರಿಗೇಷನ್ ಮೇಲೆ ಸಣ್ಣ ಸಣ್ಣ ಪಿಕ್ ಅಪ್ ಮಾಡಿಕೊಂಡು ನೀರನ್ನು ಹಾಯಿಸಿಕೊಳ್ಳುವುದಕ್ಕೆ ಸಾಧ್ಯತೆ ಇದೆ ಅಲ್ಲಿ ನೀರಾವರಿ ಸೌಲಭ್ಯ ಮಾಡಿಕೊಡಬೇಕು. ಎಂದು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ನಾನು ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಲ್ಲದೇಹೋದರೆ ಸತತ ಬರಗಾಲ ಆಗುವುದಕ್ಕೆ ಯಾವ ವಿಧವಾದ ಸಂದೇಹ ಇಲ್ಲ. ಸುಮಾರು ೧೯೬೨ನೇ ಇಸವಿಯಲ್ಲಿ ನಾವು ರಾಗಿ ಬೆಳೆ ಕಂಡಿದ್ದು ಇವೊತ್ತಿನವರೆಗೂ ಒಂದಲ್ಲ ಒಂದು ರೀತಿ ಕಷ್ಟ ಅನುಭವಿಸಿಕೊಂಡು ಬಂದಿದ್ದೇವೆ. ಈ ಕಷ್ಟವನ್ನು ಸರ್ಕಾರದ ಮುಂದೆ ಹೇಳದೆ ಹೋದರೆ ಜನತೆಗೆ ಅನ್ಯಾಯ ಮಾಡಿದಂತಾಗುತ್ತದೆ. ಮೇಜರ್ ಪ್ರಾಜೆಕ್ಟ್ ಮಾಡುವುದಕ್ಕೆ ನನ್ನ ಅಭ್ಯಂತರ ಇಲ್ಲ. ಆದರೆ ಅಷ್ಟೇ ಆದ್ಯತೆಯನ್ನು ಮೈನರ್ ಇರಿಗೇಷನ್ನಿಗೂ ಕೂಡ ಕೊಟ್ಟು ಎಲ್ಲೆಲ್ಲಿ ಕ್ಯಾಚ್‌ಮೆಂಟ್ ಏರಿಯಾ ಬರುತ್ತದೆ ಅಂಥ ಕಡೆ ಜಾಗ್ರತೆ ನೀರಾವರಿ ಸೌಲಭ್ಯ ಒದಗಿಸಿಕೊಡಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ವಿದ್ಯುಚ್ಛಕ್ತಿ ವಿಷಯವಾಗಿ ಒಂದೆರಡು ವಿಷಯಗಳನ್ನು ಹೇಳ ಬಯಸುತ್ತೇನೆ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಲ್ಲಿ ಲೋನ್ ಮಂಜೂರಾಗಿ ಪಂಪುಸೆಟ್ಟುಗಳು ಸ್ಯಾಂಕ್ಷನ್ ಆಗಿದೆ ಪಂಪುಸೆಟ್ಟುಗಳನ್ನು ತೆಗೆದುಕೊಂಡು ಹೋಗಿ ವೈರಿಂಗ್ ಮಾಡಿ ಎಲ್ಲಾ ಸಿದ್ಧವಾಗಿದ್ದರೂ ಕೂಡ ರೆವರಿ ಬರದು ಸಪ್ಲೈ ಕೊಟ್ಟಿಲ್ಲ. ಅದು ಏನು ಎಂದು ಅರ್ಥವಾಗುತ್ತಾ ಇಲ್ಲ. ಬ್ಯಾಂಕಿನವರು ಒಂದು ಲೋನ್ ಡಿಮ್ಯಾಂಡ್ ಮಾಡುತ್ತಾ ಇದ್ದಾರೆ ಬಡ್ಡಿ ಸಮೇತ ಹಣ ವಾಪಸ್ಸು ಕೇಳುತ್ತಿದ್ದಾರೆ ಇಂತಹ ನೂರಾರು ಸಮಸ್ಯೆಗಳು ತಾಲ್ಲೂಕುಗಳಲ್ಲಿ ಇದೆ. ಹಿಂದೆ ಕರೆಂಟ್ ಸ್ಯಾಂಕ್ಷನ್ ಆಗಿರತಕ್ಕಂಥವರಿಗೆ ಸಪ್ಲೈ ಕೊಟ್ಟಿಲ್ಲ ನೆನ್ನೆ ಮೊನ್ನೆ ಕರೆಂಟ್ ಸ್ಯಾಂಕ್ಷನ್ ಆಗದೆ ಇದ್ದವರಿಗೆ ಸಪ್ಲೈ ಕೊಟ್ಟಿದ್ದಾರೆ. ಇದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕು ಅಂತಹ ಅಧಿಕಾರಿಗಳ ಮೇಲೆ ಸೂಕ್ತವಾದ ಕ್ರಮ ತೆಗೆದು ಕೊಳ್ಳದೇ ಹೋದರೆ ಇಂತಹ ಅನ್ಯಾಯವನ್ನು ತಡೆಗಟ್ಟುವುದಕ್ಕೆ ಸಾಧ್ಯವಿಲ್ಲ. ಇವೊತ್ತಿನ ದಿವಸ ಬೋರ್ಡ್ ಆಗಿರುವುದರಿಂದ ಸರ್ಕಾರದವರು ನಮ್ಮನ್ನು ಏನು ಮಾಡುವುದಕ್ಕಾಗುವುದಿಲ್ಲ. ನಾವು ನೇರವಾಗಿ ಬೋರ್ಡಿನ ಅಧೀನದಲ್ಲಿರತಕ್ಕವರು ಎನ್ನುವ ಒಂದು ಮನೋಭಾವನೆ ಅವರಿಗೆ ಇದೆ.

ಶ್ರೀ ಹೆಚ್. ಡಿ. ದೇವೇಗೌಡ — ನಿಮ್ಮ ಊರಿನವರೇ ಬೋರ್ಡ್ ಮೆಂಬರು ಆಗಿದ್ದಾರೆ.

ಶ್ರೀ ಹೆಚ್. ಜಿ. ಚನ್ನಪ್ಪ — ಇವೊತ್ತು ಬೋರ್ಡ್ ಮೆಂಬರ್ ಆದ ತಕ್ಷಣ ಸಮಸ್ಯೆ ಬಗೆಹರಿ ಯುತ್ತದೆಯೆ ? ಈ ಬೋರ್ಡಿನ ಮೇಲೆ ಕಾನೂನು ಇಟ್ಟುಕೊಂಡು ಎಲ್ಲಿ ತಪ್ಪು ಇದೆ ಅಲ್ಲಿ ಸರಿಪಡಿ ಸದೆ ಹೋದರೆ ರೈತನು ತೊಂದರೆಗೆ ಸಿಕ್ಕಬೇಕಾಗುತ್ತದೆ. ಎಲ್ಲಿ ತಪ್ಪು ಇದೆ ಅದನ್ನು ಸರಿಪಡಿಸ

ಯಾರು ಯಾರು ಪಂಪ್‌ಸೆಟ್ಟುಗಳನ್ನು ಹಾಕಿಕೊಂಡಿದ್ದಾರೆಯೋ ಅವರಿಗೆ ಜಾಗ್ರತೆ ಸರ್ವೀಸ್ ಕೊಡಬೇಕು. ಎಲ್ಲೆಲ್ಲಿ ಪಂಪ್‌ಸೆಟ್ಟುಗಳಿಗೆ ಕಂಪ್ಲೀಷನ್ ರಿಪೋರ್ಟ್ ಬಂದಿದೆ ಅಂತವರಿಗೆ ಆದ್ಯತೆಯನ್ನು ಕೊಡಬೇಕು. ಯಾರು ಮೊದಲು ಅರ್ಜಿಗಳನ್ನು ಹಾಕಿಕೊಂಡಿದ್ದಾರೋ ಪ್ರಯಾರಿಟಿ ಲಿಸ್ಟ್ ಮಾಡಿಕೊಂಡು ಕೊಡಬೇಕೇ ಹೊರತು ಮೊದಲು ಬಂದವರಿಗೆ ಅವಕಾಶ ಕೊಡದೆ ಕೊನೆಗೆ ಬಂದವರಿಗೆ ಅವಕಾಶ ಕೊಡುವುದು ಯಾವ ಧರ್ಮ ? ಸಂಬಂಧಪಟ್ಟವರು ಇದನ್ನು ಪರಿಶೀಲನೆಮಾಡಿ ಇದಕ್ಕೆ ಹೆಚ್ಚಿನ ಗಮನ ಕೊಟ್ಟು ಒಂದೆರಡು ಎಕರೆ ಸಾಗುವಳಿಮಾಡುವುದಕ್ಕೆ ಅವಕಾಶ ಮಾಡಿಕೊಟ್ಟು ಬೆಳೆಯನ್ನು ಬೆಳೆಯುವುದಕ್ಕೆ ಅವಕಾಶ ಮಾಡಿಕೊಟ್ಟು ಇದರ ಬಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಬೋರ್ಡ್ ಆಗಿರಲಿ ಏನೇ ಆಗಿರಲಿ ಅದರ ಮೇಲೆ ಸರ್ಕಾರದ ಅಧಿಕಾರ ಇರಬೇಕು. ಸ್ವೇಚ್ಛೆಯಾಗಿ ಬಿಡಬಾರದು ಎಂದು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇನ್ನೂ ಇಲ್ಲಿ ಹೆಚ್ಚಿಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ ಎಷ್ಟು ಮೇಜರ್ ಇರಿಗೇಷನ್ ಮುಖ್ಯವೋ ದೇಶಕ್ಕೆ ಅಷ್ಟೇ ಮೈನರ್ ಇರಿಗೇಷನ್ ಮುಖ್ಯ ಎಂದು ಹೇಳುತ್ತೇನೆ. ಹೇಮಾವತಿ ಪ್ರಾಜೆಕ್ಟ್ ಅಣೆಕಟ್ಟಿನಿಂದ ಬೆಂಗಳೂರು ದಕ್ಷಿಣ ತಾಲ್ಲೂಕು ನೀರಿನ ಯೋಜನೆ ಸಾಧ್ಯತೆ ಇದೆ ಎಂದು ಹಿಂದೆ ಸರ್ಕಾರದವರು ಮತ್ತು ಸಂಬಂಧಪಟ್ಟ ಮಂತ್ರಿಗಳು ಹೇಳುತ್ತಾ ಇದ್ದರು. ಈಗಲೂ ಕೂಡ ಸರ್ವೆ ಆಗಿದೆ ಅದೇ ರೀತಿ ಯೋಜನೆ ಅಳವಡಿಸಿ ಮಧ್ಯೆ ಸಿಕ್ಕತಕ್ಕಂಥ ಮಾಗಡಿ ಮತ್ತು ನೆಲಮಂಗಲ ಕ್ಯಾಚ್‌ಮೆಂಟ್ ಏರಿಯಾಕ್ಕೆ ನೀರಾವರಿ ಸೌಲಭ್ಯ ಒದಗಿಸಬೇಕು, ನಾಗಮಂಗಲ ತಾಲ್ಲೂಕು ಒಂದು ಸಮಸ್ಯೆ ಆದರೆ ಮಾಗಡಿ ತಾಲ್ಲೂಕು ಇನ್ನೊಂದು ಸಮಸ್ಯೆ ಇದೆ. ತಾಲ್ಲೂಕಿನಲ್ಲಿ ಯಾವುದಾದರೂ ಒಂದು ರೀತಿ ನೀರಿನ ಸೌಲಭ್ಯ ಒದಗಿಸುವುದಕ್ಕೆ ಅವಕಾಶ ಮಾಡಿಕೊಡಬೇಕು ಅಲ್ಲಿ ಜನತೆಗೆ ಸಂತೋಷ ಜೀವನ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕು ಎಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನೀರಾವರಿ ಯೋಜನೆಗೆ ಒದಗಿಸಿದ ಹಣ ಸಾಲುವುದಿಲ್ಲ. ದೇಶದಲ್ಲಿ ಅನೇಕ ಸಮಸ್ಯೆಗಳಿವೆ ಮೊದಲು ಅನ್ನದ ಸಮಸ್ಯೆ ಬಗೆಹರಿಸುವುದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು ಅದು ಸರಿಹೋದರೆ ಎಲ್ಲಾ ಪ್ರಾಬ್ಲಮ್ಸ್ ಸರಿಹೋದಂತಾಗುತ್ತದೆ ಎಂದು ಹೇಳಬಯಸುತ್ತೇನೆ. ಈ ದಿವಸ ನಮ್ಮ ಕೆರೆಗಳು ಏನು ಇವೆ ಅದರಲ್ಲಿರತಕ್ಕ ನೀರನ್ನು ಸದ್ವಿನಿಯೋಗ ಮಾಡಿಕೊಳ್ಳದೆ. ದುರ್ವಿನಿಯೋಗವಾಗಿ ಅನೇಕ ಜಮೀನಿಗೆ ನೀರು ಸಿಕ್ಕದೆ ಹಾಳಾಗಿ ಹೋಗುತ್ತಾ ಇದೆ. ಇವೊತ್ತಿನ ದಿವಸ ಮದ್ರಾಸಿನಲ್ಲಿ ಪ್ರಾಜೆಕ್ಟ್ ಇಂಜಿನಿಯರ್ ಚಿನ್ನವನ್ನು ಯಾವರೀತಿ ಬಳಸುತ್ತಾರೆ ಆ ರೀತಿ ನೀರನ್ನು ಬಳಸುತ್ತಾ ಇರತಕ್ಕದ್ದನ್ನು ನೋಡಿದೆ. ಕೆರೆಗಳ ನೀರು ಅರ್ಧ ನೀರು ವ್ಯವಸಾಯಕ್ಕೆ ಬೇಕಾದರೆ ಹೆಚ್ಚು ನೀರು ಪೋಲು ಆಗುತ್ತಾ ಇದೆ. ಅಲ್ಲಿ ರಾಯಕಾವಲುಗಳು ಇದೆ. ಅಲ್ಲಿ ಸಿಕ್ಕಾಪಟ್ಟೆ ಒತ್ತರಿಸಿಕೊಂಡು ಉಳುಮೆ ಮಾಡುತ್ತಾರೆ. ಆದ್ದರಿಂದ ನೀರು ಪೋಲಾಗುತ್ತಾ ಇದೆ, ರಾಯಕಾವಲು ಸರಿ ಮಾಡಿದರೆ ಹೆಚ್ಚಿನ ಭೂಮಿ ಸಾಗುವಳಿಗೆ ಬರುತ್ತದೆ. ಸರ್ಕಾರ ಸೌಡಿಗಳನ್ನು ನೇಮಕ ಮಾಡಿದ್ದಾರೆ. ಒಂದು ಕೆರೆಗೆ ಒಬ್ಬ ಸೌಡಿ ಇಲ್ಲ. ಮೂರು ನಾಲ್ಕು ಕೆರೆಗೆ ಒಬ್ಬ ಇದ್ದರೆ ಅವನು ಯಾವ ಕೆರೆಯನ್ನು ನೋಡುವುದಿಲ್ಲ, ಮತ್ತು ಒಂದು ಕಡೆ ಇರುವುದಿಲ್ಲ. ಎಲ್ಲಿ ಕೇಳಿದರೂ ಪತ್ತೆ ಇರುವುದಿಲ್ಲ ಒಂದು ಕೆರೆಗೆ ಒಬ್ಬ ಸೌಡಿ ಇರುವಂತೆ ಏರ್ಪಾಡು ಮಾಡಿ ನೀರನ್ನು ಬಹಳ ಜಾಗ್ರತೆಯಿಂದ ಉಪಯೋಗಿಸುವುದಾದರೆ ಹೆಚ್ಚಿನ ಒಂದು ಸೌಲಭ್ಯವನ್ನು ಪಡೆಯುವುದಕ್ಕೆ ಅವಕಾಶ ಇದೆ ಪೋಲಾಗತಕ್ಕದ್ದನ್ನು ತಪ್ಪಿಸಬೇಕು ಎಂದು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ ನಮ್ಮ ಸ್ನೇಹಿತರು ಹೇಳಿದಂತೆ ದೇಶಕ್ಕೆ ಸಹಾಯ ಮಾಡತಕ್ಕಂತ ಸನ್ನಿವೇಶದಲ್ಲಿದ್ದೇವೆ. ಇದು ಒಂದು ದೇಶಸೇವೆ ಕರ್ತವ್ಯ ಎಂಬ ದೃಷ್ಟಿಯಿಂದ ಬಹಳ ಜಾಗ್ರತೆಯಿಂದ ಶ್ರದ್ಧೆಯಿಂದ ಮಾಡುವುದಾದರೆ ನಿಜವಾಗಿ ದೇಶಕ್ಕೆ ಹೆಚ್ಚಿನ ಸೇವೆ ಸಲ್ಲಿಸುವುದಕ್ಕೆ ಅವಕಾಶ ಮಾಡಬೇಕು ಎಂದು ಇಲಾಖೆಯವರನ್ನು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ ಈ ದಿವಸ ಮಾತನಾಡುವುದಕ್ಕೆ ಮಾನ್ಯ ಉಪಾಧ್ಯಕ್ಷರು ಅವಕಾಶ ಮಾಡಿಕೊಟ್ಟಿದ್ದಕ್ಕೆ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೋಣನದೂರು ಲಿಂಗಪ್ಪ.—ನಮ್ಮ ಕರ್ನಾಟಕ ಕ್ರಿಕೆಟ್ ಟೀಮಿಗೆ ಶುಭಾಶಯ ತಿಳಿಸುವುದು ಅತ್ಯಂತ ಮುಖ್ಯವಾದುದು, ಅದು ಸದನದ ಕರ್ತವ್ಯ ಅವರಿಗೆ ನಮ್ಮ ಶುಭಾಶಯಗಳನ್ನು ತಿಳಿಸಬೇಕು. ಎಂದು ಹೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ನಾವು ಎಲ್ಲರೂ ಇದಕ್ಕೆ ಧ್ವನಿಗೂಡಿಸುತ್ತೇವೆ.

MR. DEPUTY SPEAKER.—The House will stand adjourned to meet again tomorrow the 2nd April 1974 at 1 P. M.

The House adjourned at Seven minutes past six of the Clock to meet again at One of the Clock on Tuesday the 2nd April 1974.

ANNEXURE-I

THE WAKF (KARNATAKA AMENDMENT) BILL, 1974

(L. A. Bill No. 17 of 1974)

A Bill to amend the wakf Act, 1954 in its application to the State of Karnataka.

Whereas it is expedient to amend the wakf Act. 1954 Central Act 29 of 1954) in its application to the State of Karnataka for the purposes hereinafter appearing.

Be it enacted by the Karnataka Legislature in the Twenty fifth Year of the Republic of India as follows.—

I. **Short Title, Extent and Commencement** .—(1) This Act may be called the wakf (Karnataka Amendment) Act. 1974.

(2) It extends to the whole of the State of Karnataka.

(3) It shall come into force at once;

II. **Amendment of Section (3).**—in the section 3 of the wakf Act, 1954 (Central Act 29 of 1954) in clause (g).

(a) in sub-clause (i) the word 'and' at the end shall be omitted

(b) after sub clause (ii) and the proviso thereto the following sub-clauses shall be inserted, namely —

"(iii) donations given by the public for the purposes of maintenance of the orphanages or inmates thereof and for madrasas, schools and colleges,

(iv) income accuring to the wakf from Sadquat, Zakat, Khirat, and similar voluntary contributions in kind or in cash,

(v) grants received from the Government for orphanages, homes for the aged and destitutes, poor houses madrasas, schools, colleges, and Hostels."